ಉತ್ತಮಕ್ಷಮಾ

ಲೇಖಕರು :
ಜಿ. ಅಶ್ವತ್ಥನಾರಾಯಣ, ಎಂ. ಎ.,
ಕನ್ನಡ ಅಧ್ಯಾಪಕರು
ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು.

ಪ್ರಕಾಶಕರು :
ದಿ|| ಶ್ರೀಪಾಲಶೆಟ್ಟರ ಧರ್ಮಪತ್ನಿಯವರಾದ
ಶ್ರೀಮತಿ ಪದ್ಮಾವತಮ್ಮ ಮತ್ತು ಮಕ್ಕಳು
ಹೊಳಲ್ಕೆರೆ

ದಿನಾಂಕ : 11-1-1976

ಬೆಲೆ : ಶಾಸ್ತ್ರದಾನ

ಉತ್ತಮಕ್ಷಮಾ



ಲೇಖಕರು :
ಜಿ. ಅಶ್ವತ್ಥನಾರಾಯಣ, ಎಂ. ಎ., (ಕನ್ನಡ)
ಎಂ. ಎ., (ಸಮಾಜಶಾಸ್ತ್ರ), ಡಿಪ್ಲೋಮಾ (ಶಾಸನ ಶಾಸ್ತ್ರ)
ಕನ್ನಡ ಅಧ್ಯಾಪಕರು
ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು.

ಪ್ರಕಾಶಕರು :
ದಿ|| ಶ್ರೀಪಾಲಶೆಟ್ಟರ ಧರ್ಮಪತ್ನಿಯವರಾದ
ಶ್ರೀಮತಿ ಪದ್ಮಾವತಮ್ಮ ಮತ್ತು ಮಕ್ಕಳು
ಹೊಳಲ್ಕೆರೆ

ದಿನಾಂಕ :
11 - 1 - 1976

ಬೆಲೆ :
ಶಾಸ್ತ್ರದಾನ

ಉತ್ತಮಕ್ಷಮಾ

ಲೇಖಕರು :
ಜಿ. ಅಶ್ವತ್ಥನಾರಾಯಣ, ಎಂ. ಎ.,
ಕನ್ನಡ ಅಧ್ಯಾಪಕ, ಸರ್ಕಾರಿ ವಿಜ್ಞಾನ ಕಾಲೇಜು
ಬೆಂಗಳೂರು.

ಪ್ರಕಟನೆ :
ದಿನಾಂಕ: 11 – 1 – 1976

ಬೆಲೆ : **ಶಾಸ್ತ್ರದಾನ**

ಪ್ರಕಾಶಕರು :
ದಿ|| ಶ್ರೀಪಾಲಶೆಟ್ಟರ ಧರ್ಮಪತ್ನಿಯವರಾದ
ಶ್ರೀಮತಿ ಪದ್ಮಾವತಮ್ಮ ಮತ್ತು ಮಕ್ಕಳು
ಹೊಳಲ್ಕೆರೆ

ಮುದ್ರಕರು :
ಪದ್ಮಾಂಬ ಪ್ರಿಂಟರ್ಸ್,
ಸುಬ್ಬರಾಮುಚೆಟ್ಟಿ ರಸ್ತೆ,
ಬೆಂಗಳೂರು – 560004.

ಮುನ್ನುಡಿ

ಭಾದ್ರಪದಮಾಸವು ಜೈನಸಂಸ್ಕೃತಿಯ ಚಾರಿತ್ರಭೂಮಿಯಲ್ಲಿ ಮಹತ್ವವನ್ನುಳ್ಳದ್ದಾಗಿದೆ. "ಭದ್ರ" ಎಂದರೆ ಮಂಗಲಕರವಾದುದು ಎಂದರ್ಥವಾಗಿದ್ದೆ. ಚಾತುರ್ಮಾಸದ ಆಚರಣೆ ಸಮಯದಲ್ಲಿ ಬರುವ ಈ ಮಾಸದಲ್ಲಿ ಮುನಿಗಳು ಮತ್ತು ಶ್ರಾವಕರು ಹಲವಾರು ವ್ರತಗಳನ್ನು ಆಚರಿಸಿ ಆತ್ಮಶೋಧನೆಯನು ಮಾಡಿಕೊಳ್ಳುತ್ತಾರೆ. ಆ ಹಲವಾರು ವ್ರತಗಳ ಪೈಕಿ ದಶಲಕ್ಷಣಧರ್ಮವೂ ಒಂದು. ಕ್ಷಮಾ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪ, ತ್ಯಾಗ, ಆಕಿಂಚನ್ಯ ಮತ್ತು ಬ್ರಹ್ಮಚರ್ಯ ಇವು ದಶಧರ್ಮಗಳು. ಇವುಗಳ ಮುಂದೆ "ಉತ್ತಮ" ಎಂಬ ವಿಶೇಷಣವನ್ನು ಸೇರಿಸಿ ಹೇಳುವ ಸಂಪ್ರದಾಯ ರೂಢಿಯಲ್ಲಿದೆ. ಆಚರಿಸುವ ಎಲ್ಲಾ ವ್ರತಗಳು ಸಮ್ಯಕ್ತ್ವಪೂರ್ಣವಾಗಿರಬೇಕೆಂಬುದೇ ಇದರ ಉದ್ದೇಶ. ಸಮ್ಯಗ್ದರ್ಶನವು ಸಮ್ಯಕ್ತ್ವಪ್ರಾಪ್ತಿಯ ಮೊದಲನೇ ಹಂತ. ಅದು ಪ್ರಾಪ್ತಿಯಾಗದೇ ಸಮ್ಯಜ್ಞಾನದ ಲಭ್ಯವಿಲ್ಲ. ಈ ಸಮ್ಯಗ್ದರ್ಶನ ಸಮ್ಯಜ್ಞಾನಗಳ ಪ್ರಾಪ್ತಿಯಿಲ್ಲದೆ ಸಮ್ಯಕ್ಚಾರಿತ್ರವು ಪ್ರಾಪ್ತವಾಗದು. ಈ ಮೂರು ತತ್ವಗಳ ವಿಶುದ್ಧವಾದ ಆಚರಣೆಯೇ ಸಮ್ಯಕ್ತ್ವ. ಸಮ್ಯಕ್ತ್ವವನ್ನು ಪಡೆದನಂತರವೇ ವ್ರತಗಳನ್ನು ಆಚರಿಸಿದರೆ ಅದರ ಸತ್ಫಲ ಸಾಧ್ಯ. ಇಲ್ಲದಿದ್ದರೆ ವ್ಯರ್ಥ.

ವ್ರತಗಳನ್ನು ಆಚರಿಸುವಾಗ ಯಾವ ಆಡಂಬರಗಳಿರಬಾರದು. ರಾಗಾದಿ ಸಾಂಸಾರಿಕ ಭಾವಗಳಿರಬಾರದು. ಹಣವನ್ನು ಹೇರಳವಾಗಿ ವೆಚ್ಚಮಾಡಿ ತಾನು ವ್ರತವನ್ನು ಆಚರಿಸಿದೆನೆಂದು ಲೋಕದೆದುರು ತೋರಿಸಿಕೊಂಡರಾಗಲೀ, ವಿದ್ವತ್ಪೂರ್ಣವಾದ ಸಭೆಗಳಲ್ಲಿ ಈ ವ್ರತಗಳನ್ನು ಕೇವಲ ಉಪದೇಶಿಸುವುದರಿಂದಾಗಲೀ ವ್ರತಾಚರಣೆಯ ಸದುದ್ದೇಶವು ಸತ್ಪಥಗಾಮಿಯಾಗಲಾರದು. ಮನ ವಚನ ಕಾಯಗುಪ್ತಿಶುದ್ಧಿಪೂರ್ವಕವಾದ, ನಿರಾಡಂಬರವಾದ ಆಚರಣೆಯೇ ಅತೀವ ಮುಖ್ಯವಾದುದು. ಆದುದರಿಂದಲೇ ಭಗವತ್ಕುಂದಕುಂದಾಚಾರ್ಯರು ಪ್ರವಚನಸಾರದಲ್ಲಿ ಹೀಗೆ ಹೇಳಿದ್ದಾರೆ :

ಚಾರಿತ್ತಂ ಖಲುಧಮ್ಮೋ, ಧಮ್ಮೋ ಜೋ ಸೋ ಸಮೋತ್ತಿಣಿ ದ್ದಿಟ್ಠೋ ।
ಮೋಹಕ್ಖೋಹ ವಿಹೀಣೋ, ಪರಿಣಾಮೋ ಅಪ್ಪಣೋಹು ಸಮೋ ॥

ಚಾರಿತ್ರವು ಸಾಕ್ಷಾತ್ ಧರ್ಮವಾಗಿದೆ. ಮೋಹ, ರಾಗ, ದ್ವೇಷ ಮೊದಲಾದ ವಿಕಾರಗಳನ್ನುಂಟುಮಾಡುವ ಪರಿಣಾಮಗಳನ್ನು ದೂರಮಾಡುವ ಆತ್ಮನ ಭಾವವು ಸಮ್ಯಕ್ತ್ವವೆನಿಸುತ್ತದೆ. ಅದೇ ಸಮ್ಯಕ್ಚಾರಿತ್ರವಾಗುತ್ತದೆ.

ಈ ಚಾರಿತ್ರದ ಆಚರಣೆಯ ಪರಿಶುದ್ಧತೆಗೆ ಉತ್ತಮಕ್ಷಮಾದಿ ದಶ ಧರ್ಮಗಳು ಪೂರಕವಾಗಿದೆ. ಇವುಗಳಲ್ಲಿ ಈ ಚಿಕ್ಕ ಪುಸ್ತಕದಲ್ಲಿ "ಉತ್ತಮ ಕ್ಷಮಾ" ಎಂಬ ಧರ್ಮದ ವಿಚಾರವನ್ನು ಕುರಿತು ಸಮಾಲೋಚಿಸಲಾಗಿದೆ. ಈ ಸಮಾಲೋಚನೆಯನ್ನು ವಿವಿಧ ಕೃತಿಗಳ ಪರಿಶೀಲನೆಯಿಂದ ಮಾಡಿರುವವರು ಶ್ರೀ ಜಿ. ಅಶ್ವತ್ಥನಾರಾಯಣರವರು. ಅವರು ಪ್ರೌಢಶಾಲೆಯಲ್ಲಿ ನನ್ನ ವಿದ್ಯಾರ್ಥಿಯಾಗಿದ್ದವರು. ಆಗ ನಿಜಕ್ಕೂ ಪ್ರತಿಭಾಶಾಲಿಯಾದ ವಿದ್ಯಾರ್ಥಿಯೆನಿಸಿದ್ದರು. ಈಗ ಅವರು ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರೂ ಅದೇ ವಿನಯ, ಸೌಜನ್ಯ ವಿಶ್ವಾಸಗಳನ್ನು ಅನುಸರಿಸಿಕೊಂಡೇ ಬರುತ್ತಿರುವುದು ಶ್ಲಾಘ್ಯವಾಗಿದೆ. ವಿಚಾರ ಜಿಜ್ಞಾಸುಗಳಾದ ಇವರಿಗೆ ಜೈನಧರ್ಮದಲ್ಲಿ ಅಭಿರುಚಿ ಮತ್ತು ಗೌರವಗಳಿರುವುದು ಇವರ ಉತ್ತಮ ಸಂಸ್ಕೃತಿಯ ಚಿಹ್ನೆಯಾಗಿದೆ. ಸಮ್ಯಕ್ಪಥದತ್ತ ಇವರ ಒಲವು ಇತೋಪ್ಯತಿಶಯವಾಗಿ ನಿರಂತರ ವೃದ್ಧಿಸಲೆಂದು ಹಾರೈಸುತ್ತೇನೆ.

ಈ ಪುಸ್ತಕವನ್ನು ಹೊಳಲ್ಕೆರೆಯ ಪ್ರಸಿದ್ಧ ಮನೆತನದ ದಿ॥ ಶ್ರೀಪಾಲ ಶೆಟ್ಟರ ಸ್ಮರಣಾರ್ಥವಾಗಿ ಅವರ ಧರ್ಮಪತ್ನಿ ಶ್ರೀಮತಿ ಪದ್ಮಾವತಮ್ಮ ಮತ್ತು ಮಕ್ಕಳು ಪ್ರಕಟಿಸಿರುವುದು ಸಮಯೋಚಿತವಾದ ಧಾರ್ಮಿಕ ವಿವೇಚನೆಯಾಗಿದೆ. ಜೈನಸಂಸ್ಕೃತಿಯಲ್ಲಿ ಶಾಸ್ತ್ರದಾನಕ್ಕೆ ಅತೀವ ಮಹತ್ವವಿದೆ. ಶ್ರೀಪಾಲಶೆಟ್ಟರವರು ಸಾರ್ಥಕವಾದ ಬಾಳನ್ನು ಬಾಳಿ ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ ದಿವಂಗತರಾದರು. ಅವರು ತಮ್ಮ ಜೀವನದುದ್ದಕ್ಕೆ ಸಮ್ಯಕ್ ಪಥಗಾಮಿಗಳಾಗಿದ್ದರು. ಜಿನಧರ್ಮದ ಸೇವೆಯಲ್ಲಿಯೆ ಬಾಳನ್ನು ಸವೆಸಿದವರು. ಜಿನಧರ್ಮ ಪ್ರಭಾವನೆಯ ಹಲವಾರು ಧಾರ್ಮಿಕಕ್ರಿಯೆಗಳನ್ನು

ಹೃದಯಪೂರ್ವಕವಾಗಿ ಮಾಡಿದವರು. ಹೊಳಲ್ಕೆರೆಯ ಜಿನಮಂದಿರದಲ್ಲಿ ಪಂಚಕಲ್ಯಾಣವನ್ನು ಅಗ್ರೇಸರರಾಗಿ ನಿಂತು ಮಾಡಿಸಿ ಅರ್ಹದ್ಧರ್ಮವನ್ನು ಬೆಳಗಿಸಿದವರು. ಕೊನೆಯುವರೆಗೂ ಆ ಜಿನಮಂದಿರದಲ್ಲಿ ಧರ್ಮಸೇವೆಗಳನ್ನು ನಡೆಸುವುದರಲ್ಲಿ ತತ್ಪರರಾಗಿದ್ದವರು.

ಶ್ರೀಯುತ ಶ್ರೀಪಾಲಶೆಟ್ಟರು ಕೊಪ್ಪಳದ ಶ್ರೇಷ್ಠಿವಂಶದವರು. ದಿ॥ ಶ್ರೀ ೧೦೮ ಸ್ಯಾದ್ವಾದಕೇಸರಿ ಶ್ರೀ ಪಾಯಸಾಗರಮುನಿಗಳು ಇವರಿಗೆ ಮಾರ್ಗ ದರ್ಶಕರಾಗಿದ್ದರು. ಇವರ ಧರ್ಮಪತ್ನಿ ಶ್ರೀಮತಿ ಪದ್ಮಾವತಮ್ಮನವರು ತಮ್ಮ ಪಾತಿವ್ರತ್ಯಧರ್ಮದಿಂದ ಇವರ ಬಾಳಿನ ಆಧಾರಸ್ತಂಭವಾಗಿದ್ದರು.

ಇವರಿಗೆ ಪಾರ್ಶ್ವನಾಥಯ್ಯ, ನೇಮಿನಾಥಯ್ಯ, ಸುರೇಂದ್ರನಾಥಯ್ಯ, ಮದನಕೇಸರಿ, ವಸಂತಕುಮಾರ್, ವಿಜಯಕುಮಾರ್, ಸಂಪತ್‌ಕುಮಾರ್ ಎಂಬ 7ಜನ ಗಂಡುಮಕ್ಕಳೂ, ವಿನೋದಮ್ಮ, ವಿಮಲಮ್ಮ, ಪ್ರೇಮ ಕುಮಾರಿ, ವರಮಹಾಲಕ್ಷ್ಮಿ ಎಂಬ 4 ಜನ ಹೆಣ್ಣುಮಕ್ಕಳೂ, ಸಹ ತಂದೆ ಯಿಕೆ ಉತ್ತಮ ಸಂಸ್ಕೃತಿಯನ್ನು ಹೊಂದಿ ಯಶಸ್ವಿಗಳಾಗುತ್ತಿದ್ದಾರೆ. ಶ್ರೀಯುತರನ್ನು ಕಳೆದುಕೊಂಡು ಅವರ ಕುಟುಂಬದವರಿಗೆ ಮಾತ್ರ ನಷ್ಟ ವಾಗಿಲ್ಲ, ಜೈನಸಮಾಜವೇ ಒಬ್ಬ ಧಾರ್ಮಿಕವ್ಯಕ್ತಿಯನ್ನು ಕಳೆದುಕೊಂಡಂತಾ ಗಿದೆ. ಈ ನಷ್ಟವನ್ನು ಸಹಿಸಿ, ಅವರ ಮಕ್ಕಳಾದ ಶ್ರೀ ಪಾರ್ಶ್ವನಾಥಯ್ಯ ಸಹೋದರ ಸಹೋದರಿಯರು ಪಿತೃವು ನಿರ್ದೇಶಿಸಿರುವ ಸಮ್ಯಕ್ತ್ವಮಾರ್ಗದಲ್ಲಿ ಮುಂದಡಿಯಿಟ್ಟು ಶ್ರೇಯಸ್ಸನ್ನು ಪಡೆಯಲೆಂದು ಹಾರೈಸುತ್ತೇನೆ.

ಈ ಪುಸ್ತಕಕ್ಕೆ ಮುನ್ನುಡಿ ಬರೆಯಲು ಅವಕಾಶವಿತ್ತು ಗೌರವಿಸಿದ, ಶ್ರೀ ಜಿ. ಅಶ್ವತ್ಥನಾರಾಯಣ ಅವರಿಗೂ ಶ್ರೀ ಹೆಚ್. ಎಸ್. ನೇಮಿನಾಥಯ್ಯ ನವರಿಗೂ ಧನ್ಯವಾದಗಳನ್ನು ಹೇಳುತ್ತೇನೆ. ಈ ಪುಸ್ತಕದ ಉಪಯೋಗವನ್ನು ಧಾರ್ಮಿಕ ಬಂಧುಗಳು ಪಡೆಯುತ್ತಾರೆಂದು ಆಶಿಸಿದ್ದೇನೆ.

ತಾ॥ 6 – 1 – 1975
33/1, 4ನೇ ಬ್ಲಾಕ್
ತ್ಯಾಗರಾಜನಗರ, ಬೆಂಗಳೂರು.

ಡಿ. ಪದ್ಮನಾಭಶರ್ಮ, ಭುವನಹಳ್ಳಿ
ವಾಣೀವಿಲಾಸ್ ಜೂನಿಯರ್ ಕಾಲೇಜ್
ಬೆಂಗಳೂರು.

ಲೇಖಕನ ಅರಿಕೆ

ದಿನಾಂಕ 10 – 9 –1975 ರಂದು ಮಹಾವೀರ ಮಿಶನ್ನಿನ ಆಶ್ರಯದಲ್ಲಿ ಏರ್ಪಟ್ಟ ದಶಲಕ್ಷಣಪರ್ವದ 10 ದಿನಗಳ ಕಾರ್ಯಕ್ರಮದಲ್ಲಿ ಮೊದಲನೆಯ ದಿವಸ ಉತ್ತಮಕ್ಷಮಾಧರ್ಮದ ಬಗ್ಗೆ ಮಾಡಿದ ಭಾಷಣ ಮತ್ತು ಆ ಬಗ್ಗೆ ಸಿದ್ಧಪಡಿಸಿದ ಟಿಪ್ಪಣಿಗಳ ವಿಸ್ತೃತರೂಪವೇ ಈ ಗ್ರಂಥವಾಗಿದೆ.

ಈ ಗ್ರಂಥವು ಉತ್ತಮಕ್ಷಮಾಧರ್ಮದ ಬಗ್ಗೆ ವಿಷಯಸಂಗ್ರಹ ಮತ್ತು ಪರಿಚಯ ನೀಡುವ ಪುಟ್ಟ ಪುಸ್ತಕವಾಗಿದೆ. ಇದರಲ್ಲಿ ನಾಲ್ಕು ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯ "ದಶಲಕ್ಷಣಪರ್ವದ ಮಹತ್ವದ ಬಗ್ಗೆ ಸಮಗ್ರ ಪರಿಚಯವನ್ನು ಕುರಿತದ್ದು. 'ದಿವ್ಯಧ್ವನಿ' ವಿಶೇಷ ಸಂಚಿಕೆಗಾಗಿ ಸಿದ್ಧಪಡಿಸಿದ ಲೇಖನವಾಗಿದ್ದು ಅದನ್ನಿಲ್ಲಿ ಪೀಠಿಕೆಯಾಗಿ ಪ್ರಕಟಿಸಿದೆ. ಎರಡನೆಯ ಅಧ್ಯಾಯ ದಶಲಾಕ್ಷಣಿಕ ನೋಂಪಿಯ ಕಥೆಯ ಪರಿಚಯವಾಗಿದೆ. ಹಳಗನ್ನಡ ರೂಪದಲ್ಲಿದ್ದ ಪರಂಪರಾಗತ ಕಥೆಯನ್ನು ಹೊಸಗನ್ನಡದಲ್ಲಿ ಕೊಡಲಾಗಿದೆ. ವ್ರತದದಿನ ಎಲ್ಲರೂ ಓದಿ ತಿಳಿಯಲು ಸುಲಭವಾಗಲಿ ಎಂಬ ಉದ್ದೇಶದಿಂದ ಹೀಗೆ ಮಾಡಿದೆ. ಮೂರನೆಯ ಅಧ್ಯಾಯ ದಶಲಕ್ಷಣ ನೋಂಪಿಯ ಆಚರಣೆ ಬಗ್ಗೆ ಕೆಲವು ವಿವರಗಳನ್ನು ನೀಡುತ್ತದೆ. ಧರ್ಮಾಭಿಮಾನಿಗಳಿಗೆ ಈ ಪರ್ವದ ಧಾರ್ಮಿಕ ವಿಧಾನದ ಲಘು ಪರಿಚಯವನ್ನು ನೀಡುವುದಷ್ಟೇ ಇಲ್ಲಿಯ ಗುರಿಯಾಗಿದೆ. ನಾಲ್ಕನೆಯ ಅಧ್ಯಾಯ ಉತ್ತಮಕ್ಷಮಾಧರ್ಮದ ಸ್ವರೂಪ, ಮಹತ್ವ, ಉಪಯೋಗ ಇತ್ಯಾದಿ ಅಂಶಗಳನ್ನು ವಿಸ್ತೃತವಾಗಿ ನಿರೂಪಿಸುತ್ತದೆ. ಕ್ಷಮಾಧರ್ಮವನ್ನು ಎಲ್ಲಾ ಧರ್ಮಗಳು ಎತ್ತಿಹಿಡಿದಿರುವುದರಿಂದ ಆ ಬಗ್ಗೆ ಸುಂದರ ಸೂಕ್ತಿ–ಸಂಗತಿಗಳು ಅನೇಕಕಡೆ ದೊರಕುವುದರಿಂದ ಇಲ್ಲಿ ಕೇವಲ ಜೈನ – ಶಾಸ್ತ್ರಗಳನ್ನಷ್ಟೇ ಗಮನಿಸದೆ ಉಳಿದ ಧರ್ಮಗಳ ಹಾಗೂ ಸಾಹಿತ್ಯಗ್ರಂಥಗಳಿಂದ ಧಾರಾಳವಾಗಿ ವಿಷಯ ಸಂಗ್ರಹಮಾಡಿದೆ.

ಈ ನಾಲ್ಕು ಅಧ್ಯಾಯಗಳು ದಶಪರ್ವಲಕ್ಷಣದ ಬಗ್ಗೆ ಐತಿಹಾಸಿಕ, ಸಾಹಿತ್ಯಿಕ, ಧಾರ್ಮಿಕ ಮತ್ತು ವೈಚಾರಿಕ ಹಿನ್ನೆಲೆಯನ್ನು ನೀಡುತ್ತವೆ. ಎಂದು ಭಾವಿಸಿದ್ದೇನೆ. ಮತ್ತು ಕನ್ನಡದಲ್ಲಿ ದಶಲಕ್ಷಣಪರ್ವದ ಬಗ್ಗೆ ಅಮೋಲ ದಶಧರ್ಮ, ರತ್ನಕರಂಡಕಶ್ರಾವಕಾಚಾರದಂತಹ ಒಂದೆರಡು ಗ್ರಂಥಗಳೂ

ಇನ್ನು ಕೆಲವು ಸಣ್ಣಪುಟ್ಟ ಗ್ರಂಥಗಳನ್ನೂ ಲೇಖನಗಳನ್ನೂ ಬಿಟ್ಟರೆ ಈ ಬಗ್ಗೆ ವಿಸ್ತೃತ ಸಮಗ್ರ ವಿವೇಚನೆಯ ಗ್ರಂಥಗಳೇ ಇಲ್ಲ. ಅದರಲ್ಲೂ ದಶಧರ್ಮ ಗಳಲ್ಲಿ ಒಂದೊಂದರ ಬಗ್ಗೆಯಂತೂ ಪ್ರತ್ಯೇಕ ಗ್ರಂಥಗಳು ಇಲ್ಲವೆನ್ನಬಹುದು. ಉತ್ತಮಕ್ಷಮಾ ಧರ್ಮಗ್ರಂಥ ಈ ಕೊರತೆಯನ್ನು ನಿವಾರಿಸುವುದರಲ್ಲಿ ಮೊದಲ ಗ್ರಂಥವೆಂದು ಭಾವಿಸಿದ್ದೇನೆ. ಈ ಗ್ರಂಥರಚನೆಗೆ ಅನೇಕ ಗ್ರಂಥಗಳ ನೆರ ವನ್ನು ಪಡೆದಿದ್ದೇನೆ. ಆ ಗ್ರಂಥಕರ್ತರೆಲ್ಲರಿಗೂ ಕೃತಜ್ಞನಾಗಿದ್ದೇನೆ. ನಾನು ಬಳಸಿದ ಗ್ರಂಥ–ಲೇಖನ ಪಟ್ಟಿಯನ್ನು ಕೊನೆಯಲ್ಲಿ ಕೊಟ್ಟಿರುವೆ. ಗ್ರಂಥ ರಚನೆಯ ಕಾಲದಲ್ಲಿ ಮಾರ್ಗದರ್ಶನಮಾಡಿದ ಪೂಜ್ಯ ಶ್ರೀ ಡಿ. ಪದ್ಮನಾಭ ಶರ್ಮರಿಗೂ ಪ್ರೋತ್ಸಾಹನೀಡಿದ ಮಿತ್ರ ಜಯಚಂದ್ರರಿಗೂ ಇತರ ಮಿತ್ರರಿಗೂ ಸ್ಫೂರ್ತಿ – ನೆರವು ನೀಡಿದ ಸಹಧರ್ಮಿಣಿ ಎಂ. ಆರ್. ಲಕ್ಷ್ಮೀದೇವಿಗೂ ನಾನು ಆಭಾರಿ ಆಗಿದ್ದೇನೆ.

ಉತ್ತಮಕ್ಷಮಾಧರ್ಮದ ಬಗ್ಗೆ ಭಾಷಣಮಾಡಲು ಗ್ರಂಥ ಬರೆಯಲು ಮೂಲ ಪ್ರೇರಕರು ಸನ್ಮಿತ್ರರೂ ಸಹೃದಯರೂ ಆದ ಶ್ರೀ ಹೆಚ್. ಎಸ್. ನೇಮಿನಾಥಯ್ಯನವರೇ ಈ ಗ್ರಂಥವನ್ನು ಪ್ರಕಟಿಸಿದ್ದಾರೆ. ಅವರಿಗೆ ನನ್ನ ವಂದನೆಗಳು. ಈ ಗ್ರಂಥದ ಐನೂರು ಪ್ರತಿಗಳನ್ನು ಅವರು 27–12–75 ರಂದು ದಿವಂಗತರಾದ ಪೂಜ್ಯ ತಂದೆಯವರಾದ ಹೊಳಲ್ಕೆರೆಯ ಜಿ. ಎಸ್. ಶ್ರೀಪಾಲಶೆಟ್ಟರ ಹೆಸರಿನಲ್ಲಿ 11–1–76 ತಾಯಿಯವರ ಪರವಾಗಿ ಶಾಸ್ತ್ರದಾನ ವಾಗಿ ವಿತರಣೆ ಮಾಡಿದ್ದಾರೆ. ಅವರ ತಂದೆಯವರು ಜಿನಭಕ್ತರೂ ಉದಾರಿ ಗಳೂ ಸದ್ಗೃಹಸ್ಥರೂ ಸರಳಜೀವಿಗಳೂ ಲೋಕೋಪಕಾರಿಗಳೂ ಆಗಿದ್ದರು. ತುಂಬು ಕುಟುಂಬದಿಂದ ಧನ್ಯಜೀವನ ನಡೆಸಿ ಆದರ್ಶ ಮಕ್ಕಳನ್ನು ಪಡೆದವ ರಾಗಿದ್ದರು. ಇಂತಹವರ ಹೆಸರಿನಲ್ಲಿ ಈ ಗ್ರಂಥ ಶಾಸ್ತ್ರದಾನವಾದುದ್ದು ಸ್ತುತ್ಯವಾಗಿದೆ. ಸಹೃದಯರು ಈ ಗ್ರಂಥದಲ್ಲಿ ಲೋಪದೋಷ ಇದ್ದಲ್ಲಿ ತಿಳಿಸ ಬೇಕಾಗಿ ಬಿನ್ನಹ.

ತಾ|| 8 – 11 – 1976 **ಜಿ. ಅಶ್ವತ್ಥನಾರಾಯಣ**

ಪ್ರಕಾಶಕರ ಮಾತು

ನನ್ನ ಪೂಜ್ಯ ಪತಿಯವರಾದ ಶ್ರೀಪಾಲಶೆಟ್ಟರು ಆಕಸ್ಮಿಕವಾಗಿ ದಿನಾಂಕ 27 – 12 – 1975ನೇ ಶನಿವಾರ ಸಂಜೆ 6–55ಕ್ಕೆ ಹೃದಯಸ್ತಂಭನದಿಂದ ದಿವಂಗತರಾದರು. ಅವರು ನನಗೆ ಆಧಾರಸ್ತಂಭರಾಗಿದ್ದು ಮಕ್ಕಳಿಗೆ ಮಾರ್ಗದರ್ಶಕರಾಗಿದ್ದರು. ಊರಿನಲ್ಲೂ ಜನಸೇವೆಯಿಂದಲೂ ಜಿನಧರ್ಮದ ಸೇವೆಯಿಂದಲೂ ಲೋಕೋಪಕಾರಿಗಳಾಗಿದ್ದರು. ಹೀಗೆ ಕುಟುಂಬಕ್ಕೆ, ಮಿತ್ರರಿಗೆ, ಊರಿನ ಜನರಿಗೆ, ಧರ್ಮಾಭಿಮಾನಿಗಳಿಗೆ ತುಂಬ ಬೇಕಾದ ವ್ಯಕ್ತಿಗಳಾಗಿದ್ದು ಎಲ್ಲರ ಪ್ರೀತಿ ವಿಶ್ವಾಸಗಳನ್ನು ಗಳಿಸಿದ್ದರು. ಅವರು ಧಾರ್ಮಿಕರಾಗಿದ್ದುದಷ್ಟೇ ಅಲ್ಲದೆ ಸಹೃದಯರೂ, ಸಾಹಿತ್ಯ ಅಭ್ಯಾಸಿಗಳೂ ಆಗಿದ್ದರು. ಧರ್ಮಗ್ರಂಥಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದವರೂ ಧಾರ್ಮಿಕ ವಿಧಿಗಳಲ್ಲಿ ಶಾಸ್ತ್ರೋಕ್ತವಾಗಿ ಆಚರಣೆಯಲ್ಲಿಟ್ಟುಕೊಂಡು ಉಳಿದವರಿಗೆ ಮಾದರಿಯಾಗಿದ್ದರು. ಅವರ ಧರ್ಮ ಪ್ರಭಾವನೆ ಅವರ ಮಕ್ಕಳಲ್ಲಿ ಕೂಡ ಆಚರಣೆಗೆ ಬಂದಿದೆ. ಹೀಗೆ ತಾವೇ ಧಾರ್ಮಿಕರಾಗಿದ್ದು ಮಕ್ಕಳೂ ಧಾರ್ಮಿಕರೆನ್ನಿಸಿ, ಎಲ್ಲ ಧಾರ್ಮಿಕರಿಗೂ ಆತ್ಮೀಯರಾಗಿದ್ದ ನನ್ನ ಪೂಜ್ಯ ಪತಿಯವರ ಹೆಸರಿನಲ್ಲಿ ಧರ್ಮವಿಚಾರಕ್ಕೆ ಸಂಬಂಧಿಸಿದ, ಈ ಉತ್ತಮಕ್ಷಮಾಧರ್ಮ ಗ್ರಂಥವನ್ನು ಶಾಸ್ತ್ರದಾನ ಮಾಡಲಾಗಿದೆ. ಇದು ಧಾರ್ಮಿಕರಿಗೆ, ಅಧ್ಯಯನಶೀಲರಿಗೆ ಉಪಯುಕ್ತವಾಗಿದೆ ಎಂದು ಭಾವಿಸಿದೆ.

ಈ ಗ್ರಂಥವನ್ನು ಜಿನಧರ್ಮಾಭಿಮಾನಿಗಳೂ, ಜಿನಧರ್ಮದ ವಿಷಯಗಳ ಬಗ್ಗೆ ಉತ್ತಮ ಭಾಷಣಕಾರರೂ ಆದ, ಬೆಂಗಳೂರು ಸರ್ಕಾರಿ ವಿಜ್ಞಾನ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ಜಿ. ಅಶ್ವತ್ಥನಾರಾಯಣ ಅವರು ಪರಿಶ್ರಮವಹಿಸಿ ಬರೆದುಕೊಟ್ಟಿದ್ದಾರೆ. ಅವರಿಗೆ ವಂದನೆಗಳು. ಇದೇ ರೀತಿ ಭುವನಹಳ್ಳಿ ಡಿ. ಪದ್ಮನಾಭಶರ್ಮರು ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿದ್ದಾರೆ. ಅವರಿಗೆ ನಾವು ಕೃತಜ್ಞರಾಗಿದ್ದೇವೆ.

ದಿನಾಂಕ !
11 – 1 – 1976

ಪದ್ಮಾವತಮ್ಮ ಮತ್ತು ಮಕ್ಕಳು
ಹೊಳಲ್ಕೆರೆ



ಭಗವಾನ್ ಶ್ರೀ ಬಾಹುಬಲಿಸ್ವಾಮಿ



ಶ್ರೀ ಪದ್ಮಾವತಿದೇವಿ

ದಿ|| ಶ್ರೀ ಜಿ. ಎಸ್. ಶ್ರೀಪಾದಭಟ್ಟ
ಹೊಳಲ್ಕೆರೆ

ಜನನ: ತಾ|| 6 – 1 – 1906   ಮರಣ: ತಾ|| 27 – 12 – 1975



ಅರ್ಪಣೆ

ನಮ್ಮನ್ನು ಸಾಕಿ ಸಲಹಿದ ಪೂಜ್ಯ ತಂದೆಯವರ ದಿವ್ಯ
ನಾಮಸ್ಮರಣೆಗಾಗಿ ಈ ಕೃತಿಯನ್ನು ಕೃತಜ್ಞತಾ
ಪೂರ್ವಕವಾಗಿ ಸಮರ್ಪಿಸುತ್ತೇವೆ.

—ಮಕ್ಕಳು.



ದಿ|| ಜಿ. ಎಸ್. ಶ್ರೀಪಾಲಶೆಟ್ಟರು ಮತ್ತು ಅವರ ಧರ್ಮಪತ್ನಿ
ಶ್ರೀಮತಿ ಪದ್ಮಾವತಮ್ಮ ಹೊಳಲ್ಕೆರೆ

ದಶಲಕ್ಷಣಪರ್ವದ

ಉತ್ತಮ ಕ್ಷಮಾಧರ್ಮ

ಅಧ್ಯಾಯ ೧

ದಶಲಕ್ಷಣಪರ್ವದ ಮಹತ್ವ

ಹಬ್ಬ ಮತ್ತು ಪರ್ವ

ಜಗತ್ತಿನ ಎಲ್ಲ ಜನಾಂಗಗಳಲ್ಲೂ ಹಬ್ಬ - ಹರಿದಿನ, ವ್ರತ - ಉಪವಾಸ. ಜಾತ್ರೆ - ತೇರು, ಯಾತ್ರೆ - ಮಹೋತ್ಸವ, ಮೆರವಣಿಗೆ - ಕುಣಿತ, ಸಂಗೀತ - ನರ್ತನ, ಪೂಜೆ - ಭಜನೆ ಮೊದಲಾದವು ಅಸ್ತಿತ್ವದಲ್ಲಿವೆ. ಇವುಗಳಲ್ಲಿ ಬಹುಪಾಲಿನವು ವಿಶೇಷವಾಗಿ ಸಾಮಾಜಿಕ ಜೀವಿಯಾದ ಮಾನವನು ನಿತ್ಯಜೀವನದಲ್ಲಿ ಬಳಲಿ ಬೇಸತ್ತಾಗ, ಅಂತರಂಗದಲ್ಲಿ ಬಾಳು ನೀರಸವೆನಿಸಿದಾಗ, ದುಡಿಮೆಯ ಬದುಕು ಯಾಂತ್ರಿಕವಾಗಿ ಉತ್ಸಾಹ ಕುಗ್ಗಿದಾಗ, ನವಚೇತನೋತ್ಸಾಹ ತಳೆದು ನಗೆ–ನಲಿವುಗಳಿಂದ ಸಡಗರದಿಂದಿರಲು ಸಂತೋಷ ಹೊಂದಲು ಮೀಸಲಾಗಿವೆ. ಸುಗ್ಗಿಯ ಹಬ್ಬಗಳು, ಊರ ಜಾತ್ರೆಗಳು ಇದಕ್ಕೊಂದು ನಿದರ್ಶನವೆನ್ನಬಹುದು.

ಆದರೆ ಕೇವಲ ಮನೋಲ್ಲಾಸ-ಸಾಮಾಜಿಕ ಸಂಭ್ರಮಗಳಿಗಷ್ಟೇ ಅಲ್ಲದೆ ನೈತಿಕ ಆಚರಣೆಯ ಧಾರ್ಮಿಕ ಪರಂಪರೆಯ ಅನೇಕ ವ್ರತಾಚಾರಗಳು ಎಲ್ಲ ಜನಾಂಗಗಳಲ್ಲೂ ಉಂಟು. ಈ ಬಗೆಯ ಹಬ್ಬಗಳಲ್ಲಿ

ಅನೇಕ ಸಲ, ಧರ್ಮ ಜ್ಞಾನಪ್ರಸಾರ, ಆತ್ಮೋನ್ನತಿಗೆ ಅವಕಾಶವೂ ಆಡಂಬರ - ರಹಿತ ಸಾತ್ತ್ವಿಕ ಆಚಾರಗಳಿಗೆ ಪ್ರಾಶಸ್ತ್ಯವೂ ಸಿಗುವುದಕ್ಕಿಂತ ಬಯಲಾಡಂಬರದ ಪ್ರದರ್ಶನಕ್ಕೆ ಪ್ರಾಧಾನ್ಯ ದೊರಕಿರುತ್ತದೆ. ಇದರ ಫಲವಾಗಿ ಸಾಮಾಜಿಕವಾಗಿ ಸರಳಾಚರಣೆಯಿಂದ ಕೂಡಿ, ಆತ್ಮೋನ್ನತಿಗೆ ನೆರವಾಗಿ, ಧಾರ್ಮಿಕವಾಗಿ ಧರ್ಮಸಾಧನವೆನಿಸಿ ಆಧ್ಯಾತ್ಮಿಕ ಹಿನ್ನೆಲೆಯನ್ನು ವಿಶೇಷವಾಗುಳ್ಳ ವಿಶಿಷ್ಟ ಸಾರ್ವತ್ರಿಕ ಹಬ್ಬಗಳು ಅತ್ಯಪೂರ್ವ.

ಇಂತಹ ಅಪೂರ್ವ - ಪರ್ವ - ಹಬ್ಬವೆಂದರೆ ದಶಲಕ್ಷಣಪರ್ವ. ಸಾಮಾಜಿಕವಾಗಿ ಸರಳವಾದ ಸದ್ಧರ್ಮ ಲಕ್ಷಣಗಳಿಂದ ಕೂಡಿದ ಮಾನವ ಕಲ್ಯಾಣಕ್ಕೆ ಕಾರಣವಾಗಿ, ಆತ್ಮೋನ್ನತಿಗೆ ಆಧಾರಭೂತವಾದ ಈ ಪರ್ವ ಸಕಲ ಧರ್ಮೀಯರು ಆಚರಿಸಲು ಯೋಗ್ಯವಾಗಿ ವಿಶ್ವಧರ್ಮದ ಲಕ್ಷಣಗಳಿಂದ ಕೂಡಿದೆ.

ಹಬ್ಬಗಳಿಗೂ ಪರ್ವಗಳಿಗೂ ಸ್ವಲ್ಪ ಅಂತರವಿರುವುದನ್ನು ಕಾಣುತ್ತೇವೆ. ಸಾಮಾನ್ಯ ಅರ್ಥದಲ್ಲಿ ಹಬ್ಬ ಮತ್ತು ಪರ್ವವನ್ನು ಒಂದೇ ಎಂದು ಭಾವಿಸಿದ್ದರೂ ವಿಶೇಷಾರ್ಥದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಹಬ್ಬಗಳಲ್ಲಿ ಸಂತೋಷ–ಸಂಭ್ರಮಗಳೇ ಪ್ರಧಾನವಾದರೆ ಪರ್ವಗಳಲ್ಲಿ ಆತ್ಮಶುದ್ಧಿ ವ್ರತೋಪವಾಸ, ಪೂಜೆ - ಪಠಣಗಳೇ ಪ್ರಧಾನ. ಹಬ್ಬಗಳಲ್ಲಿ ಸಾಮಾಜಿಕ ಪದ್ಧತಿಗಳಿಗೆ ಮಹತ್ವ ಹೆಚ್ಚು ; ಪರ್ವಗಳಲ್ಲಿ ವ್ಯಕ್ತಿತ್ವದ ಉನ್ನತಿಗೆ ಪ್ರಾಧಾನ್ಯವಿದೆ.'ಜೈನ ಧರ್ಮ'ಗ್ರಂಥದಲ್ಲಿ ಪರ್ವದ ಲಕ್ಷಣವನ್ನು ಮಿರ್ಜಿ ಅಣ್ಣಾರಾಯರು ಹೀಗೆ ಉಲ್ಲೇಖಿಸಿದ್ದಾರೆ : " ವರ್ಷದಲ್ಲಿ ಕೆಲವೊಂದು ಕಾಲವನ್ನು ಮಾನುಷಜೀವನಕ್ಕೆ ಅನುಕೂಲವಾದ ವಾತಾವರಣವನ್ನು ಕಲ್ಪಿಸಿ ಕೊಡುವುದಕ್ಕಾಗಿ ಜೈನ ದರ್ಶನವು ಮೀಸಲಾಗಿಟ್ಟಿದೆ. ಇಂಥ ನಿರ್ದಿಷ್ಟ ದಿನಗಳಿಗೆ ಪರ್ವದಿನ

ಗಳೆಂದು ಜೈನ ಪರಿಭಾಷೆಯಲ್ಲಿ ಹೇಳಬಹುದು....ಕಬ್ಬಿನಲ್ಲಿರುವ ಗಂಟು ಗಳಿಗೆ ಪರ್ವವೆಂದು ಹೆಸರು. ಆ ಪರ್ವವನ್ನು ಕ್ರಿಮಿಯು ಕೆಡಿಸ ದಿದ್ದರೆ ಆ ಕಬ್ಬು ಮಾತ್ರ ಮೊಳಕೆಯೊಡೆಯಲಿಕ್ಕೆ ಸಮರ್ಥವಾಗು ವುದು. ಅದರಂತೆ ಮಾನವನ ದಿನ ವ್ಯವಹಾರವು - ರಾಗಾದಿಭಾವ ಮಿಶ್ರಿತ ವ್ಯವಹಾರವು - ಆದರ್ಶ ಜೀವನಕ್ಕೆ ಹುಳು ಹತ್ತಿದಂತೆ ಇರು ತ್ತವೆ. ಆದರೂ ಅದರಲ್ಲಿಯ ಪರ್ವದಿನಗಳನ್ನು ಮಾತ್ರ ಜನಸಾಮಾ ನ್ಯರು ವ್ಯರ್ಥವಾಗಿ ಹೋಗಗೊಡಬಾರದು. ಯಾಕೆಂದರೆ ಈ ಪರ್ವ ಗಳಲ್ಲಿಯ ಪವಿತ್ರ ಜೀವನವೇ ಮುಂದಿನ ಅಖಂಡ ಆದರ್ಶ ಜೀವನದ ಬೀಜವಾಗಿದೆ".

ಧರ್ಮಕ್ಕೂ ಪರ್ವಕ್ಕೂ ವಿಶೇಷವಾದ ಸಂಬಂಧವಿದೆ. ಧರ್ಮದ ಉತ್ಥಾನದಿಂದಲೇ ಮಾನವನ ಉತ್ಥಾನವಾಗುತ್ತದೆ. "ಬಾವಿ ತೋಡುವವನು ಹೆಜ್ಜೆಹೆಜ್ಜೆಗೂ ಕೆಳಗಿಳಿಯುತ್ತಾನೆ. ಮನೆ ಕಟ್ಟು ವವನು ಪ್ರತಿ ಇಟ್ಟಿಗೆಗೆ ಮೇಲೆ ಮೇಲೆ ಹೋಗುತ್ತಾನೆ. ಧರ್ಮ ಒಂದು ಮಂದಿರದ ನಿರ್ಮಾಣವಿದ್ದಹಾಗೆ. ಇದನ್ನು ಕೈಗೊಂಡವರು ಪ್ರತಿ ಕ್ಷಣಕ್ಷಣಕ್ಕೂ ಮೇಲೆ ಮೇಲೆ ಹೋಗುತ್ತಿರುತ್ತಾರೆ" ದಶಲಕ್ಷಣ ಪರ್ವವು ಹೀಗೆ ಮಾನವನ ಧರ್ಮೋನ್ನತಿಗೆ ಸೋಪಾನಗಳನ್ನು ನಿರ್ಮಿ ಸಿದೆ.

ಭಾದ್ರಪದಮಾಸದ ಹಿನ್ನೆಲೆ

ದಶಲಕ್ಷಣ ಪರ್ವವನ್ನು ಭಾದ್ರಪದ ಮಾಸದಲ್ಲಿ ಆಚರಿಸ ಲಾಗುತ್ತದೆ. ದಿಗಂಬರ ಸಂಪ್ರದಾಯದಲ್ಲಿ ಈ ಪರ್ವವನ್ನು ಪ್ರತಿ ವರ್ಷ ಭಾದ್ರಪದ ಶುದ್ಧ ಪಂಚಮಿಯಿಂದ ಚತುರ್ದಶಿಯವರೆಗೂ, ಶ್ವೇತಾಂಬರ ಸಂಪ್ರದಾಯದಲ್ಲಿ ಭಾದ್ರಪದ ಬಹುಳ ದ್ವಾದಶಿಯಿಂದ ಭಾದ್ರಪದ ಶುದ್ಧ ಚತುರ್ಥಿಯವರೆಗೂ ಆಚರಿಸುತ್ತಾರೆ. ದಶಲಕ್ಷಣ

ಪರ್ವದ ಒಂದೊಂದು ಧರ್ಮವನ್ನು ಒಂದೊಂದು ದಿನ ಆಚರಿಸುತ್ತಾರೆ. ಪ್ರತಿದಿನವೂ ಬಸದಿಗಳಲ್ಲಿ, ಧರ್ಮ ಸಂಸ್ಥೆಗಳಲ್ಲಿ ಪೂಜೆ - ನಮಸ್ಕಾರಗಳೂ. ನುರಿತ ವಿದ್ವಾಂಸರಿಂದ ಆಯಾ ದಿನಗಳಲ್ಲಿ ಆಯಾ ಧರ್ಮ ಲಕ್ಷಣವನ್ನು ಕುರಿತು ವ್ಯಾಖ್ಯಾನ - ಶ್ರವಣ ನಡೆಯುತ್ತದೆ. ಇದಲ್ಲದೆ ವ್ರತೋಪವಾಸ ಮಾಡುವವರೂ ದಾನಧರ್ಮ ನೀಡುವವರೂ ಇದ್ದಾರೆ.

ಈ ಪರ್ವವನ್ನು ಜೈನದಾರ್ಶನಿಕರು ವರ್ಷದಲ್ಲಿ ಮೂರುಬಾರಿ ಆಚರಿಸಿದರೂ ಶ್ರಾವಕರು ಮತ್ತು ಇತರರು ಸಾಮಾನ್ಯವಾಗಿ ಭಾದ್ರಪದ ಮಾಸದಲ್ಲಿ ವರ್ಷಕ್ಕೊಮ್ಮೆ ಆಚರಿಸುತ್ತಾರೆ. ಈ ಮಾಸದಲ್ಲೇ ಆಚರಿಸುವಲ್ಲಿ ವಿಶೇಷ ಹಿನ್ನಲೆ ಇದೆ. ಈ ಮಾಸವು ವರ್ಷಾಕಾಲದ ಮಾಸ. ವರ್ಷಾಕಾಲದಲ್ಲಿ ವ್ಯಾಪಾರ – ವ್ಯವಹಾರಗಳು ಮಂದಗತಿಯಲ್ಲಿರುತ್ತವೆ. ಸಂಚಾರೀ ಶ್ರಮಣರಿಗೆ ಪ್ರವಾಸ ಕಷ್ಟಕರವಾಗಿರುತ್ತವೆ. ಮಳೆಗಾಲದಲ್ಲಿ ಶಾಖ - ವನಸ್ಪತಿಗಳು ವಿಕಾಸಗೊಳ್ಳುತ್ತವೆ. ಅನೇಕ ಕ್ರಿಮಿಕೀಟಗಳು ವೃದ್ಧಿಯಾಗುವ ಕಾಲವಿದು. ಈ ಕಾಲ ಮುನಿಗಳಿಗಾಗಲಿ, ಶ್ರಾವಕರಿಗಾಗಲಿ, ಸಂಚಾರ - ವ್ಯವಹಾರಕ್ಕೆ ಅಷ್ಟು ಪ್ರಶಸ್ತವಲ್ಲದ ಕಾರಣ ಇಬ್ಬರು ಒಂದೆಡೆ ಸೇರುವುದರಿಂದಲೂ ಹೆಚ್ಚು ಕಾಲವನ್ನು ಧಾರ್ಮಿಕ ಕಾರ್ಯಕ್ಕೆ - ಧರ್ಮಗ್ರಂಥಗಳ ಪಠಣ - ಪ್ರವಚನ ಶ್ರವಣಗಳಿಗೆ ಸದ್ವಿನಿಯೋಗಗೊಳಿಸಲು ಶಕ್ಯವಿದೆ. ಈ ಕಾಲದಲ್ಲಿ ಜಠರಾಗ್ನಿ ಸಾಮಾನ್ಯವಾಗಿ ಮಂದವಾಗಿರುತ್ತದೆ ; ಹಸಿವು ಕುಗ್ಗಿದ್ದು, ವ್ರತೋಪವಾಸಗಳನ್ನು ಮಾಡಲು, ಧರ್ಮಪಾಲನೆಗೆ ಹಾಗೂ ಸ್ವಾಸ್ಥ್ಯ ಪಾಲನೆಗೆ ಹೆಚ್ಚು ಅನುಕೂಲದ ಸಮಯವಾಗಿರುತ್ತದೆ. ಈ ಪರ್ವದ ಆಚರಣೆ ಈ ಮಾಸದಲ್ಲೇ ಮಾಡಲು ಐತಿಹಾಸಿಕ ಕಾರಣವೂ ಇದೆ. ದಿಗಂಬರ ಸಂಪ್ರದಾಯದ ಪ್ರಕಾರ, ವೃಷಭದೇವ ತೀರ್ಥಂಕರರಾಗಲಿ

ಶ್ವೇತಾಂಬರ ಸಂಪ್ರದಾಯದಂತೆ ಮಹಾವೀರರಾಗಲಿ, ಧರ್ಮ ಪ್ರವರ್ತನ ಕಾರ್ಯ ಕೈಗೊಂಡು ದಶಲಕ್ಷಣ ಪರ್ವ ಅಥವಾ ಪರ್ಯೂಷಣ ಪ್ರಾರಂಭಿಸಿದ್ದು ಭಾದ್ರಪದ ಮಾಸದಲ್ಲೇ.

ಇನ್ನೊಂದು ದೃಷ್ಟಿಯಿಂದಲೂ ಇದು ಮಹತ್ವದ ಮಾಸವಾಗಿದೆ. ಧರ್ಮಾಚರಣೆಯ ಚಾತುರ್ಮಾಸದ ಮುನಿಗಳೂ, ಪಾಪಪುಣ್ಯಗಳ ಪರ್ಯವೇಕ್ಷಣದ ವರ್ಷಾಯೋಗದ ಶ್ರಾವಕರೂ ಒಂದೆಡೆ ಸೇರುವ ಈ ಭಾದ್ರಪದ ಮಾಸವು ಅನೇಕ ವ್ರತೋತ್ಸವಗಳ ಮಾಸವಾಗಿದೆ. ಸುಗಂಧದಶಮಿ. ಕರ್ಮನಿರ್ಜರ, ಪುಷ್ಪಾಂಜಲಿವ್ರತ, ಚಂದನಷಷ್ಠಿ, ಅನಂತವ್ರತ, ಲಬ್ಧಿವಿಧಾನ, ನಿರ್ದೋಷ ಸಪ್ತಮಿ, ಮುಂತಾದ ಆತ್ಮ ಶುದ್ಧಿಯ ಪುಣ್ಯಮಯ, ಸಂತಸ-ಸಂಭ್ರಮಗಳ ಸತ್ಕಾರ್ಯದ ಸನ್ನಿವೇಶ ಗಳು ಒಟ್ಟಾರೆ ಬರುವ ವ್ರತರಾಜಮಾಸವೆಂದರೆ ಭಾದ್ರಪದ ಮಾಸ. ಇಂಥ ಮಾಸದಲ್ಲಿ ಆತ್ಮಕಲ್ಯಾಣ, ಲೋಕೋನ್ನತಿ ಸಾಧಿಸಿ ಮಾನವ ರಿಗೆ ಭದ್ರಪದ ನೀಡುವ ಭಾದ್ರಪದ ಮಾಸದ ಶ್ರೇಷ್ಠ ಪರ್ವವನ್ನಾಗಿ ದಶಲಕ್ಷಣ ಪರ್ವವನ್ನು ಆಚರಿಸಲಾಗುತ್ತದೆ.

ದಶಲಕ್ಷಣದ ಸ್ವರೂಪ

ದಶಲಕ್ಷಣದ ದಶಧರ್ಮಗಳು ಕ್ರಮಾನುಸಾರವಾಗಿ ಹೀಗಿವೆ:- 1 ಕ್ಷಮಾ, 2 ಮಾರ್ದವ, 3 ಆರ್ಜವ, 4 ಶೌಚ, 5 ಸತ್ಯ, 6 ಸಂಯಮ, 7 ತಪ, 8 ತ್ಯಾಗ, 9 ಆಕಿಂಚನ್ಯ, 10 ಬ್ರಹ್ಮ ಚರ್ಯ ಇವುಗಳ ವಿಸ್ತಾರ ವಿವರಣೆಯನ್ನು 'ಅಮೋಲ ದಶಧರ್ಮ', 'ರತ್ನಕರಂಡಕ ಶ್ರಾವಕಾಚಾರ', ಮೊದಲಾದ ಅನೇಕ ದಾರ್ಶನಿಕ ಗ್ರಂಥಗಳಲ್ಲಿ ಕಾಣಬಹುದಾಗಿದೆ. ಅವುಗಳ ಸ್ಥೂಲಾರ್ಥವನ್ನು ಜೈನ ಧರ್ಮಬೋಧೆಗ್ರಂಥದಲ್ಲಿ ಹೀಗೆ ನಿರೂಪಿಸಿದೆ.

1. **ಉತ್ತಮ ಕ್ಷಮಾ :** ಕೋಪ ಮೊದಲಾದ ಭಾವಗಳಲ್ಲಿ ಸಹನೆಯನ್ನು ಹೊಂದಿ ಶಾಂತವಾಗಿರುವುದು.

2. **ಉತ್ತಮ ಮಾರ್ದವ :** ತಾನು ಶ್ರೇಷ್ಠನೆಂಬ ದುರಭಿಮಾನವನ್ನು ತೊರೆದು ಮೃದುಭಾವದಿಂದಿರುವುದು.

3. **ಉತ್ತಮ ಆರ್ಜವ :** ಕಪಟ, ವಂಚನೆ, ಮೊದಲಾದ ದುರಾಚರಣೆಗಳಿಂದ ದೂರವಾಗಿ ಸರಳಭಾವದಿಂದಿರುವುದು.

4. **ಉತ್ತಮ ಶೌಚ :** ಮನಸ್ಸಿನಲ್ಲಿ ರಾಗದ್ವೇಷ ಮೊದಲಾದ ಕೆಟ್ಟ ಪ್ರವೃತ್ತಿಗಳನ್ನು ತಡೆಗಟ್ಟ ಪರಿಶುದ್ಧವಾದ ಭಾವಗಳನ್ನುಹೊಂದಿರುವುದು. ಸ್ನಾನಾದಿಗಳಿಂದ ಶರೀರವನ್ನು ಶುಚಿಯಾಗಿಟ್ಟುಕೊಳ್ಳುವುದಕ್ಕೂ ಇದು ಅನ್ವಯಿಸುತ್ತದೆ.

5. **ಉತ್ತಮ ಸತ್ಯ :** ಸುಳ್ಳು ಮಾತನಾಡದಿರುವುದು. ನಿಂದಾವಚನ ತ್ಯಜಿಸುವುದು ಮೊದಲಾದವು

6. **ಉತ್ತಮ ಸಂಯಮ :** ಪಂಚೇಂದ್ರಿಯ ವ್ಯಾಪಾರಗಳಲ್ಲಿ ಮಿತವಾಗಿರುವುದು.

7. **ಉತ್ತಮ ತಪ :** ಅಂತರಂಗತಪ ಮತ್ತು ಬಹಿರಂಗ ತಪಗಳನ್ನು ಆಚರಿಸುವುದು.

8. **ಉತ್ತಮ ತ್ಯಾಗ :** ಬಾಹ್ಯ ಪರಿಗ್ರಹ ಮತ್ತು ಅಂತರ ಪರಿಗ್ರಹಗಳನ್ನು ಬಿಡುವುದು.

9. **ಉತ್ತಮ ಆಕಿಂಚನ್ಯ :** ಜ್ಞಾನ ಮತ್ತು ದರ್ಶನಗಳನ್ನು ಬಿಟ್ಟು ಉಳಿದ ಯಾವುದೂ ನನ್ನವಲ್ಲವೆಂಬ ಭಾವನೆಯನ್ನು ಹೊಂದುವುದು.

10. **ಉತ್ತಮ ಬ್ರಹ್ಮಚರ್ಯ :** ಬ್ರಹ್ಮ ಎಂದರೆ ಆತ್ಮನ ಸ್ವಭಾವದಲ್ಲಿ ಲೀನವಾಗುವುದು, ಎಂದರ್ಥ. ಎಲ್ಲ ವಿಚಾರಗಳ ಮೇಲಿನ ಪ್ರೀತಿಯನ್ನು ತೊರೆಯುವುದು.

ಈ ಹತ್ತುಗುಣಗಳ ಮಹತ್ತ್ವ ಅನುಪಮವಾದುದು. ಇವುಗಳ ಸ್ಪಷ್ಟಕಲ್ಪನೆ ಅರಿವಾಗಬೇಕಾದರೆ ಈ ದಶಧರ್ಮ ಲಕ್ಷಣಗಳನ್ನೂ ಇದಕ್ಕೆ ವಿರುದ್ಧವಾದ ಅಧರ್ಮ ಲಕ್ಷಣಗಳನ್ನೂ ಗಮನಿಸಬೇಕು. ಈ ಅಧರ್ಮ ಲಕ್ಷಣಗಳನ್ನು ತೊರೆದಾಗ ಧರ್ಮ ಲಕ್ಷಣಗಳನ್ನೂ ಆಚರಿಸಿದಾಗ ಫಲವಾಗಿ ಕಂಡುಬರುವ ಮಾನವೀಯ ಗುಣಗಳು ಲೋಕಕಲ್ಯಾಣಕ್ಕೆ ಸಾಧನವಾಗಿರುವುದು ಸ್ಪಷ್ಟವಾಗುತ್ತದೆ. ವಿಶ್ವ ಧರ್ಮದ ಸ್ವರೂಪವಿಲ್ಲಿರುವುದೂ ವೇದ್ಯವಾಗುತ್ತದೆ. ಈ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ಹೀಗೆ ನಿರೂಪಿಸಬಹುದು.

	ಧರ್ಮಲಕ್ಷಣ (ಆಚರಣೆಗೆ ಯೋಗ್ಯ)	×	ಅಧರ್ಮ ಲಕ್ಷಣ (ತ್ಯಾಜ್ಯಕ್ಕೆ ಯೋಗ್ಯ)	=	ಲೋಕಹಿತಗುಣ (ಪರಿಣಾಮದ ಗುಣ)
1.	ಕ್ಷಮೆ	×	ಕೋಪ	=	ಸಹನಶೀಲತೆ
2.	ಮಾರ್ದವ	×	ಅಹಂಕಾರ	=	ವಿನಯ
3.	ಆರ್ಜವ	×	ವಂಚನೆ	=	ಕಪಟರಾಹಿತ್ಯ
4.	ಶೌಚ	×	ರಾಗದ್ವೇಷ	=	ಪರಿಶುದ್ಧಭಾವ
5.	ಸತ್ಯ	×	ಅನೃತ	=	ಪ್ರಾಮಾಣಿಕತೆ
6.	ಸಂಯಮ	×	ಚಂಚಲತೆ	=	ಸ್ಥಿರಚಿತ್ತ
7.	ತಪ	×	ಭೋಗ	=	ವೈರಾಗ್ಯ
8.	ತ್ಯಾಗ	×	ಲೋಭ	=	ದಾನಗುಣ
9.	ಆಕಿಂಚನ್ಯ	×	ಮಮತ್ವ	=	ನಿಸ್ವಾರ್ಥ
10.	ಬ್ರಹ್ಮಚರ್ಯ	×	ಮೋಹ	=	ಆತ್ಮಜ್ಞಾನ

ಮೇಲಿನ ಪಟ್ಟಿಯನ್ನು ಗಮನಿಸಿದಾಗ ಒಂದು ವಿಶೇಷ ಅಂಶವನ್ನು ಗಮನಿಸಬೇಕಾಗುತ್ತದೆ. ಪ್ರತಿ ಧರ್ಮಾಚರಣೆಗೆ ಎರಡು ಮುಖಗಳಿವೆ. ಇತ್ತ ಸದಾಚಾರ ಪ್ರವೃತ್ತರಾಗಬೇಕು. ಅತ್ತ ದುರಾಚಾರ ನಿವೃತ್ತರಾಗಬೇಕು. ಆಗ ಧರ್ಮಸಿದ್ಧಿ. ನಮ್ಮಲ್ಲಿ ಅನೇಕರು ದಾನಧರ್ಮಾದಿಗಳಲ್ಲಿ ಸದಾಚಾರಿಗಳೂ ಬಹಿರಂಗಶುದ್ಧಿ ಉಳ್ಳವರೂ ಆಗಿದ್ದಾರೆ. ಆದರೆ ಅಂತರಂಗಶುದ್ಧಿಯುಳ್ಳವರು ಆತ್ಮಶೋಧಕರೂ ದುರಾಚಾರದೂರರೂ ಅಲ್ಪಸಂಖ್ಯೆಯಲ್ಲಿದ್ದಾರೆ. ಮತ್ತೆ ಕೆಲವರು ದುರಾಚಾರಿಗಳಲ್ಲದಿದ್ದರೂ ಧರ್ಮಿಷ್ಟರಲ್ಲ. ಆದರೆ ಧರ್ಮ ನಿಷ್ಕ್ರಿಯಾರೂಪವೂ ಅಲ್ಲ ; ದುಷ್ಕ್ರಿಯಾರೂಪವೂ ಅಲ್ಲ ; ಅದು ಸತ್ಕ್ರಿಯಾರೂಪ. ಪಾಪನಿವಾರಣೆ - ಪುಣ್ಯ ಸಂಪಾದನೆ ಎರಡೂ ಸಾಧಿತವಾಗುವ ಆಚಾರವೇ ಧರ್ಮಾಚಾರ. ಆದ್ದರಿಂದಲೇ ದಶಲಕ್ಷಣಗಳು ಆಚರಿಸಬೇಕಾದ ಕರ್ಮಗಳನ್ನೂ ಆಚರಿಸಬಾರದ ಕರ್ಮಗಳನ್ನೂ ಎರಡನ್ನೂ ಸ್ಪಷ್ಟಪಡಿಸುತ್ತವೆ. ಫಲವಾಗಿ ಆತ್ಮೋನ್ನತಿಗೆ ನೆರವಾಗುವ ಮಾನವೀಯ ಲೋಕಹಿತಗುಣಗಳನ್ನು ಪ್ರತಿಪಾದಿಸುತ್ತವೆ.

ದಶದ ಮಹತ್ವ

ದಶಲಕ್ಷಣ ಪರ್ವ ಎಂಬ ಮಾತಿನಲ್ಲಿ ದಶ ಸಂಖ್ಯೆಗೆ ವಿಶೇಷವುಂಟೇ ? ದಶವೇ ಏನಾಗಬೇಕು ? ಏಕಾದಶವೋ ದ್ವಾದಶವೋ ಆಗಬಾರದೇಕೆ ? ಎಂಬ ಪ್ರಶ್ನೆಯೂ ಸಾಧ್ಯ. ಆದರೆ 'ದಶ' ಪದವು ಔಚಿತ್ಯಪೂರ್ಣ ಸಂಖ್ಯಾಪದವಾಗಿದೆ. ಗಣಿತಶಾಸ್ತ್ರದಲ್ಲಿ ಹತ್ತರ ಮಹತ್ವ ಅಷ್ಟಿಷ್ಟಲ್ಲ. ಪಂಚ ಜ್ಞಾನೇಂದ್ರಿಯಗಳು ಪಂಚಕರ್ಮೇಂದ್ರಿಯಗಳೂ ಸೇರಿ ದಶೇಂದ್ರಿಯಗಳಾಗುತ್ತವೆ. ಲೋಕೋಪಯೋಗಕ್ಕೆ ಮೀಸಲಾದ ಕೈಕಾಲುಗಳಲ್ಲಿ ಬೆರಳುಗಳ ಸಂಖ್ಯೆ ಹತ್ತು. ಭಗವಂತನನ್ನು ವೈದಿಕರು 'ಅತ್ಯತಿಷ್ಠತ್ ದಶಾಂಗುಲಂ' ಎಂದು ಭಾವಿಸಿದ್ದಾರೆ. ರೂಪಕಶಾಸ್ತ್ರ

ದಲ್ಲಿ "ದಶರೂಪಕ" ಪ್ರಸಿದ್ಧ. ರಾಜರಲ್ಲಿ ದಶರಥ ಪ್ರಸಿದ್ಧ. ಶಕ್ತಿದೇವಿಯಾದ ದುರ್ಗೆಗೆ ದಶಭುಜಗಳು. ದಶಮಾನ ಪದ್ಧತಿಯೂ ಭಗವಂತನ ದಶಾವತಾರಗಳೂ ಲೋಕಪ್ರಸಿದ್ಧವಾಗಿವೆ. ಧರ್ಮ ದಶದಿಕ್ಕುಗಳಲ್ಲಿ ವ್ಯಾಪ್ತವಾಗಿದೆ ಎಂದು ಭಾವಿಸುತ್ತಾರೆ. ಹೀಗೆ ಹತ್ತಾರು ರೀತಿಗಳಲ್ಲಿ ದಶ ಸಂಖ್ಯೆಗೆ ವಿಶೇಷವಾದ ಮಹತ್ವವಿದೆ.

ತಾರ್ಕಿಕ ನಿರೂಪಣೆ

ದಶಲಕ್ಷಣದ ಪರ್ವದ ಮಹತ್ವವನ್ನು ಅದರಲ್ಲಿನ ದಶಧರ್ಮಗಳ ತಾರ್ಕಿಕ ನಿರೂಪಣೆಯಲ್ಲೂ ಕಾಣಬಹುದು. 'ದಂಡಂ ದಶಗುಣ ಭವೇತ್' ಎಂಬ ಹಿಂಸಾ ಧರ್ಮ ತತ್ವಕ್ಕೆ ಪ್ರತಿಯಾಗಿ 'ಧರ್ಮಂ ದಶ ಗುಣಂ ಭವೇತ್' ಎಂದು ಅಹಿಂಸಾ ತತ್ವದ ಪ್ರತಿಪಾದನೆಯನ್ನು ಈ ಪರ್ವದಲ್ಲಿ ಕಾಣಬಹುದು ವೈದಿಕ ಧರ್ಮದಲ್ಲೂ ಹೇಳಿರುವುದು ಧರ್ಮಕ್ಕೆ ದಶಲಕ್ಷಣಗಳನ್ನೇ, ಹೇಳಿದೆ. ಮನುವಿನ ಪ್ರಕಾರ, 1. ಧೃತಿ 2. ಕ್ಷಮಾ 3. ದಮ 4. ಅಸ್ತೇಯ 5. ಶೌಚ 6. ಇಂದ್ರಿಯ ನಿಗ್ರಹ 7. ಧೀ 8. ವಿದ್ಯಾ 9. ಸತ್ಯ 10. ಅಕ್ರೋಧ, ಎಂಬಿವೇ ದಶಲಕ್ಷಣಗಳು. ಇವುಗಳನ್ನೂ ಜೈನಧರ್ಮದ ದಶಲಕ್ಷಣಗಳನ್ನೂ ಹೋಲಿಸಿದಾಗ, ಜೈನಧರ್ಮದ ದಶಲಕ್ಷಣ ನಿರೂಪಣಾ ಕ್ರಮದಲ್ಲಿ ಔಚಿತ್ಯವೂ ತಾರ್ಕಿಕ ಸರಣಿಯೂ ಕಂಡುಬರುತ್ತದೆ. ಆದಕಾರಣ ಕೇವಲ ಸಂಪ್ರದಾಯ, ಪದ್ಧತಿ ಅಥವಾ ರೂಢಿಯ ಕಾರಣ ಈಗಿರುವ ಕ್ರಮವನ್ನು ಅನುಸರಿಸುತ್ತಿಲ್ಲ. ಅದರಲ್ಲಿ ಅರ್ಥಪೂರ್ಣ ಅಂತರಾರ್ಥವನ್ನು ಕಂಡು ಈಗಿನ ಕ್ರಮವನ್ನು ಅನುಸರಿಸಿದ್ದಾರೆ. ಇದರ ಬಗ್ಗೆ ಹೀರಾಲಾಲ್ ಜೈನರ ಅಭಿಪ್ರಾಯ ಹೀಗಿದೆ :– " ಈ ದಶಧರ್ಮಗಳಲ್ಲಿಯೇ ಸಾಮಾನ್ಯವಾಗಿ ನಾಲ್ಕು ಕಷಾಯಗಳೂ ಹಾಗೂ ಅಣು

ವ್ರತ ಮತ್ತು ಮಹಾವ್ರತಗಳಿಂದ ನಿರ್ಧಾರಗೊಂಡ ಐದು ಪಾಪಗಳ ಅಭಾವವೂ ಸಮಾವೇಶವಾಗುತ್ತವೆ........ನಾಲ್ಕು ಕಷಾಯಗಳನ್ನು ಉಪಶಮನಗೊಳಿಸುವಂಥವು ಮೊದಲಿನ ನಾಲ್ಕು ಧರ್ಮಗಳಾಗಿವೆ. ಹಾಗೆಯೇ ಹಿಂಸಾ, ಅಸತ್ಯ, ಚೌರ್ಯ, ಅಬ್ರಹ್ಮಚರ್ಯ ಮತ್ತು ಪರಿಗ್ರಹ ಗಳನ್ನು ಉಪಶಮನಗೊಳಿಸುವಂಥವು ಕ್ರಮದಿಂದ ಸಂಯಮ, ಸತ್ಯ, ತ್ಯಾಗ, ಬ್ರಹ್ಮಚರ್ಯ ಮತ್ತು ಆಕಿಂಚನ್ಯ ಧರ್ಮಗಳಾಗಿವೆ. ಈ ಒಂಬತ್ತಲ್ಲದೆ ತಪದ ವಿಧಾನವು ಮುನಿಚರ್ಯೆಯನ್ನು ವಿಶೇಷರೂಪ ಗೃಹಸ್ಥಧರ್ಮದಿಂದ ಮುಂದುವರಿಸುವಂಥದ್ದಾಗಿದೆ."

ಇನ್ನೊಂದು ದೃಷ್ಟಿಯಲ್ಲೂ ದಶಲಕ್ಷಣಗಳ ಕ್ರಮವನ್ನು ಸಮರ್ಥಿಸಬಹುದು. ಇದರಲ್ಲಿ ಮೊದಲನೆಯದು ಕ್ಷಮಾ. ಜಗತ್ತಿನಲ್ಲಿ ಕ್ಷಮೆಗೆ ಆದಿಸ್ಥಾನವಿದೆ. ಶಾಪಾನುಗ್ರಹ ಸಮರ್ಥರಾದ ಮುನಿಗಳಿಗೆ ಕ್ಷಮಾ ಗುಣ ಭೂಷಣವಾಗಿದೆ. ಪಾಪ ಪುಣ್ಯಗಳ ಮಿಶ್ರಣವಾದ ಮಾನವನಿಗೆ ಕ್ಷಮೆ ಯೋಗ್ಯವಾಗಿದೆ. ಮಹಾವೀರ, ಬುದ್ಧ, ಏಸು, ಗಾಂಧಿ ಮೊದಲಾದ ಮಹಾಪುರುಷರೆಲ್ಲಾ ಸಾಕ್ಷಾತ್ ಕ್ಷಮಾಮೂರ್ತಿಗಳು. ನೂರು ಬಾರಿ ಶಿಶುಪಾಲನನ್ನು ಕೃಷ್ಣ ಕ್ಷಮಿಸಲಿಲ್ಲವೇ ? ಶಿಲುಬೆಗೇರಿಸಿದವರನ್ನು 'ಕ್ಷಮಿಸು ತಂದೆ' ಎಂದು ಏಸು ಪ್ರಾರ್ಥಿಸಿದರೆ, ಗುಂಡಿಟ್ಟವನನ್ನೇ ಕ್ಷಮಿಸಿದರು ಮಹಾತ್ಮ ಗಾಂಧಿ. ಈ ನಮ್ಮ ಭೂದೇವಿ ಕ್ಷಮಾದೇವಿಯೇ ಆಗಿದ್ದಾಳೆ. 'ಕ್ಷಮಾಧರಿತ್ರೀ' ಎನ್ನುತ್ತಾರೆ. ಆಳುವ ವ್ಯಕ್ತಿಗೆ ಅಥವಾ ಶಕ್ತಿಗೆ ಕ್ಷಮಾಗುಣ ಇಲ್ಲದಿದ್ದರ ಬಾಳು ದುರ್ಭರವಾಗುತ್ತದೆ. 'ಕ್ಷಮಾವೀರಸ್ಯ ಭೂಷಣಂ' ಎಂಬ ಮಾತು ಕ್ಷಮಾಗುಣದ ಔನ್ನತ್ಯಕ್ಕೆ ನಿದರ್ಶನ. ಆದಕಾರಣ ಕ್ಷಮೆಗೆ ಅಗ್ರಸ್ಥಾನವಿದೆ. ಈ ಕಾರಣದಿಂದ ದಶಲಕ್ಷಣ ಪರ್ವದ ಮೊದಲ ಲಕ್ಷಣ ಕ್ಷಮೆ ಆಗಿದೆ.

ಎರಡನೆಯದು ಮಾರ್ದವ. ಅಂತರಂಗದಲ್ಲಿ ಕ್ಷಮಾಗುಣ ವಿದ್ದರೆ ಅದು ಅಭಿವ್ಯಕ್ತವಾಗಲೂ ಲೋಕಹಿತಕ್ಕೆ ನೆರವಾಗಲು ಮಾರ್ದವಗುಣ ಇರಲೇಬೇಕು. ಕ್ಷಮೆಯ ಫಲವೇ ಮಾರ್ದವ. 'ವಿದ್ಯಾದದಾತಿ ವಿನಯಂ' ಎಂಬ ನುಡಿ, ವಿದ್ಯಾಫಲವೇ ಮಾರ್ದವ ವಾಗಿದೆ ಎಂಬುದನ್ನು ಸಾರುತ್ತದೆ.

ಮೂರನೆಯದು, ಆರ್ಜವಗುಣ. ಅನ್ಯರಲ್ಲಿ ದಯೆ - ಕರುಣೆ ತೋರಿ, ಅವರನ್ನು ಮನ್ನಿಸುವ ಮನವನ್ನು ಪಡೆದವರಲ್ಲಿ ನಿಷ್ಕಪಟ ತನವನ್ನು ಅರ್ಥಾತ್ ಆರ್ಜವ ಗುಣವನ್ನು ಕಾಣುತ್ತೇವೆ. ಈ ಗುಣ ಅಂತರಂಗ ಶುದ್ಧಿಗೆ ಸಾಕ್ಷಿಯಾಗಿದೆ.

ನಾಲ್ಕನೆಯದೇ ಶೌಚಗುಣ.ರಾಗದ್ವೇಷರಹಿತವಾಗಿದ್ದವರಲ್ಲಿ ಈ ಗುಣ ಇರಲು ಸಾಧ್ಯ. ತನು ಮನಗಳಲ್ಲಿ ಶುಚಿಗುಣ ಕಾಣಲು ಅಂತ ರಂಗ - ಬಹಿರಂಗ ಶುದ್ಧಿಯಿರಬೇಕು. ಇದಕ್ಕೆ ಕ್ಷಮಾ–ಮಾರ್ದವ– ಆರ್ಜವ ಗುಣತ್ರಯ ಪರಿಪೂರ್ಣವಾಗಿರಬೇಕು. ಶೌಚಗುಣ ವ್ಯಷ್ಟಿ ರೂಪದ್ದೂ ಸಮಷ್ಟಿ ರೂಪದ್ದೂ ಆಗಿದೆ.

ಐದನೆಯದು ಸತ್ಯ. ಸತ್ಯವಂತರಿಗೆ ಎತ್ತಲೂ ಭಯವಿಲ್ಲ. ಧರ್ಮಜ್ಞರಿಗೂ ಅಷ್ಟೆ. ಸತ್ಯವನ್ನೇ ಬಾಳಧ್ಯೇಯವನಾಗಿಟ್ಟುಕೊಂಡು ಕೀರ್ತಿಪಡೆದವರಿದ್ದಾರೆ. ಹರನೆಂಬುದೇ ಸತ್ಯವು ; ಸತ್ಯವೆಂಬುದೇ ಹರನು ಎಂದು ಕವಿಯೊಬ್ಬ ಸಾರಿದ್ದಾನೆ. ಧರ್ಮಜ್ಞರು ಸದಾ ಸತ್ಯ ನಾರಾಯಣರಾಗಿರುತ್ತಾರೆ.

ಆರನೆಯದು ಸಂಯಮ. ಸಂಯಮಕ್ಕೆ ಸತ್ಯವೇ ಬೆನ್ನೆಲುಬು. ಸತ್ಯಸಂಧನು ಮಾತ್ರ ಸಂಯಮ ತಂದುಕೊಳ್ಳಲು ಸಾಧ್ಯ. ಅವನಿಗೆ ಸತ್ಯಕ್ಕೆ ಹಿನ್ನೆಲೆಯಾದ ಉಳಿದ ನಾಲ್ಕು ಗುಣಗಳೂ ಅಗತ್ಯವಿದೆ.

ಸತ್ಯಕ್ಕಾಗಿ ಪ್ರತಿಜ್ಞೆಮಾಡಿದ ಹರಿಶ್ಚಂದ್ರನ ಸಂಯಮ ಯಾರಿಗೆ ತಾನೇ ತಿಳಿದಿಲ್ಲ ?

ಏಳನೆಯದು ತಪ. ಪರಿತಪಿಸುವವರನ್ನು ಉದ್ಧರಿಸುವವರಿಗೆ ತಪಶಕ್ತಿಬೇಕು ; ಸಂಯಮವಿದ್ದರೆ ಮಾತ್ರ ತಪೋಗುಣ ಬರುತ್ತದೆ. ತಪಸ್ಸಿಗೆ ಷಡ್ವೈರಿಗಳಿರಬಾರದು ; ಷಡ್ಗುಣಗಳಿರಬೇಕು. ತಪಸ್ಸು ಆತ್ಮ ಕಲ್ಯಾಣಕ್ಕಷ್ಟೆ ಮೀಸಲಿಲ್ಲ. ಲೋಕಕಲ್ಯಾಣಕ್ಕೂ ಅಗತ್ಯವಿದೆ. ತಪಸ್ಸಿಗೆ ಹಿಂದಿನ ಆರು ಗುಣಗಳೂ ಇರಲೇಬೇಕು.

ಎಂಟನೆಯದು ತ್ಯಾಗ. ಆತ್ಮೋನ್ನತಿ ಬಯಸುವ ತಪೋ ಗುಣಿಗೆ ಮಾತ್ರ ತ್ಯಾಗಗುಣ ಸಹಜವಾಗಿ ಬರುತ್ತದೆ. ಸ್ವಾರ್ಥ ತ್ಯಾಗವಷ್ಟೇ ಅಲ್ಲದೇ ತ್ಯಾಗದಲ್ಲಿ ಪರಾರ್ಥಹಿತ ಅಡಗಿರಬೇಕು. ತ್ಯಾಗವು ಕೇವಲ ಆತ್ಮಸ್ವಾರ್ಥೇ ಅಷ್ಟೇ ಅಲ್ಲ ಲೋಕಸ್ವಾರ್ಥೇ ಸಹ ಆಗಿದೆ. ತ್ಯಾಗವೆಂದರೆ ಬಹಿರಂಗ ವಸ್ತು - ಸಾಧನಗಳನ್ನು ದೂರೀ ಕರಿಸುವುದಷ್ಟೇ ಅಲ್ಲ, ಅಂತರಂಗದ ಆಶಾ ಮೋಹಗಳನ್ನು ದೂರೀ ಕರಿಸಬೇಕು. ಆದರ್ಶ ತ್ಯಾಗಿಗಳ ಸಂಖ್ಯೆ ಇತಿಹಾಸದಲ್ಲಿ ಅಪರೂಪ ವಾಗಿದೆ. ಬಾಹುಬಲಿ, ಕರ್ಣ, ಶಿಬಿ, ದಧೀಚಿ, ಇತ್ಯಾದಿ ಮಹಾ ಪುರುಷರು ಶ್ರೇಷ್ಠ ನಿದರ್ಶನ.

ಒಂಬತ್ತನೆಯದು ಆಕಿಂಚನ್ಯಭಾವ. ಮೇಲಿನ ಅಷ್ಟಗುಣ ಪೂರ್ಣರಿಗೆ ತಾನೇ ತಾನಾಗಿ ಆಕಿಂಚನ್ಯ ಭಾವ ಬರುತ್ತದೆ. ಶಾಶ್ವತ ಸುಖದತ್ತ ಮನವಾಲಿ ಮಿಥ್ಯಾಸುಖದ ಹಾಗೂ ಪಾಪಸಾಧನ, ಸುಖ ಭೋಗಗಳ ಅರಿವುಂಟಾಗಿ ನಿಜದತ್ತ ಸಾಗುವ ಧರ್ಮಪಂಥಿಗಳಾಗು ತ್ತಾರೆ. ಇದರ ಫಲವೇ ಆಕಿಂಚನ್ಯಭಾವ.

ಹತ್ತನೆಯದು ಬ್ರಹ್ಮಚರ್ಯ. ಬ್ರಹ್ಮಚರ್ಯ ಗುಣಕ್ಕೆ ಸಾಕ್ಷಿ ಎಂದರೆ ಹಿಂದೆ ಕಾಣಿಸಿದ ಒಂಬತ್ತು ಗುಣಗಳಿರಲೇ ಬೇಕು. ಯಾವುದೊಂದು

ಲೋಪವಾದರೂ ಬ್ರಹ್ಮಚರ್ಯಗುಣ ಕುಂಠಿತಗೊಳ್ಳುತ್ತದೆ. ಉದಾಹರಣೆಗೆ, ಕ್ಷಮಾಗುಣವಿಲ್ಲದೆ ಕ್ರೋಧಗುಣದಿಂದ ವಿಶ್ವಾಮಿತ್ರನ ತಪಸ್ಸಿದ್ಧಿ ವಶಿಷ್ಠನ ಮುಂದೆ ವ್ಯರ್ಥವಾಯಿತು. ಸತ್ಯಗುಣವಿಲ್ಲದೆ ಹರಿಶ್ಚಂದ್ರನ ಮುಂದೆ ಆತ ಭಂಗಪಟ್ಟನು. ಆರ್ಜವಗುಣವಿಲ್ಲದೆ ಹರಿಶ್ಚಂದ್ರನಿಗೆ ಕಷ್ಟಕೊಟ್ಟು ರಾಜ್ಯವನ್ನು ಹೊಂದಿ ನಿಕೃಷ್ಟನಾದನು. ಆದಕಾರಣ ದಶಮ ಲಕ್ಷಣ ಬ್ರಹ್ಮಚರ್ಯಗುಣ ಬರಲು ಆತ ನವಗುಣ ಪರಿಪೂರ್ಣವಾಗಿರಬೇಕು.

ಈ ಕಾರಣದಿಂದ ಧರ್ಮಲಕ್ಷಣಗಳು ಹತ್ತೇ ಆಗಿರುವುದರಲ್ಲಿ, ಈಗಿರುವ ಕ್ರಮದಲ್ಲೇ ಇರುವುದರಲ್ಲಿ ವಿಶೇಷ ಔಚಿತ್ಯವಿದೆ ಎಂದು ಹೇಳಬಹುದಾಗಿದೆ. ಕತ್ತಲೆಯಿಂದ ಬೆಳಕಿನೆಡೆಗೆ ಲೋಕಜ್ಞಾನದಿಂದ ಆತ್ಮಜ್ಞಾನದತ್ತ ಕರೆದೊಯ್ಯುವ ದಿವ್ಯ ಸಾಧನವಾಗಿದೆ. ಅಧರ್ಮರೂಪಿಯಾದ ರಾವಣನಿಗೆ ಹತ್ತು ತಲೆಗಳಿದ್ದುವು. ಅವುಗಳನ್ನು ಧರ್ಮರೂಪಿ ರಾಮನು ಏಕಕಾಲದಲ್ಲಿ ಹತ್ತು ಬಾಣಗಳಿಂದ ಖಂಡಿಸಿದನಂತೆ ಅರ್ಥಾತ್ ದಶಮುಖ ಅಧರ್ಮರೂಪಿ ರಾವಣಸಂಹಾರಕ್ಕೆ ದಶಮುಖದ ಧರ್ಮರೂಪಿ ರಾಮುಪರ್ವ ಅರ್ಥಾತ್ ದಶಲಕ್ಷಣ ಪರ್ವ ಎನ್ನಬಹುದಾಗಿದೆ.

'ಉತ್ತಮ ಪದದ ಅಂತರಾರ್ಥ

ದಶಲಕ್ಷಣ ಪರ್ವದ ಒಂದೊಂದು ಲಕ್ಷಣವನ್ನು ಉಲ್ಲೇಖಿಸುವಾಗಲೂ 'ಉತ್ತಮ' ಎಂಬ ವಿಶೇಷಣವನ್ನು ಬಳಸುತ್ತಾರೆ. ಉತ್ತಮ ಕ್ಷಮಾ, ಉತ್ತಮ ಮಾರ್ದವ ಇತ್ಯಾದಿ. ಕ್ಷಮಾ, ಮಾರ್ದವ ಮೊದಲಾದ ಗುಣಗಳ ಹೆಸರೇ ಶ್ರೇಷ್ಠತೆಯನ್ನು ತೋರಿಸುವಾಗ 'ಉತ್ತಮ' ಪದದ ಬಳಕೆ ಏಕೆ? ಇದರಲ್ಲಿ ವಿಶೇಷವೇನಾದರೂ ಉಂಟೇ? ಅಥವಾ ವ್ಯರ್ಥವಿಶೇಷಣವೇ? ಅನಗತ್ಯವಾದ ಪುನರುಕ್ತಿಯೇ?

ತಕ್ಷಣಕ್ಕೆ ಹಾಗೆನ್ನಿಸಿದರೂ ಸ್ವಲ್ಪ ಆಳವಾಗಿ ಯೋಚಿಸಿದರೆ ಇದರಲ್ಲಿ ವಿಶೇಷಾರ್ಥವಿರುವುದು ಕಂಡುಬರುತ್ತದೆ. ಸಂಸ್ಕೃತದಲ್ಲಿ 'ಉತ್' ಅವ್ಯಯಕ್ಕೆ ಹಲವಾರು ಅರ್ಥಗಳಿವೆ. ಶ್ರೇಷ್ಠ, ಎತ್ತರ, ಊರ್ಧ್ವ ಗಾಮಿ ಇತ್ಯಾದಿ. ಉತ್=ಶ್ರೇಷ್ಠ ಎಂದಾದರೆ ಉತ್ತರ(ಉತ್×ತರ)= ಇನ್ನೊಂದಕ್ಕಿಂತ ಶ್ರೇಷ್ಠ ಎಂಬ ತರತಮಭಾವದ ಅರ್ಥ ನೀಡುತ್ತದೆ. ಉತ್ತಮ (ಉತ್×ತಮ) = ಎಂಬುದು ಎಲ್ಲದಕ್ಕಿಂತ ಸರ್ವಶ್ರೇಷ್ಠ ಎಂಬರ್ಥ ನೀಡುತ್ತದೆ. ಆದಕಾರಣ, "ಲೌಕಿಕ ಅಪೇಕ್ಷೆಯನ್ನಿರಿಸಿ ಕೊಳ್ಳದೆ, ಆಧ್ಯಾತ್ಮಿಕ ದೃಷ್ಟಿಯನ್ನಿಟ್ಟುಕೊಂಡು ಪೂರ್ಣ ತಿಳಿವಳಿಕೆ ಯಿಂದ ತಮ್ಮ ವಿಕಾಸದ ಸಲುವಾಗಿ ಶುದ್ಧ ಆಚರಣೆ ಅವಶ್ಯ ಎಂಬು ದನ್ನು ಸೂಚಿಸುವುದೇ ಉತ್ತಮ ಪದದ ವೈಶಿಷ್ಟ್ಯ" ಏಕೆಂದರೆ "ಐಹಿಕ ಅಪೇಕ್ಷೆಗಳು ಇಲ್ಲದಂತಾಗಿ ಆತ್ಮದ ಉನ್ನತಿಯಾಗುವುದೇ ಉತ್ತಮ ಧರ್ಮ." ಈ ದೃಷ್ಟಿಯಿಂದ ದಶಲಕ್ಷಣಪರ್ವದ ಒಂದೊಂದು ಲಕ್ಷಣವೂ ವಿಶಿಷ್ಟವೂ ವಿಲಕ್ಷಣವೂ ಆಗಿದೆ. ಅಂತಹದು ಇನ್ನೊಂದಿಲ್ಲ, ಅದ್ವಿತೀಯ ಲಕ್ಷಣವಿದು ಎಂಬ ಅರ್ಥದ ಸೂಚನೆಗಾಗಿ 'ಉತ್ತಮ' ಪದದ ಬಳಕೆ ಆಗಿದೆ ಎನ್ನಬಹುದು.

ಉತ್ ಎಂದರೆ ಅತಿಶಯ. ಊರ್ಧ್ವಗಾಮಿ ಎಂಬರ್ಥವೂ ಉಂಟು. ಆತ್ಮ ಅತಿಶಯವೂ ಊರ್ಧ್ವರೂಪಿಯೂ ಆಗಿರುವುದ ರಿಂದ ಶ್ರೇಷ್ಠವಾದ ಆತ್ಮಸ್ವರೂಪವನ್ನು 'ಉತ್ತಮ' ಪದ ಸೂಚಿಸು ತ್ತದೆ. ಇದು ಆತ್ಮಸ್ವರೂಪ ಜ್ಞಾನಕ್ಕೆ ಸಂಬಂಧಿಸಿದ ಲಕ್ಷಣ ಎಂಬ ರ್ಥವೂ ಆಗುತ್ತದೆ. ಆತ್ಮಲಕ್ಷಣ ಹೇಳುವ ಧರ್ಮ ಉತ್ತಮವಾದುದು. ಆದಕಾರಣ ಉತ್ತಮ ಪದವನ್ನು ಉತ್ತಮ ಧರ್ಮ ಲಕ್ಷಣದ ಸಂಕೇತ ವಾಗಿ ಬಳಸಲಾಗಿದೆ ಎನ್ನಬಹುದು.

ಸರ್ವಜನಾದರಣೀಯ ಪರ್ವ

ಜೈನ ಧರ್ಮೀಯರಲ್ಲಿ ದಿಗಂಬರ–ಶ್ವೇತಾಂಬರ ಉಭಯ ಪಂಥದವರೂ ದಶಲಕ್ಷಣ ಪರ್ವವನ್ನು ಅಥವಾ ಪರ್ಯುಷಣವನ್ನು ಆಚರಿಸುತ್ತಾರೆ. ಇದರ ಐತಿಹಾಸಿಕ ಉಗಮ, ಹಿನ್ನೆಲೆ ಬಗ್ಗೆ ಅಲ್ಪ ಸ್ವಲ್ಪ ವ್ಯತ್ಯಾಸಗಳು ಕಂಡುಬಂದರೂ ಪರ್ವದ ಧಾರ್ಮಿಕ ಆಚರಣೆ–ಮಹತ್ವಗಳಲ್ಲಿ ಭೇದಗಳಿಲ್ಲವೆನ್ನಬಹುದು.

"ಶ್ವೇತಾಂಬರ ಸಂಪ್ರದಾಯದಲ್ಲಿ ದಶಲಕ್ಷಣ ಪರ್ವವನ್ನು 'ಪರ್ಯುಷಣ' ವೆಂದು ಹೇಳುತ್ತಾರೆ. ಅದರಲ್ಲಿ ಸಾಧುಗಳಿಗೆ ಹತ್ತು ಪ್ರಕಾರವಾದ ಕಲ್ಪ ಎಂದರೆ ಆಚಾರಗಳನ್ನು ಹೇಳಿದೆ. ಅವುಗಳಲ್ಲಿ ಪರ್ಯುಷಣವೂ ಒಂದು....ಕಾಲಕಾಚಾರ್ಯರಿಂದ ಪ್ರಚಲಿತವಾಯಿತೆನ್ನಲಾದ ಚತುರ್ಥಿಯ ಪರಂಪರೆ ಪ್ರಕಾರ 'ಸಾಂವತ್ಸರಿಕ ಪರ್ವವನ್ನು ಕೇಂದ್ರವಾಗಿಟ್ಟುಕೊಂಡು ಅದರೊಂದಿಗೆ ಮೊದಲಿನ ಏಳು ದಿವಸಗಳನ್ನು ಸೇರಿಸಿಕೊಂಡು ಭಾದ್ರಪದ ಬಹುಳ ದ್ವಾದಶಿಯಿಂದ ಭಾದ್ರಪದ ಶುದ್ಧ ಚತುರ್ಥಿಯವರೆಗಿನ ಎಂಟು ದಿವಸಗಳನ್ನು ಶ್ವೇತಾಂಬರ ಸಂಪ್ರದಾಯದಲ್ಲಿ ಪರ್ಯುಷಣವೆಂದು ಕರೆಯುತ್ತಾರೆ. ದಿಗಂಬರ ಸಂಪ್ರದಾಯದಲ್ಲಿ ಎಂಟರ ಬದಲಿಗೆ ಹತ್ತು ದಿನಗಳ ತನಕ ಈ ಪರ್ವ ಜರುಗುವುದು. ಶ್ವೇತಾಂಬರ ಪರ್ಯುಷಣ ಪೂರ್ಣವಾದ ಎರಡನೆಯ ದಿವಸದಿಂದ ದಿಗಂಬರ ಸಂಪ್ರದಾಯದ ದಶಲಕ್ಷಣ ಪರ್ವ ಪ್ರಾರಂಭವಾಗುವುದು."

ದಿಗಂಬರ ಸಂಪ್ರದಾಯದ ಪ್ರಕಾರ "ಸೃಷ್ಟಿಯಲ್ಲಿ ಉತ್ಸರ್ಪಿಣೀ ಕಾಲದ ಅನಂತರ ಅವಸರ್ಪಿಣಿಯ ಕಾಲದಲ್ಲಿ ಮೂರನೆಯ ಹಂತದಲ್ಲಿ ವೃಷಭ ತೀರ್ಥಂಕರರು ಧರ್ಮಪ್ರವರ್ತನ ಕಾರ್ಯ ಕೈಗೊಂಡ ದಿನ ಭಾದ್ರಪದ ಶುಕ್ಲ ಪಂಚಮಿಯಾದ್ದರಿಂದ ಆ ದಿನದಿಂದಲೇ ಈ ಪರ್ವ

ಪ್ರಾರಂಭಿಸುತ್ತಾರೆ. ಆದರೆ ಶ್ವೇತಾಂಬರ ಸಂಪ್ರದಾಯದವರು ಕಲ್ಪ ಸೂತ್ರದ ಪ್ರಕಾರ ಭಗವಾನ್ ಮಹಾವೀರರಿಂದ ಈ ಪರ್ವ ಪರಂಪರೆ ಪ್ರಾರಂಭವಾಯಿತೆಂದು ತಿಳಿಯುತ್ತಾರೆ. ಪರಂಪರೆಯ ಉಗಮ ಏನೇ ಇದ್ದರೂ ಇದು ಶ್ರಾವಕರಿಗೂ ಮುನಿಗಳಿಗೂ ಇಬ್ಬರಿಗೂ ಮಹತ್ವದ ಸಮಯವಾಗಿದೆ ಎಂಬುದು ಗಮನಾರ್ಹ.

ದಶಲಕ್ಷಣ ಪರ್ವವು ಮುನಿಧರ್ಮದ ಅಂಗವಾಗಿ ಬಂದರೂ ಶ್ರಾವಕ ಧರ್ಮದವರಿಗೂ ಆಚರಣಯೋಗ್ಯವಾಗಿದೆ. ಶ್ರಾವಕ ಚಾರಿತ್ರ ಧರ್ಮದಲ್ಲಿ ಪಂಚಾಣುವ್ರತಗಳು, ಮೂರು ಗುಣ ವ್ರತಗಳು, ನಾಲ್ಕು ಶಿಕ್ಷಾವ್ರತಗಳು ಸಮಾವೇಶವಾದರೆ ; ಮುನಿಧರ್ಮದಲ್ಲಿ ಪಂಚಸಮಿತಿ ಗಳು, ಪಂಚ ಮಹಾವ್ರತಗಳು, ತ್ರಿಗುಪ್ತಿಗಳು, ದಶಧರ್ಮಗಳು, ದ್ವಾದಶಾನುಪ್ರೇಕ್ಷೆಗಳು, ಇಪ್ಪತ್ತೆರಡು ಪರೀಷಹಗಳು ಸಮಾವೇಶ ವಾಗುತ್ತವೆ. ರತ್ನತ್ರಯದಲ್ಲಿ ಸಮ್ಯಕ್ ಚಾರಿತ್ರ್ಯದ ಅಂಗವಾಗಿ ಬರುವ ಈ ಆಚರಣೆಯಲ್ಲಿ, ಗೃಹಸ್ಥರು ಆಚರಿಸುವ ಆಚರಣೆಗೆ ವಿಕಲ ಚಾರಿತ್ರವೆಂದೂ ಮುನಿಗಳು ಆಚರಿಸುವ ಆಚರಣೆಗೆ ಸಕಲ ಚಾರಿತ್ರ ವೆಂದೂ ಕರೆಯುತ್ತಾರೆ. ಆತ್ಮೋನ್ನತಿಗೆ ಗಹನಧ್ಯಾನ, ಶುಷ್ಕಸಾಧನ, ನೀರಸ ಉಪಾಸನೆ, ಎಂದು ಸಾಮಾನ್ಯರಿಗೆ ಅನಿಸುವ ಮಾರ್ಗಗಳು ಮುನಿಗಳಿಗೆ ಮಾತ್ರ ಸುಲಭಸಾಧ್ಯವಾಗಿರುತ್ತದೆ. ಭಜನೆ-ಪ್ರಾರ್ಥನೆ ಗಳ ನಾದಸುಖ, ಪುಷ್ಪ-ದ್ರವ್ಯಗಳ ಅರ್ಚನಾ ಸೌಂದರ್ಯ ಮೊದಲಾದ ಕಲಾಭಿವ್ಯಕ್ತಿಯ ಸರಳ ಸಾಧಾರಣ ಮಾರ್ಗಗಳ ಅಗತ್ಯವಿರುತ್ತದೆ. ಈ ಎರಡರ ಸುಂದರ ಸಮನ್ವಯವನ್ನು ದಶಲಕ್ಷಣ ಪರ್ವದ ಆಚರಣೆ ಯಲ್ಲಿ ಕಾಣುತ್ತೇವೆ.

ಒಟ್ಟಿನಲ್ಲಿ ಎಲ್ಲ ಪಂಥದವರಿಗೂ ಎಲ್ಲ ವರ್ಗದವರಿಗೂ "ಆತ್ಮ ಕಾಲುಷ್ಯವನ್ನು ದೂರೀಕರಿಸುವ, ಮನವನ್ನು ಶುದ್ಧಿಗೊಳಿಸುವ,

ವಾಣಿಯನ್ನು ನಿರ್ಮಲವಾಗಿಸುವ, ಕಾರ್ಯವನ್ನು ಶುಚಿಗೊಳಿಸುವ, ಶುಭ ಭಾವೋತ್ಪನ್ನ ಮಾಡುವ ಈ ಪರ್ವವು, ಮಾನವನ ವ್ಯಕ್ತಿತ್ವವನ್ನು ನೈತಿಕವಾಗಿ, ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ ಉನ್ನತಿಗೊಯ್ದು ಭೌತಿಕ ಸುಖದಿಂದ ಶಾಶ್ವತ ಸುಖದತ್ತ ಒಯ್ಯುವ ಸರ್ವಜನಾದರಣೀಯ ಪರ್ವವಾಗಿದೆ.

'ಪರ್ಯುಷಣ' ಪದರೂಪ

ಪರಿ √ಉಷ್×ಲ್ಯುಟ್ ಸೇರಿ ಪರ್ಯುಷಣ ಆಗಿದೆ. ಪೂಜಾ, ಸಾಧನೆ, ಅರ್ಚನೆ, ಸೇವೆ ಎಂಬ ಅರ್ಥಗಳಿವೆ ಈ ಪದಕ್ಕೆ, ಪರಿ× ಉಷಣ=ಪೂರ್ಣವಾಗಿ (ಒಂದು ಕಡೆ) ವಾಸ ಮಾಡುವುದು, ಎಂದೂ ಅರ್ಥೈಸುತ್ತಾರೆ. ಪರ್ಯುಷಣ ಅಥವಾ ಪರ್ಯೂಷಣ ಪದಕ್ಕೆ ಪ್ರಾಕೃತ ಪದರೂಪಗಳಾದ ಪಜ್ಜೂಸಣಾ, ಪಜ್ಜುಸಣಾ, ಪಜ್ಜೋಸಣ ಎಂಬ ಮೂರು ಪದಗಳನ್ನು ಪರ್ಯಾಯವಾಗಿ ಬಳಸುತ್ತಾರೆ. ಅರ್ಥ ಪ್ರಯೋಗದ ದೃಷ್ಟಿಯಲ್ಲಿ,"ಮಳೆಗಾಲದ ದಿನಗಳಲ್ಲಿ ಸ್ಥಿರವಾಗಿ ಒಂದೆಡೆ ನೆಲೆ ನಿಲ್ಲುವುದು ; ಆತ್ಮ ಸಾನ್ನಿಧ್ಯ ಸೇರಲು ಸಾಧನೆ ಮಾಡುವುದು ; ಕಷಾಯಗಳನ್ನು ಹೋಗಲಾಡಿಸುವುದು" ಎಂದು ಅರ್ಥೈಸುತ್ತಾರೆ. ಶ್ವೇತಾಂಬರ ಜೈನಾಗಮ ಗ್ರಂಥಗಳಲ್ಲಿ"ಪರಿಯಾಯವತ್ಥಣಾ ಪಜ್ಜೋಸವಣಾ, ಪರಿವಸಣಾ, ಪಡಸವೋಸರಣ, ಠವಣಾ ಮತ್ತು ಜೇಠ್ಠೋಗ್ಗಹ" ಎಂಬ ಹೆಸರುಗಳನ್ನು ಈ ಪರ್ವದ ಬಗ್ಗೆ ಉಲ್ಲೇಖಿಸಿದೆ.

ದಶಲಕ್ಷಣಪರ್ವದ ಪದವಿಶೇಷ

ದಶಲಕ್ಷಣ ಪರ್ವದ ಹೆಸರಿನ ಔಚಿತ್ಯವನ್ನು ಹಿಂದೆಯೇ ಪ್ರಸ್ತಾಪಿಸಲಾಗಿದೆ. ದಶದಿನಗಳ ಆಚರಣೆ, ದಶಧರ್ಮಗಳ ನಿರೂಪಣೆ, ಪರ್ವ ಪದದ ಮಹತ್ವ,ದಶದಿನಗಳ ಕ್ರಮಪದ್ಧತಿ, ಇವುಗಳಲ್ಲೂ ವಿಶೇಷಾರ್ಥ

ಗಳಿವೆ. ಜೈನಾಗಮಗಳಲ್ಲಿ ಗ್ರಾಮಧರ್ಮ, ನಗರಧರ್ಮ, ರಾಷ್ಟ್ರಧರ್ಮ, ಪಾಖಂಡಧರ್ಮ, ಕುಲಧರ್ಮ - ಗಣಧರ್ಮ, ಸಂಘಧರ್ಮ, ಶ್ರುತ ಧರ್ಮ, ಚಾರಿತ್ರಧರ್ಮ, ಅಸ್ತಿಕಾಯಧರ್ಮ ಎಂದು ದಶಧರ್ಮವನ್ನು ನಿರೂಪಿಸಿರುವುದೂ ವೈದಿಕಧರ್ಮದಲ್ಲಿ ಮನು ದಶಲಕ್ಷಣಗಳನ್ನು ಹೇಳಿ ರುವುದೂ 'ದಶ' ಪದ ಅನೇಕ ಸಂಖ್ಯಾರ್ಥಗಳೂ ದಶಲಕ್ಷಣ ಪರ್ವದ ಪದ ವಿಶೇಷವನ್ನು ಸಾರುತ್ತವೆ.

ರಾಷ್ಟ್ರೀಯ ಸಮಸ್ಯೆಗಳಿಗೆ ಸಂಜೀವಿನಿ

ಪರ್ಯುಷಣ ಅಥವಾ ದಶಲಕ್ಷಣ ಪರ್ವವು ಕೇವಲ ಜೈನಧರ್ಮ ಕ್ಕಷ್ಟೇ ಮೀಸಲಾದ ಪರ್ವವಾಗಬೇಕಿಲ್ಲ. ಏಕೆಂದರೆ ಅದು ಸರ್ವ ಜನಾಂಗದ ಜನಾದರಣೀಯವಾಗಬಲ್ಲ ವಿಶ್ವಧರ್ಮದ ಲಕ್ಷಣಗಳನ್ನು ಹೊಂದಿರುವುದಲ್ಲದೆ, ಇಂದಿನ ನಮ್ಮ ರಾಷ್ಟ್ರೀಯ ಸಮಸ್ಯೆಗಳಿಗೆಲ್ಲಾ ಆರ್ಥಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಕಂಡು ಬರುತ್ತಿರುವ ಕುಂದುಕೊರತೆಗಳಿಗೆ–ಪರಿಹಾರ ನೀಡಿ ರಾಷ್ಟ್ರಕಲ್ಯಾಣ, ಮಾನವ ಕಲ್ಯಾಣವನ್ನು ಏಕಕಾಲದಲ್ಲಿ ಸಾಧಿಸುವ ದಿವ್ಯ ಸಂಜೀವಿನಿ ಆಗಿದೆ. ಈ ದೃಷ್ಟಿಯಿಂದ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿ ಸಿದೆ.

ದಶಲಕ್ಷಣ ಪರ್ವದಲ್ಲಿ **ಕ್ಷಮೆಗೆ** ಅರ್ಥಾತ್ ಅಕ್ರೋಧಕ್ಕೆ ಆದ್ಯ ಸ್ಥಾನವಿದೆ. ರಾಜಕೀಯ ಕ್ಷೇತ್ರದಲ್ಲಿ ಕ್ಷಮಾಗುಣವಿದ್ದಿದ್ದರೆ ಪಾಕಿ ಸ್ಥಾನ – ಹಿಂದೂಸ್ಥಾನ, ಪಾಕ್ - ಬಾಂಗ್ಲಾ, ಭಾರತ - ಚೀಣಾ ಮೊದಲಾದ ಯುದ್ಧಗಳ ನಡೆಯುತ್ತಿರಲಿಲ್ಲ. ಈ ಯುದ್ಧಗಳಿಗೆಲ್ಲಾ ಒಂದು ರಾಷ್ಟ್ರಕ್ಕೆ ಇನ್ನೊಂದು ರಾಷ್ಟ್ರದ ಮೇಲೆ ಇರುವ ಕ್ರೋಧವೇ ಮೂಲ ಕಾರಣವಾಗಿದೆ.

ಸಾರ್ವಜನಿಕ ಕ್ಷೇತ್ರದಲ್ಲಿ **ಮಾರ್ದವಗುಣದ** ಅವಶ್ಯಕತೆ ಬಹಳ ಇದೆ. ಅಧಿಕಾರದಲ್ಲಿರುವವರು ದರ್ಪಿಷ್ಟರಾಗಿ ವರ್ತಿಸುವುದು ಸಾಮಾನ್ಯವಾದ ಸಂಗತಿ. ಮಾರ್ದವಗುಣ ದರ್ಪಿಷ್ಟರಲ್ಲಿ ಕಂಡುಬಂದರೆ ಸಾರ್ವಜನಿಕರಿಗೆ, ನೆಮ್ಮದಿ, ಬಡವರಿಗೆ ನ್ಯಾಯ ದೊರಕಲು ಶಕ್ಯವಿದೆ. ವಿದೇಶಗಳಲ್ಲಿ ಅಧಿಕಾರಿಗಳು ತೋರುವ ಸೌಜನ್ಯವನ್ನು ಹೊಗಳುವ ನಮ್ಮ ಜನ ನಮ್ಮ ಸಂಸ್ಕೃತಿಯಲ್ಲೇ ಇರುವ ಈ ಗುಣವನ್ನು ಅಳವಡಿಸಿಕೊಳ್ಳಬಾರದೇಕೆ ?

ವಾಣಿಜ್ಯ ಕ್ಷೇತ್ರದಲ್ಲಿ ಮತ್ತು ಆರ್ಥಿಕ ರಂಗದಲ್ಲಿ **ಆರ್ಜವಗುಣ** ಇಲ್ಲದ ಪ್ರಯುಕ್ತ ಬೆಲೆ ಏರಿಕೆ, ಹಣದುಬ್ಬರ, ಕಳ್ಳ ಸಾಗಾಣಿಕೆ, ಮೊದಲಾದ ಅನಿಷ್ಟಗಳಿಗೆ ಒಳಗಾಗಿ ದೇಶದಲ್ಲಿ ಅನೇಕ ವಿದ್ರೋಹದ ಕಾರ್ಯಗಳು ಸಾಗುತ್ತಿವೆ. ಅಧಿಕಾರಿಗಳಲ್ಲಿ ಕಪಟರಾಹಿತ್ಯ ಸರಳತನ ಗುಣವಿದ್ದಲ್ಲಿ ಜನತೆಗೆ ಸುಖಜೀವನ ಗಗನ ಕುಸುಮವಾಗದು.

ಶೌಚ ಜೀವನವು ರಾಷ್ಟ್ರೀಯ ಸಂಸ್ಕೃತಿಯ ಸಂವರ್ಧನೆಗೆ ಬೆನ್ನೆಲುಬಾಗಿದೆ. ದೇಶದ ಜನರಲ್ಲಿ ಅಂತರಂಗ ಶುದ್ಧಿ ಇಲ್ಲದೆ ಭ್ರಷ್ಟಾಚಾರ, ಲಂಚ, ಅನಾಚಾರಗಳ ತಾಂಡವ ಕಾಣುತ್ತಿದೆ. ಬಹಿರಂಗ ಶುದ್ಧಿಯಿಲ್ಲದೆ ಕೊಳಚೆ ಪ್ರದೇಶಗಳ ಸಮಸ್ಯೆ ರೋಗರುಜಿನಗಳ ಪೀಡೆ ಕಲುಷಿತ ವಾತಾವರಣದ ಸಮಸ್ಯೆ ನಮ್ಮನ್ನು ಕಾಡುತ್ತಿವೆ. ನಮ್ಮ ರಾಷ್ಟ್ರೀಯ ಜೀವನದಲ್ಲಿ ಶೌಚಗುಣ ಅಳವಟ್ಟು ಜನರೆಲ್ಲಾ ಶೌಚಾಂಜನೇಯರಾದರೆ ಬಾಳು ಹಸನಾಗದೆ ಇರಲು ಸಾಧ್ಯವಿಲ್ಲ.

ಸತ್ಯ ಪರಿಪಾಲನೆಯು ರಾಜಕೀಯ ಕ್ಷೇತ್ರಶುದ್ಧಿಗೆ ಪ್ರಜಾಪ್ರಭುತ್ವದ ಸಾರ್ಥಕತೆಗೆ, ಮೂಲಾಧಾರವಾಗಿದೆ. ಚುನಾವಣೆಗಳಲ್ಲಿ ನೀಡುವ ವಾಗ್ದಾನಗಳಲ್ಲಿ,ಅಧಿಕಾರಾರೂಢ ಮಂತ್ರಿಗಳ ಭರವಸೆಗಳಲ್ಲಿ, ಆದಾಯ ತೆರಿಗೆ ಲೆಕ್ಕ ಒಪ್ಪಿಸುವ ಶ್ರೀಮಂತರಲ್ಲಿ, ಆಸ್ತಿಪಾಸ್ತಿಗಳ

ಘೋಷಣೆಗಳಲ್ಲಿ ಗರೀಬಿ ಹಟಾವೊ ಚಳುವಳಿಗಳಲ್ಲಿ ನಿಜವಾಗಿಯೂ ಸತ್ಯ ದರ್ಶನವಾದರೆ ನಮ್ಮ ದೇಶ ರಾಮರಾಜ್ಯವಾಗದಿರದು.

ಸಂಯಮಗುಣ ರಾಷ್ಟ್ರಕ್ಕೂ ವ್ಯಕ್ತಿಗೂ ತಾರಕಮಂತ್ರವಾಗಬೇಕು. ಕುಟುಂಬ ಯೋಜನೆಯಂಥ ಉದ್ದೇಶಗಳು ನೆರವಾಗಲು, ಜನಸಂಖ್ಯಾ ಸಮಸ್ಯೆ ಪರಿಹಾರವಾಗಲು, ಅನೈತಿಕ ಜೀವನವಿಲ್ಲದಿರಲು, ಶ್ರೀಮಂತಿಕೆಯ ಭೋಗಜೀವನ ಕುಗ್ಗಲು, ಸಂಯಮ ಸಿದ್ಧೌಷಧ. ಸಂಯಮವಿದ್ದರೆ ಯಮನೂ ಹೆದರುತ್ತಾನೆ, ಎಂಬ ಸೂಕ್ತಿಯಲ್ಲಿ ಸಾಕಷ್ಟು ಸತ್ಯವಿದೆ.

ತಪೋಗುಣವಂತು ರಾಷ್ಟ್ರ ನಿರ್ಮಾಣಕ್ಕೆ ಅತ್ಯಗತ್ಯ :ಹಿನ್ನೆಲೆಯ ಶಕ್ತಿಯಾಗಿದೆ. ವಿಜಯ ವಿದ್ಯಾರಣ್ಯರ ತಪೋಶಕ್ತಿ ವಿಜಯನಗರ ಸಾಮ್ರಾಜದ ಸ್ಥಾಪನೆಗೆ ಕಾರಣವಾಯಿತು ; ಮಹಾವೀರ, ಬುದ್ಧ ಮೊದಲಾದ ಮಹಾಪುರುಷರ ತಪೋಗುಣ ಲೋಕಕಲ್ಯಾಣಕ್ಕೆ ಕಾರಣವಾದುದನ್ನು ನಾವೆಲ್ಲ ಬಲ್ಲೆವು. ನೈತಿಕಶಕ್ತಿ ದಿವಾಳಿ ಆಗದೆ ಧಾರ್ಮಿಕ ಕ್ಷೇತ್ರ ಪರಿಶುದ್ಧವಿರಲು, ಸಾಧು ಸಂನ್ಯಾಸಿಗಳಲ್ಲಿ ಅಧಿಕ ತಪೋಗುಣ ಇರಬೇಕಾದುದು ಅತ್ಯಗತ್ಯ. ಜನತೆಗೆ ಮಾರ್ಗದರ್ಶನ ನೀಡುವ ಧಾರ್ಮಿಕನಾಯಕರಿಗೆ ಅಂತಃಶಕ್ತಿಯೆಂದರೆ ತಪ. ಇಂದು ನಮ್ಮಲ್ಲಿ ಗೋಮುಖ ವ್ಯಾಘ್ರ–ಆಷಾಢಭೂತಿಗಳ, ಜರತಾರಿ ಜಗದ್ಗುರುಗಳ ಬಯಲಾಡಂಬರ, ಕಪಟಾಚಾರಗಳು ಹೆಚ್ಚಲು ಅವರಲ್ಲಿ ತಪೋಗುಣ ಕುಗ್ಗಿರುವುದೇ ಕಾರಣವಾಗಿದೆ.

ತ್ಯಾಗಗುಣದ ಅವಶ್ಯಕತೆ ಇಂದಿನ ಪರಿಸ್ಥಿತಿಯಲ್ಲಿ ಮುಖ್ಯವಾಗಿದೆ. ನಮ್ಮ ದೇಶದ ಉಳಿತಾಯ ಯೋಜನೆ, ಸರ್ಕಾರೀ - ಸಾರ್ವಜನಿಕ ಸಾಲಗಳಿಗೆ ನೆರವು, ಗರೀಬಿ ಹಟಾವೋ ಸಾರ್ಥಕತೆ, ಕಾಳಸಂತೆ ನಿರ್ಮೂಲನ ಆಗಲು ತ್ಯಾಗಗುಣ ಜನರಲ್ಲಿ ಅದರಲ್ಲೂ ವಿಶೇಷ

ವಾಗಿ ಶ್ರೀಮಂತರಲ್ಲಿ ಮೂಡಿ ಬರಬೇಕು. ನಮ್ಮ ದೇಶದ ಇತಿಹಾಸದಲ್ಲಿ ತ್ಯಾಗಮೂರ್ತಿಗಳ ನಿದರ್ಶನ ಅನೇಕವಾಗಿದ್ದರೂ ಇಂದಿನ ನಮ್ಮ ಬದುಕಿನಲ್ಲಿ ತ್ಯಾಗಜೀವನಕ್ಕಿಂತ ಭೋಗಜೀವನಕ್ಕೆ ಪ್ರಾಶಸ್ತ್ಯ ಸಿಕ್ಕಿರುವುದರಿಂದ ಅನೇಕ ತೊಡಕುಗಳುಂಟಾಗಿವೆ.

ಆಕಿಂಚನ್ಯ ಭಾವ ಬಂದಾಗ ನಶ್ವರ ಮೋಹ ಹೋಗಿ ಲೌಕಿಕ ಕೀರ್ತಿ - ಸಂಪತ್ತುಗಳ ವಿಚಾರದಲ್ಲಿ ಮೇಲು, ಕೀಳು ವಿಷಯದಲ್ಲಿ ಸಮತೆ ಬಂದು ಸ್ಥಿತಪ್ರಜ್ಞತೆ ಕಾಣಲು ಸಾಧ್ಯವಿದೆ. ಪರಿಣಾಮವಾಗಿ ಇಂದಿನ ಸಮಾಜವಾದ ಕೇವಲ ವಾದ ಆಗಿರದೆ ಅಸ್ತಿತ್ವಕ್ಕೆ ಬರಲು ಶಕ್ಯವಿದೆ.

ಬ್ರಹ್ಮಚರ್ಯ ಗುಣವಂತೂ ದೇಶದ ಪ್ರಜಾಕೋಟಿಯ ಧ್ಯೇಯ ಮಂತ್ರವಾಗಬೇಕು. ದೇಶದ ಜನತೆಯ ಶಾರೀರಕ ಸಂಪತ್ತು, ಧೀಸಂಪತ್ತು, ಶೀಲಸಂಪತ್ತು, ವರ್ಧಿಸಲು ಇದು ಅತ್ಯಗತ್ಯ. ಅಶ್ಲೀಲ ಚಲನ ಚಿತ್ರ, ಸಾಹಿತ್ಯ, ಕಲಾಮಾಧ್ಯಮಗಳು ಶುಚಿಗೊಳ್ಳಲು, ವೇಶ್ಯಾ ಸಮಸ್ಯೆ ಕುಗ್ಗಲು, ಜನತೆ ನೀತಿವಂತರಾಗಿ ವೀರ್ಯವಂತರಾಗಲು ಬ್ರಹ್ಮಚರ್ಯ ಗುಣವೊಂದೇ ಮಾರ್ಗ. ಭಾರತದ ಆಧ್ಯಾತ್ಮಿಕ ಔನ್ನತ್ಯ ಜಗತ್ತಿನಲ್ಲೆಲ್ಲಾ ಮತ್ತೆ ಪ್ರಸರಿಸಲು ಇಹದುನ್ನತಿ - ಪರದ ಶ್ರೇಯ ಉಂಟಾಗಲು ಬ್ರಹ್ಮಚರ್ಯ ಏಕೈಕ ಮಾರ್ಗವಾಗಿದೆ. ಕ್ಷಮಾಗುಣದ ಸಾರ್ಥಕತೆ ಬ್ರಹ್ಮಚರ್ಯದ ಪಾಲನೆಯಲ್ಲಿದೆ. ಉಳಿದ ಲಕ್ಷಣಗಳು ಧರ್ಮದ ರತ್ನಾವಳಿಸರದ ಅನರ್ಘ್ಯ ನವರತ್ನಗಳಾಗಿವೆ.

ಸಮಗ್ರದಲ್ಲಿ ನೋಡಿದರೆ, ದಶಲಕ್ಷಣದ ಪರ್ವ ಕೇವಲ ಜೈನ ಧರ್ಮೀಯ, ಮತೀಯ ಆಚರಣೆ ಆಗಬೇಕಿಲ್ಲ. ಅದು ವಿಶ್ವಮಾನವರ ಹಬ್ಬ, ಮಾನವ ಕುಲಕೋಟಿಯ ಆತ್ಮೋದ್ಧಾರಕ್ಕೆ, ದೇಶೋದ್ಧಾರಕ್ಕೆ ಆದರ್ಶ ಜನಾಂಗದ ನಿರ್ಮಾಣಕ್ಕೆ ರಾಷ್ಟ್ರೀಯ ಸಮಸ್ಯೆಗಳ ಪರಿಹಾರಕ್ಕೆ

ನವಚೇತನ ಮಾರ್ಗದ ಮಾಧ್ಯಮವಾಗಬೇಕಾಗಿದೆ. ಈ ದೃಷ್ಟಿಯಲ್ಲಿ ಸಮಸ್ತ ಜನಾಂಗದವರು ಆಚರಿಸುವಂತೆ ಸರ್ವ ಜನಾದರಣೀಯ ಪರ್ವವಾಗುವಂತೆ ಅದರಲ್ಲಿನ ವಿಶ್ವತತ್ವಗಳು ಮಾನವರೆಲ್ಲರ ಅಂತರಂಗಕ್ಕೆ ತಲುಪುವಂತೆ ಮಾಡುವ ಹೊಣೆ ಸಮಸ್ತ ಜೈನ ಧರ್ಮೀಯರ ಮೇಲಿದೆ. ಈ ದಿಶೆಯಲ್ಲಿ ಜಿನಧರ್ಮಾಸಕ್ತರೆಲ್ಲ ಕಾರ್ಯೋನ್ಮುಖರಾಗಬೇಕಿದೆ. ಒಟ್ಟಿನಲ್ಲಿ ದಶಲಕ್ಷಣ ಪರ್ವವು ಜಗತ್ತಿಗೆ ಭಾರತವಿತ್ತ, ವಿಶ್ವಧರ್ಮಕ್ಕೆ ಜೈನಧರ್ಮವಿತ್ತ ಶ್ರೇಷ್ಠ ಸಾಂಸ್ಕೃತಿಕ ಕೊಡುಗೆ ಎಂದು ಹೇಳಬಹುದು.

ಅಧ್ಯಾಯ ೨

ದಶಲಾಕ್ಷಣಿಕ ನೋಂಪಿಯು ಕಥೆ

ಜಂಬೂದ್ವೀಪದ ಭರತಕ್ಷೇತ್ರ. ಅದರಲ್ಲಿ ಆರ್ಯಖಂಡ. ಆರ್ಯಖಂಡದಲ್ಲಿ ಮಗಧ ದೇಶವಿತ್ತು. ಅಲ್ಲಿ ಅನುಪಮವಾದ ರಾಜಗೃಹವೆಂಬ ರಾಜಧಾನಿ. ಅದನ್ನು ಆಳುವ ದೊರೆ ಶ್ರೇಣಿಕ ಆತ ಮಹಾಮಂಡಲೇಶ್ವರ. ಆತನು ಪರಮಕ್ಷಾಯಿಕ ಸಮ್ಯಕ್ ದೃಷ್ಟಿಯುಳ್ಳವನು. ಆತನ ಪಟ್ಟದರಸಿ ಚೇಳಿನೀ ಮಹಾದೇವಿ. ಆಕೆ ಪತಿವ್ರತೆ, ಸುಗುಣಸಂಪನ್ನೆ, ದರ್ಶನಬುದ್ಧಿ ಉಳ್ಳವಳು ಆಗಿದ್ದಳು. ಹೀಗೆ ಶ್ರೇಣಿಕ ಮಹಾರಾಜನು ಚೇಳಿನೀದೇವಿಯೊಂದಿಗೆ ಸುಖಸಂಕಥಾ ವಿನೋದದಿಂದ ರಾಜ್ಯಭಾರ ಮಾಡುತ್ತಿದ್ದನು.

ಹೀಗಿರಲು ಒಂದು ದಿನ ರಾಜಗೃಹ ಉದ್ಯಾನದ ಬಳಿ ಇದ್ದ ವಿಪುಲಾಚಲಗಿರಿಯಲ್ಲಿ ಹದಿನೆಂಟು ದೋಷಗಳಿಂದ ದೂರನಾದವನೂ ಅಷ್ಟಮಹಾಪ್ರಾತಿಹಾರ್ಯಸಮನ್ವಿತನೂ ಆದ ಶ್ರೀ ವೀರವರ್ಧಮಾನ ಸ್ವಾಮಿಯ ಸಮವಸರಣವು ಬಿಜಯಂಗೈದಿತು. ಶ್ರೀ ವೀರವರ್ಧಮಾನಸ್ವಾಮಿಯ ಮಹಿಮಾಸಾಮರ್ಥ್ಯದಿಂದ ಆ ಪ್ರದೇಶದಲ್ಲಿ ಹಾವು – ಮುಂಗುಸಿ, ಸಿಂಹ–ಆನೆ, ಜಿಂಕೆ–ಶಾರ್ದೂಲ ಮುಂತಾದ ಪ್ರಾಣಿಗಳು ತಮ್ಮ ತಮ್ಮ ಜಾತಿವೈರವನ್ನು ತೊರೆದು ಲೀಲಾ ವಿನೋದದಿಂದ ಇರುತ್ತಿದ್ದವು. ಆಗ ಗಿಡಮರಗಳೆಲ್ಲ ಫಲಪುಷ್ಪಗಳಿಂದ ಕಂಗೊಳಿಸಿದವು. ಆ ಕಾಲದಲ್ಲಿ ಹುಟ್ಟ ಕಂಗೊಳಿದ ಫಲಪುಷ್ಪ

ಗಳನ್ನು ಕಂಡು ಆಶ್ಚರ್ಯಭರಿತರಾಗಿ ಅಲ್ಲಿಯ ವನಪಾಲಕನು ಅವುಗಳನ್ನು ತಂದು ಅರಸನಿಗೆ ಅರ್ಪಿಸಿದನು. ಸಾಷ್ಟಾಂಗವೆರಗಿದನು. ವಿಪುಲಾಚಲ ಶಿಖರದಲ್ಲಿ ಶ್ರೀ ವೀರವರ್ಧಮಾನಸ್ವಾಮಿಯ ಸಮವಸರಣವು ಬಂದು ನೆಲೆಸಿದ ಸುದ್ದಿಯನ್ನು ಬಿನ್ನವಿಸಿಕೊಂಡನು.

ಶ್ರೇಣಿಕ ಮಹಾರಾಜನು ಆ ಸಂಗತಿಯನ್ನು ಕೇಳಿದ ಕೂಡಲೇ ಸಿಂಹಾಸನವನ್ನು ಬಿಟ್ಟೆದ್ದು ಆ ದಿಕ್ಕಿಗೆ ಏಳು ಅಡಿಗಳ ದೂರ ನಡೆದು ಸಾಷ್ಟಾಂಗ ಪ್ರಣತನಾಗಿ ವನಪಾಲಕನಿಗೆ ಅಂಗಚಿತ್ರವನ್ನಿತ್ತು ಕಳಿಸಿದನು. ಇತ್ತ ಆನಂದ ಭೇರಿಯನ್ನು ನಗರದಲ್ಲೆಲ್ಲಾ ಹೊಯಿಸಿದನು. ಪರಿಜನ ಮತ್ತು ಪುರಜನ ಹಾಗೂ ಅಂತಃಪುರ ಜನರನ್ನು ಕೂಡಿಕೊಂಡು ಪಾದಮಾರ್ಗದಲ್ಲಿ ಸಂಚರಿಸಿ ಸಮವಸರಣವನ್ನು ಪ್ರವೇಶಿಸಿದನು. ಗಂಧಕುಟಿಯನ್ನು ಮೂರು ಪ್ರದಕ್ಷಿಣೆ ಹಾಕಿದನು. ವಸ್ತುಸ್ತವ, ರೂಪಸ್ತವ, ಗುಣಸ್ತವ ಮೊದಲಾದ ಸಾವಿರಾರು ಸ್ತುತಿಗಳಿಂದ ಸ್ತುತಿಸಿದನು. ಹಲವಾರು ಬಗೆಯ ಅರ್ಚನೆಗಳಿಂದ ಅರ್ಚಿಸಿದನು. ಸಾಷ್ಟಾಂಗ ನಮಸ್ಕಾರಮಾಡಿ ಭಕ್ತಿಗೌರವಗಳನ್ನು ಸಲ್ಲಿಸಿದನು. ಅನಂತರ ಗೌತಮ ಗಣಧರರೇ ಮೊದಲಾದ ಮುನಿವೃಂದಕ್ಕೆ ವಂದಿಸಿದನು ; ಮನುಷ್ಯ ಕೋಷ್ಠದೊಳಗೆ ಕುಳಿತನು. ಆ ಮೇಲೆ ಪರಮೇಶ್ವರನು ನಿರೂಪಿಸಿದ ಜೀವಾದಿಪದಾರ್ಥಗಳ ಸ್ವರೂಪವನ್ನುವನ್ನು ಸಾಗಾರ ಮತ್ತು ಅನಾಗಾರ ಧರ್ಮಸ್ವರೂಪವನ್ನು ಆಲಿಸಿದನು. ಸಂತುಷ್ಟಚಿತ್ತನಾದನು. ಆನಂತರದಲ್ಲಿ ಶ್ರೇಣಿಕ ಮಹಾರಾಜನು ಮತ್ತೆ ವಂದಿಸಿ ಗೌತಮಸ್ವಾಮಿಗೆ "ಹೇ ! ಸ್ವಾಮಿಯೇ, ಸಂಸಾರ ಬಂಧನದ ವಿಚ್ಛೇದನಕ್ಕೆ ಕಾರಣವಾದ ನೋಂಪಿಯೊಂದನ್ನು ಅಪ್ಪಣೆಮಾಡಿ" ಎಂದು ಬಿನ್ನವಿಸಿಕೊಂಡನು. ಆಗ ಆ ಗೌತಮ ಮುನೀಶ್ವರರು ಈ ಮುಂದಿನಂತೆ ನಿರೂಪಿಸಿದರು-

"ಎಲೈ ಮಹಾರಾಜನೇ ! ಕೇಳು. ಧಾತಕೀಷಂಡವೆಂಬ ದ್ವೀಪ. ಅದರ ಪೂರ್ವಮೇರುವಿನ ದಕ್ಷಿಣಭಾಗ. ಅಲ್ಲಿ ಸೀತೋದಾ ನದಿ ಪ್ರವಹಿಸುತ್ತದೆ. ಆ ನದಿಯ ಸಮೀಪದಲ್ಲಿ ವಿಶಾಲನಗರವೆಂಬ ಪೊಳಲು ಇತ್ತು. ಪ್ರಿಯಕರನೆಂಬ ರಾಜನು ಅಳುತ್ತಿದ್ದನು.

ಆತನಿಗೆ ಪ್ರಿಯಂಕರಿ ಎಂಬುವಳು ಅರಸಿ ಆಗಿದ್ದಳು. ಅವರಿಬ್ಬರ ಪ್ರೇಮದ ಪುತ್ರಿ ಮೃಗಾಂಕರೇಖೆ.

ಆತನ ಮಂತ್ರಿ ಮಣಿಶ್ರೇಣಿಕರ. ಆ ಮಂತ್ರಿಯ ಹೆಂಡತಿಯ ಹೆಸರು ಶಶಿಪ್ರಭೆ. ಇವರಿಬ್ಬರಿಗೆ ಜನಿಸಿದ ಪುತ್ರಿಯೇ ಕಾಮಸೇನೆ.

ಆ ರಾಜನ ರಾಜವರ್ತಕ ಗುಣಶೇಖರನಾಗಿದ್ದನು. ಗುಣಶೇಖರನ ವಲ್ಲಭೆ ಶೀಲಭದ್ರೆ. ಅವರಿಬ್ಬರ ಮಗಳ ಹೆಸರು ಮದನರೇಖೆ.

ಆ ದೊರೆಯ ತಳವಾರನಾಗಿದ್ದವನು ಲಕ್ಷಭಟ. ಆತನ ಪತ್ನಿ ಚಂದ್ರರೇಖೆ ಅವರಿಬ್ಬರಿಗೆ ಹುಟ್ಟಿದ ಮಗಳೇ ರೋಹಿಣಿ.

ರಾಜಪುತ್ರಿಯಾದ ಮೃಗಾಂಕರೇಖೆ, ಮಂತ್ರಿ ಕುಮಾರಿಯಾದ ಕಾಮಸೇನೆ ರಾಜಶ್ರೇಷ್ಠಿಯ ಮಗಳಾದ ಮದನರೇಖೆ ಮತ್ತು ತಳವಾರನ ಸುತೆಯಾದ ರೋಹಿಣಿ ಈ ನಾಲ್ವರು ಕನ್ಯೆಯರೂ ಜೈನೋಪಾಧ್ಯಾಯರ ಸನ್ನಿಧಾನದಲ್ಲಿ ಶಾಸ್ತ್ರಾಭ್ಯಾಸವನ್ನು ಮಾಡುತ್ತಿದ್ದರು.

ಹೀಗಿರಲು ಒಂದು ದಿನ ಈ ನಾಲ್ಕುಮಂದಿ ಗೆಳತಿಯರೂ ತಮ್ಮ ತಮ್ಮ ತಾಯಿತಂದೆಯರ ಅಪ್ಪಣೆಯನ್ನು ಪಡೆದು ಕೆಳದಿಯರೊಡನೆ ಕೂಡಿಕೊಂಡು ಕ್ರೀಡಾ ನಿಮಿತ್ತ ಚೈತ್ರವನವೆಂಬ ಉದ್ಯಾನಕ್ಕೆ ಹೋದರು. ಅಲ್ಲಿ ಮಾವಿನಮರ, ಸಂಪಿಗೆಮರ ಮೊದಲಾದ

ವೃಕ್ಷಗಳು ಕಂಗೊಳಿಸುತ್ತಿದ್ದವು. ಮಾಲತೀಲತೆ ಮಲ್ಲಿಗೆ ಬಳ್ಳಿ, ಮೊದಲಾದ ಹೂಬಳ್ಳಿಗಳು ಬೆಳೆದಿದ್ದವು. ಗಂಧಬಟ್ಟಲು, ಕರವೀರ, ಮಂದಾರ ಮೊದಲಾದ ಪುಷ್ಪಗಳ ಗುಲ್ಮಗಳು ಹಬ್ಬಿಕೊಂಡಿದ್ದವು. ತಾವರೆ, ಕನ್ನೈದಿಲೆ ಕಲ್ಹಾರ ಮೊದಲಾದ ಜಲಪುಷ್ಪಗಳಿಂದ ತಿಳಿ ಗೊಳಗಳು ಶೋಭಿಸುತ್ತಿದ್ದವು. ತೋಟದ ಗಿಡಮರಗಳನ್ನೂ ಪೊದೆ ಬಳ್ಳಿಗಳನ್ನೂ ಫಲಪುಷ್ಪಗಳನ್ನೂ ಆಶ್ರಯಿಸಿಕೊಂಡು ಶುಕ, ಪಿಕ, ಭ್ರಮರ, ಹಂಸ ಮೊದಲಾದ ಪಕ್ಷಿಸಮೂಹಗಳೂ ಕೀಟವೃಂದವೂ ಸಂತೋಷಿಸುತ್ತಿದ್ದವು. ಇಂತಹ ಸುಂದರ ವನದಲ್ಲಿ ಪಕ್ಷಿಗಳ ಇಂಪಾದ ದನಿಗಳನ್ನು ಕೇಳುತ್ತಾ ಆಹ್ಲಾದಕಾರಿಯಾದ ಪುಷ್ಪಗಳನ್ನೂ ಸವಿಯಾದ ಫಲಗಳನ್ನೂ ಕಂಡು ಆನಂದಿಸುತ್ತಾ ಅಲ್ಲಲ್ಲಿ ಸಂಚರಿಸುತ್ತಾ ವಿನೋದ ವಾಗಿದ್ದರು.

ಆಗ ಆ ಚೈತ್ರವನದ ಒಂದು ಕಡೆ ಅಶೋಕ ವೃಕ್ಷದ ಬುಡ ದಲ್ಲಿ ಸ್ವಲ್ಪ ಪಾಷಾಣದರೆಯಲ್ಲಿ ವಸಂತಸೇನ (ವಸಂತಶಯನ) ರೆಂಬ ಮಹಾಮುನಿಗಳು ಧ್ಯಾನದಲ್ಲಿ ನಿರತರಾಗಿದ್ದರು. ಅವರು ಅವಧಿ ಜ್ಞಾನಸಂಪನ್ನರಾಗಿದ್ದರು. ನಾಲ್ವರು ಕನ್ನಿಕೆಯರೂ ಅವರ ಬಳಿ ಸಾರಿ ಅವರ ಧ್ಯಾನ ಮುಗಿಯುವರೆಗೆ ಪೂಜಿಸುತ್ತಾ ಇದ್ದರು. ಸ್ವಲ್ಪ ಕಾಲದನಂತರ ಧ್ಯಾನ ಸಂಪೂರ್ಣವಾಯಿತು. ಆಗ ಆ ಕನ್ನಿಕೆಯರು ಮುನಿಗಳನ್ನು ವಂದಿಸಿ ಧರ್ಮಸ್ವರೂಪದ ಬಗ್ಗೆ ಉಪದೇಶವಾಣಿ ಯನ್ನು ಕೇಳಿದರು.

ಆನಂತರ ಅವರು "ಸ್ವಾಮಿ ! ಸಂಸಾರವೇ ಕಷ್ಟಕರವಾದುದು. ಆದರೊಳಗೆ ಸ್ತ್ರೀ ಜನ್ಮವಂತು ಅತ್ಯಂತ ಕಷ್ಟಕರ. "ಈ ಸ್ತ್ರೀ ಜನ್ಮ ವನ್ನು ಕಳೆದು ಮುಕ್ತಿಯನ್ನು ದೊರಕಿಸುವಂಥ ನೋಂಪಿಯೊಂದನ್ನು ಅದನ್ನು ಆಚರಿಸುವ ವಿಧಾನವನ್ನು ದಯವಿಟ್ಟು ತಿಳಿಸಿ" ಎಂದು ಬಿನ್ನಹ

ಮಾಡಿದರು. ಆಗ ಆ ಮುನೀಶ್ವರರು ಅವರಿಗೆ ದಶಲಾಕ್ಷಣಿಕ ಪರ್ವದ ನೋಂಪಿಯನ್ನು ವಿವರಿಸಿದರು. ಆ ಮುನಿವರರು ನೋಂಪಿಯ ಆಚರಣೆ ಯನ್ನು ವಿವರಿಸಿದ್ದನ್ನು ಕೇಳಿ ಆನಂದಿಸಿ ಅವರಿಗೆ ವಂದಿಸಿ ಹರ್ಷಭರಿತೆ ಯರಾಗಿ ತಮ್ಮ ತಮ್ಮ ನಿವಾಸಗಳಿಗೆ ತೆರಳಿದರು.

ಅನಂತರ ಭಾದ್ರಪದಮಾಸ ಬಂದು ದಶಲಾಕ್ಷಣಿಕ ನೋಂಪಿ ಯನ್ನು ಆಚರಿಸುವ ದಿನ ಬಂದಿತು. ಆಗ ಮುನೀಶ್ವರರು ಹೇಳಿದ ಪ್ರಕಾರ ಹತ್ತು ವರ್ಷಗಳ ನೋಂಪಿಮಾಡಿ ಆ ಮೇಲೆ ಉದ್ಯಾಪನೆ ಯನ್ನು ಆಚರಿಸಿದರು. ಅನಂತರ ಕೆಲವು ಕಾಲ ಭೋಗೋಪಭೋಗ ಗಳನ್ನು ಅನುಭವಿಸಿದಮೇಲೆ ಆಯುಷ್ಯಾವಸಾನಕಾಲದಲ್ಲಿ ಸನ್ಯಸನ ವಿಧಿಯನ್ನು ಸ್ವೀಕರಿಸಿದರು. ಸ್ವರ್ಗವನ್ನು ಸೇರಿದರು.

ಅಲ್ಲಿ ಮೃಗಾಂಕರೇಖೆ ವಜ್ರಗಿರಿ ವಿಮಾನಲೋಕದಲ್ಲಿ ಅಮರ ಗಿರಿಯೆಂಬ ಹೆಸರಿನಿಂದ, ಕಾಮಸೇನೆ ವಜ್ರಾಭ ವಿಮಾನಲೋಕದಲ್ಲಿ ಅಮರಚೂಲನೆಂಬ ಹೆಸರಿನಿಂದ, ಮದನರೇಖೆ ವಜ್ರಾಂಕ ವಿಮಾನ ಲೋಕದಲ್ಲಿ ದೇವಾಭ ಹೆಸರಿನಿಂದ, ರೋಹಿಣಿ ವಜ್ರಸಾರಥಿಯೆಂಬ ವಿಮಾನ ಲೋಕದಲ್ಲಿ ಪದ್ಮನಾಭನೆಂಬ ಹೆಸರಿನಿಂದ, ದಿವಿಜಕುಮಾರ ರಾಗಿ ಜನಿಸಿದರು.

ಅನಂತರ ಹದಿನಾರು ಸಾಗರೋಪಮಕಾಲ ಹತ್ತನೆಯ ಸ್ವರ್ಗ ದಲ್ಲಿ ಸುಖವನ್ನು ಅನುಭವಿಸುತ್ತಾ ನಂದೀಶ್ವರದ್ವೀಪ ಮುಂತಾದ ಎಲ್ಲಾ ಬಗೆಯ ಕೃತ್ರಿಮ ಹಾಗೂ ಅಕೃತ್ರಿಮ ಚೈತ್ಯಾಲಯಗಳನ್ನೆಲ್ಲ ಸಂದರ್ಶಿಸಿ ಭಕ್ತಿಪೂರ್ವಕ ವಂದಿಸಿದರು. ತೀರ್ಥಂಕರರ ಪಂಚಕಲ್ಯಾಣ ಗಳಲ್ಲಿ ಭಾಗವಹಿಸಿದರು. ಮಹಾಮಹಿಮಾನ್ವಿತರಾಗಿ ತಮ್ಮ ಆಯುಷ್ಯ ವನ್ನು ಕಳೆದರು. ಸ್ವರ್ಗಲೋಕದ ಸುಖ ಮುಗಿದನಂತರ ಈ ಭೂಲೋಕದಲ್ಲಿ ಉಜ್ಜಯಿನಿ ನಗರದಲ್ಲಿ ಆಳುತ್ತಿದ್ದ ಸ್ಥೂಲಭದ್ರನೆಂಬ

ಮಹಾರಾಜನ ನಾಲ್ವರು ಅರಸಿಯರಾದ ವಿಚಕ್ಷಣೆ, ಲಕ್ಷ್ಮೀಮತಿ, ಸುಶೀಲೆ, ಕಮಲಾಕ್ಷಿ ಎಂಬುವರಲ್ಲಿ ಕ್ರಮವಾಗಿ ಈ ನಾಲ್ವರು ಪೂರ್ಣಾಭ, ದೇವರಾಜ, ಗುಣಚಂದ್ರ, ಪದ್ಮಾಕ್ಷರೆಂಬ ಹೆಸರಿನ ರಾಜ ಕುಮಾರರಾಗಿ ಜನಿಸಿದರು.

ಈ ನಾಲ್ವರೂ ತಂದೆಯ ಮನೆಯಲ್ಲಿ ಜನ್ಮೋತ್ಸವ ಮೊದ ಲಾದ ಅನೇಕ ಮಂಗಳ ಕಾರ್ಯಕ್ರಮಗಳಲ್ಲಿ ಭಾಜನರಾಗುತ್ತಾ ಚಂದ್ರನ ಕಳೆಯಂತೆ ದಿನದಿನಕ್ಕೆ ಅಭಿವೃದ್ಧಿ ಹೊಂದುತ್ತಿದ್ದರು. ಅನಂತರ ವಿದ್ಯಾಭ್ಯಾಸಕ್ಕಾಗಿ ಜೈನೋಪಾಧ್ಯಾಯರ ಸನ್ನಿಧಿ ಸೇರಿ ಸಕಲಶಾಸ್ತ್ರ ಪ್ರವೀಣರಾದರು.

ಹೂಣ ದೇಶಾಧಿಪತಿಯಾದ ತಿಲಕರಾಜನಿಗೆ ತಿಲಕವತಿಯೆಂಬ ಪಟ್ಟದರಾಣಿಯಿದ್ದಳು. ಆ ರಾಜದಂಪತಿಗಳಿಗೆ ಬ್ರಾಹ್ಮೀ, ಕಕುಭೆ, ಮೃಗಾಕ್ಷಿ, ಕುಮಾರಿ ಎಂಬ ನಾಲ್ವರು ಕನ್ಯೆಯರು ಜನಿಸಿ ಬೆಳೆದು ಮದುವೆಗೆ ನಿಂದಿದ್ದರು. ಈ ನಾಲ್ವರು ರಾಜಕುಮಾರರು ಆ ನಾಲ್ವರು ರಾಜಕುಮಾರಿಯರನ್ನು ಕ್ರಮವಾಗಿ ಮದುವೆಯಾಗಿ ಸಂಸಾರಸುಖ ವನ್ನು ಅನುಭವಿಸುತ್ತಿದ್ದರು.

ಆ ನಾಲ್ವರೂ ಪರಸ್ಪರ ಸ್ನೇಹಯುಕ್ತರಾಗಿ ಒಬ್ಬರನ್ನೊಬ್ಬರು ಅಗಲಿ ಇರಲಾರದೆ ಒಟ್ಟಿಗಿರುತ್ತಿದ್ದರು. ಸದಾಕಾಲವು ಶಸ್ತ್ರಾಭ್ಯಾಸ ಮತ್ತು ಶಾಸ್ತ್ರಾಭ್ಯಾಸಗಳಲ್ಲಿ ನಿರತರಾಗಿರುತ್ತಾ ದುಷ್ಟಶಿಕ್ಷಣ, ಶಿಷ್ಟಪರಿ ಪಾಲನಕಾರ್ಯಾಸಕ್ತರಾಗಿದ್ದರು. ಹೀಗೆ ರಾಜಕುಮಾರರು ರಾಜ್ಯಸುಖ ವನ್ನೂ ಸಂಸಾರ ಸುಖವನ್ನೂ ಆರು ಋತುಗಳಿಗೆ ಯೋಗ್ಯವೆನಿಸಿದ ವಸ್ತ್ರಾಭರಣ, ಅನ್ನಪಾನ, ಲೇಪನಾದಿ ಭೋಗೋಪಭೋಗಗಳನ್ನೂ ಅನುಭವಿಸುತ್ತಿದ್ದರು.

ಈ ರೀತಿ ಸುಖವಾಗಿದ್ದ ಕುಮಾರರ ಸಕಲ ವಿದ್ಯಾ ಪ್ರೌಢಿಮೆಯನ್ನೂ ರಾಜ್ಯವಿದ್ಯಾತಿಶಯವನ್ನೂ ಕಂಡು ಸ್ಥೂಲಭದ್ರರಾಜನು ಪರಮಾನಂದಭರಿತನಾದನು. ಸಮಸ್ತ ರಾಜ್ಯಾಧಿಪತ್ಯವನ್ನು ಕುಮಾರರಿಗೆ ವಹಿಸಿದನು. ತಾನು ಸಂಸಾರಸುಖವನ್ನು ಅನುಭವಿಸುತ್ತಿದ್ದನು.

ಒಂದು ದಿನ ಸ್ಥೂಲಭದ್ರನು ಅಂತಃಪುರದಲ್ಲಿರಲು ಕರುಮಾವನ್ನು ಸೇರಿ ದಿಗಾವಲೋಕನ ಮಾಡುತ್ತಿದ್ದನು. ಆಗ ಒಂದು ಮೇಘಾಡಂಬರವು ವಿಚಿತ್ರ ಆಕಾರಗಳಿಂದ ಕಣ್ಣಿಗೆ ಮಂಗಳವಾಗಿ ಕಾಣಿಸಿ ಕೂಡಲೇ ಮರುಕ್ಷಣದಲ್ಲೇ ಮಾಯವಾಯಿತು. ಆಗ ಅವನಲ್ಲಿ ವೈರಾಗ್ಯ ಮೂಡಿತು. ಶರೀರ, ಆಯುಷ್ಯ, ಐಶ್ವರ್ಯಗಳೆಲ್ಲ ಇದೇರೀತಿ ನಶ್ವರವೆಂದು ತಿಳಿದನು. ದ್ವಾದಶಾನುಪ್ರೇಕ್ಷೆಗಳನ್ನು ಭಾವಿಸಿ ಸಂಸಾರ ಸುಖಕ್ಕೆ ಅಸಹ್ಯಗೊಂಡನು. ಆ ಕೂಡಲೇ ತನ್ನ ಕುಮಾರರಿಗೆ ಸಕಲ ರಾಜ್ಯಾಭಿಷೇಕಮಾಡಿದನು. ನೂರು ಮಂದಿ ರಾಜಕುಮಾರರೊಡನೆ ಕೂಡಿಕೊಂಡು ಪಿಹಿತಾಸ್ರವಭಟ್ಟಾರಕರ ಚರಣ ಸನ್ನಿಧಿಯಲ್ಲಿ ಬಾಹ್ಯಾಭ್ಯಂತರ ಪರಿಗ್ರಹಾದಿಗಳಿಂದ ನಿರ್ವೃತ್ತನಾಗಿ ಜಿನದೀಕ್ಷೆಯನ್ನು ಕೈಗೊಂಡನು. ಪರಮೋಪಶಾಂತಚಿತ್ತನಾಗಿ ತಪವನ್ನು ಆಚರಿಸಿದನು. ಸ್ವರ್ಗವನ್ನು ಸೇರಿದನು.

ಇತ್ತ ಕಡೆ ನಾಲ್ವರು ರಾಜಕುಮಾರರು ಹೀಗೆ ಚಿಂತಿಸತೊಡಗಿದರು : "ರಾಜ್ಯಸುಖವು ಯಾವುದೇ ರೀತಿಯಲ್ಲಿ ಒಳ್ಳಿತಲ್ಲ. ಅದಕ್ಕಾಗಿ ನಮ್ಮ ತಂದೆ ಕೊಳೆತ ಕಡ್ಡಿಯಂತೆ ರಾಜ್ಯವನ್ನು ತ್ಯಜಿಸಿ ನಿರ್ಗ್ರಂಥ ರೂಪವಾದ ಜಿನದೀಕ್ಷೆಯನ್ನು ಕೈಗೊಂಡು ಘಾತಿ ಅಘಾತಿ ಕರ್ಮಗಳಿಂದ ಬಿಡುಗಡೆ ಹೊಂದಿ ಮೋಕ್ಷಲಕ್ಷ್ಮೀವಲ್ಲಭನಾದನು. ಆದ ಕಾರಣ ಅನಂತಗುಣ ಚತುಷ್ಟಯ ಲಕ್ಷಣ ಪ್ರಾಪ್ತಿಯಾಗಲು ಮೋಕ್ಷ

ಪುರಕ್ಕೆ ಅಡ್ಡಿಯಾದವು ಈ ರಾಜ್ಯ ಸಂಪತ್ತುಗಳು. ಇವು ನಮಗೆ ಹಿತವಲ್ಲ" ಎಂದು ವಿಚಾರ ಮಾಡಿದರು.

ಅನಂತರ ಆ ನಾಲ್ವರು ವೈರಾಗ್ಯಪರರಾಗಿ ಕಿರಿಯರಾಜಕುಮಾರನಾದ ಹರಿಷೇಣನಿಗೆ ರಾಜ್ಯಾಭಿಷೇಕಮಾಡಿ ಪಟ್ಟಗಟ್ಟಿದರು. ಅನಂತ ಸುಖಗಳು ಪಡೆಯಲು ಅಲ್ಪಸುಖ ಸಾಧನಗಳನ್ನು ತೊರೆಯುವುದು ಆಶ್ಚರ್ಯದ ಸಂಗತಿಯೇನಲ್ಲ. ಅಂತೆಯೇ ಅವರು ಮೋಕ್ಷಸುಖವೆಂಬ ಅನಂತಸುಖಕ್ಕಾಗಿ ರಾಜ್ಯಸುಖವೆಂಬ ಅಲ್ಪಸುಖವನ್ನೂ ಇತರ ಸುಖಗಳನ್ನೂ ತೊರೆದರು. ತಮ್ಮ ವಿಯೋಗದಿಂದ ದುಃಖಿತರಾದ ತಾಯಂದಿರನ್ನು ರಾಜನಾದ ಹರಿಷೇಣನಿಗೆ ಒಪ್ಪಿಸಿದರು ; ಪರಿಜನರಿಗೂ ಪುರಜನರಿಗೂ ಬಂಧುಜನಗಳಿಗೂ ಎಲ್ಲಾ ವಿಚಾರಗಳನ್ನು ವಿವರಿಸಿ ಸಮಾಧಾನ ಹೇಳಿದರು.

ಆ ಮೇಲೆ ಶೀಲಸಾಗರ ಭಟ್ಟಾರಕರರ ದಿವ್ಯಚರಣಸನ್ನಿಧಿಯಲ್ಲಿ ಜಿನದೀಕ್ಷೆಯನ್ನು ಸ್ವೀಕರಿಸಿದರು. ಎಲ್ಲಾ ಬಗೆಯ ಬಾಹ್ಯಾಂತರ ತಪಸ್ಸುಗಳನ್ನೂ ಕ್ರಮವಾಗಿ ಆಚರಿಸಿದರು. ಮೂಲೋತ್ತರ ಗುಣಗಳಲ್ಲಿ ನಿಪುಣರಾದರು. ಪರಮ ಶುಕ್ಲಧ್ಯಾನವೆಂಬ ಅಗ್ನಿಯಿಂದ ಘಾತಿಕರ್ಮಗಳೆಂಬ ಪುಳ್ಳಿಗಳನ್ನು ನಿಶ್ಶೇಷವಾಗಿ ದಹಿಸಿದರು. ಕೇವಲಜ್ಞಾನದರ್ಶನದಿಂದ ಲೋಕಾಲೋಕ ಸ್ವರೂಪವನ್ನು ಓರ್ವೊದಲೆ ಅರಿಯುತ್ತಾ, ಕಾಣುತ್ತಾ ಸ್ವಲ್ಪಕಾಲ ಗಂಧಕುಟಿಯಲ್ಲಿ ವಿಹರಿಸುತ್ತಾ ಧರ್ಮೋಪದೇಶಗೈದರು. ತಮ್ಮ ಆಯುಷ್ಯಾವಸಾನವಾಗುವುದರಲ್ಲಿ ಉಳಿದ ಅಘಾತಿ ಕರ್ಮಗಳನ್ನು ಕಳೆದರು. ಏಕಕಾಲದಲ್ಲಿ ಲೋಕಾಗ್ರದ ಈಷತ್ ಪ್ರಾಗ್ಭಾರವೆಂಬ ಮೋಕ್ಷಸ್ಥಾನಕ್ಕೆ ಸಂದರು. ನಿತ್ಯಾನಂತ ನಿರ್ಮಲಸ್ವರೂಪಪ್ರಕಾಶನ ಸಮರ್ಥರಾದರು. ಸಚ್ಚಿದಾನಂದದ

ಆತ್ಮರಾದರು. ಲೋಕಾಲೋಕಸ್ಥಿತಿಯನ್ನು ಒರ್ಮ್ಮೊದಲೆ ತಿಳಿಯುತ್ತ ಅನಂತ ಸುಖದಿಂದಿದ್ದರು"

ಹೀಗೆಂದು ಗೌತಮಗಣಧರರು ಶ್ರೇಣಿಕ ಮಹಾರಾಜನಿಗೆ ನಿರೂಪಿಸಿದರು. ಅದನ್ನು ಚೇಳಿನೀ ಮಹಾದೇವಿ ಸಹಿತನಾಗಿ ಕೇಳಿದ ಶ್ರೇಣಿಕನು ಸಂತುಷ್ಟಚಿತ್ತನಾದನು. ಶ್ರೀ ವೀರ ವರ್ಧಮಾನಸ್ವಾಮಿಗಳಿಗೂ ಗೌತಮಗಣಧರರಿಗೂ ವಂದಿಸಿದರು. ರಾಜಗೃಹಕ್ಕೆ ಹಿಂದಿರುಗಿ ಅರಮನೆಯನ್ನು ಸೇರಿದನು. ಆ ನೋಂಪಿಯನ್ನು ಮಾಡಲು ನಿಶ್ಚಯಿಸಿ ನೋಂಪಿಯದಿನ ಬರುವುದನ್ನೇ ಕಾಯುತ್ತಿದ್ದನು. ಆ ನೋಂಪಿಯದಿನ ಬರಲು ನೋಂಪಿಮಾಡಿ ಉದ್ಯಾಪನೆ ಪೂರೈಸಿ ಸುಖವಾಗಿದ್ದನು.

ಇತ್ತ ಕಡೆ ಶ್ರೀ ವೀರವರ್ಧಮಾನಸ್ವಾಮಿಯ ಸಮವಸರಣವು ಪಾವಾಪುರದ ಉದ್ಯಾನಕ್ಕೆ ತೆರಳಿತು. ಅಲ್ಲಿ ಸ್ವಾಮಿಯು ಸಮವಸರಣವನ್ನು ವಿಸರ್ಜಿಸಿ ಪರಮ ಶುದ್ಧಧ್ಯಾನನಿರತರಾಗಿ ಮೋಕ್ಷಪ್ರಾಪ್ತರಾದರು.

ಈ ಕಥೆಯನ್ನು ಓದಿದವರಿಗೆ ಹೇಳಿದವರಿಗೆ ಕೇಳಿದವರಿಗೆ ಮತ್ತು ಈ ವ್ರತವನ್ನು ಆಚರಿಸಿದವರಿಗೆ ಅನುಮೋದನೆ ಗೈದವರಿಗೆ ಸ್ವರ್ಗ ಮೋಕ್ಷ ಫಲಗಳು ದೊರೆಯುವುವು.

ಅಧ್ಯಾಯ ೩

ದಶಲಕ್ಷಣ ನೋಂಪಿಯ ಆಚರಣೆ

ದಶಲಕ್ಷಣ (ಧರ್ಮದ) ನೋಂಪಿಯನ್ನು ಆತ್ಮಶುದ್ಧಿಗೆ ಸಾಧನವಾಗಿ ಆಚರಿಸುತ್ತಾರೆ. ಆತ್ಮಶುದ್ಧಿಗೆ ಸಾಧನವಾದ ಆಚರಣೆಗಳೇ ಸಮ್ಯಕ್ ಚಾರಿತ್ರ. ಆದ್ದರಿಂದ ಈ ನೋಂಪಿಯು ಸಹ ಸಮ್ಯಕ್ ಚಾರಿತ್ರದ ಒಂದು ಅಂಗ ಎನ್ನಬಹುದು.

ದೇವಪೂಜೆಯು ನಿತ್ಯ ಅಥವಾ ಸಾಮಾನ್ಯಪೂಜೆ, ನೈಮಿತ್ತಿಕ ಅಥವಾ ವಿಶೇಷ ಪೂಜೆ ಎಂದು ಎರಡು ವಿಧವಾಗಿದೆ. ಸಂಸಾರದಲ್ಲೇ ಇದ್ದುಕೊಂಡು ಆತ್ಮಕಲ್ಯಾಣ ಸಾಧಿಸಿಕೊಳ್ಳುವ ಗೃಹಸ್ಥರಿಗೆ ಈ ಜಿನ ಮಂದಿರಗಳಲ್ಲಿ ನಡೆಯುವ ಮತ್ತು ಮನೆಗಳಲ್ಲಿ ನಡೆಸುವ ಈ ಪೂಜೆಗಳು ಧರ್ಮಾಚರಣೆಯ ಅಂಗವಾಗಿದೆ. ನಿತ್ಯಪೂಜೆ ಪ್ರತಿನಿತ್ಯವೂ ನಡೆದರೆ ನೈಮಿತ್ತಿಕಪೂಜೆ ನಿರ್ದಿಷ್ಟಕಾಲದಲ್ಲಿ ಮಾತ್ರ ನಿರ್ದಿಷ್ಟ ನಿಮಿತ್ತಗಳಿಗಾಗಿ ಆಚರಿಸಲ್ಪಡುತ್ತವೆ. ನೋಂಪಿಗಳನ್ನು ಆಚರಣೆ ಮಾಡುವವರು ವಿಶೇಷ ವಿಧಿಗಳನ್ನಷ್ಟೇ ಆಚರಿಸಿದರೆ ಸಾಲದು ; ನಿತ್ಯ ಪೂಜೆಯ ಸಾಮಾನ್ಯವಿಧಿಗಳನ್ನು ಆಚರಿಸಬೇಕು. ಈ ಬಗ್ಗೆ ಶ್ರೀ ಎಂ. ನೇಮಿರಾಜಶಾಸ್ತ್ರಿಗಳು ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ: “ ಕೆಲವರು ನೋಂಪಿ ಕಥೆಗಳಲ್ಲಿ ಹೇಳಿರುವ ವಿಶೇಷ ವಿಧಿಗಳನ್ನು ಮಾತ್ರ ಆಚರಿಸಿ ನಾವು ನೋಂಪಿ ಮಾಡಿದೆವೆಂದು ಹೇಳುತ್ತಾರೆ.

ಒಂದು ಕಥೆಯಲ್ಲಿ ಪಂಚಪರಮೇಷ್ಠಿಗಳಿಗೆ ಪಂಚಾಮೃತಾಭಿಷೇಕವನ್ನೂ ಶ್ರುತಗುರು ಪೂಜೆಯನ್ನೂ ಮಾಡಿ ಉಪವಾಸ ಅಥವಾ ಏಕಭುಕ್ತವನ್ನು ಮಾಡಬೇಕೆಂದಿದ್ದರೆ, ಅಷ್ಟನ್ನೇ ಮಾಡಿ, ಉಳಿದ ನಿತ್ಯ ಅಥವಾ ಸಾಮಾನ್ಯ ಪೂಜೆಗಳನ್ನು ಬಿಟ್ಟುಬಿಡುತ್ತಾರೆ. ಅದು ಸರಿಯಲ್ಲ" ಹೀಗೆಂದು ಹೇಳಿ ನೋಂಪಿಯನ್ನು ಆಚರಿಸುವ ವಿಧಾನವನ್ನು ಈ ರೀತಿ ನಿರ್ದೇಶಿಸಿದ್ದಾರೆ.

"ನೋಂಪಿಯನ್ನು ಆಚರಿಸುವವರು ಅಭಿಷೇಕ ಪೂಜೆ ಮೊದಲಾದ ಕ್ರಿಯೆಗಳಾದ ಮೇಲೆ, ಹಸ್ತಶುದ್ಧಿ, ಕಂಕಣ ಬಂಧನ ದರ್ಭಾಸನ ನ್ಯಾಸ, ಪುಂಜ, ಮಂಗಳಾರತಿ ಪುಷ್ಪಾಂಜಲಿ, ಪಂಚ ಜಲಧಾರೆ ಇಷ್ಟನ್ನು ಮಾಡಬೇಕು." ಆನಂತರ ಈ ಕೆಳಕಂಡ 14 ವಿಧಿಗಳನ್ನು ಆಚರಿಸಬೇಕು.

1) ಪಂಚಪರಮೇಷ್ಠಿಗಳ ಪ್ರತ್ಯೇಕ ಪೂಜೆ
2) ಮೂಲಸ್ವಾಮಿ ಪೂಜೆ (ಅಷ್ಟಕ ಸಹಿತ)
3) ನವದೇವತಾ ಪೂಜೆ
4) ತ್ರಿಕಾಲ ತೀರ್ಥಂಕರ ಸಮುದಾಯ ಪೂಜೆ
5) ನೋಂಪಿ ದೇವರಪೂಜೆ (ಅಷ್ಟಕ ಸಹಿತ)
6) ಬಾಹುಬಲಿಸ್ವಾಮಿ ಮೊದಲಾದ ಪೂಜೆಗಳು
7) ಶ್ರುತಗಣಧರ ಪೂಜೆ
8) ನೋಂಪಿ ದೇವರ ಯಕ್ಷಯಕ್ಷಿಯರ ಪೂಜೆ
9) ಶಾಸನದೇವತೆಗಳ ಪೂಜೆ

10) ಬ್ರಹ್ಮದೇವ ಪದ್ಮಾವತಿ ಮೊದಲಾದ ಪೂಜೆಗಳು

11) ದ್ವಾರಪಾಲಕರ ಪೂಜೆ

12) ಮಹಾರ್ಘ್ಯ

13) ಮಹಾಶಾಂತಿ ಮಂತ್ರ

14) ವಿಸರ್ಜನೆ

"ಇಷ್ಟು ವಿಧಿಗಳನ್ನು ಮಾಡಲೇಬೇಕು" ಎಂದು ಹೇಳಿ ಲೇಖಕರು "ಮೇಲೆ ಹೇಳಿದ ಪೂಜೆಗಳನ್ನು ಮಾಡಬೇಕಾದರೆ ಪೂಜಾದ್ರವ್ಯಗಳೂ ಹೆಚ್ಚಾಗಿ ಬೇಕು. ಅದಕ್ಕೋಸ್ಕರ ಕಥೆಯಲ್ಲಿ ಹೇಳಿದ ಒಂದೆರಡು ಪೂಜೆಗಳನ್ನು ಮಾಡಿ, ಪುಂಜವಿಟ್ಟು ನಾನು ಎಲ್ಲಾ ನೋಂಪಿಗಳನ್ನು ಮಾಡಿದ್ದೇನೆಂದು ಹೇಳುವುದರಿಂದ ಪ್ರಯೋಜನವಿಲ್ಲ" ಎನ್ನುತ್ತಾರೆ.

ಮೇಲ್ಕಂಡ ವಿವರಗಳನ್ನು ಕಂಡಾಗ ಅನುಕೂಲವಿದ್ದವರು ಮತ್ತು ಬಸದಿಗಳಲ್ಲಿ ಆ ಪೂಜೆಗಳನ್ನೆಲ್ಲಾ ಕ್ರಮವಾಗಿ ವಿಸ್ತಾರ ಮಾಡಬಹುದೆಂದೆನ್ನಿಸುತ್ತದೆ. ಬಹುಶಃ ಈ ಕಾರಣದಿಂದಲೇನೋ ಸಂಕ್ಷಿಪ್ತ ಪೂಜಾ ವಿಧಾನಗಳು ಬಳಕೆಗೆ ಬಂದಿರಬೇಕು. ಪೂರ್ತಿ ಮಾಡಲು ಸಾಧ್ಯವಿಲ್ಲ; ಬಿಡಲೂ ಸಾಧ್ಯವಿಲ್ಲ ಎಂಬಂಥ ಜನಗಳಿಗಾಗಿ, ಶಕ್ತ್ಯಾನುಸಾರ ಧರ್ಮಾಚರಣೆಗೆ ಆತ್ಮ ಶುದ್ಧೀಕರಣಕ್ಕೆ ಅವಕಾಶ ನೀಡುವುದಕ್ಕಾಗಿ ಪ್ರತ್ಯೇಕ ದಶಧರ್ಮ ಸಂಕ್ಷಿಪ್ತ ಪೂಜೆ ಆಚರಣೆಗೆ ಬಂದಿರಬಹುದು. ಅದೇನೇ ಇರಲಿ, ಶಾಸ್ತ್ರೋಕ್ತವಾಗಿ ಆದಷ್ಟು ಪೂರ್ಣವಾಗಿ ನೋಂಪಿಗಳನ್ನು ಆಚರಿಸಿದರೆ ಹೆಚ್ಚು ಫಲಪ್ರದವೆಂದು ಎಂಬುದರಲ್ಲಿ ಸಂದೇಹವಿಲ್ಲ.

ದಶಲಕ್ಷಣ ಧರ್ಮವ್ರತದ ಪೂಜಾ ವಿವರಗಳನ್ನೂ ವಿಸ್ತೃತ ಮತ್ತು ಸಂಕ್ಷಿಪ್ತ ಪೂಜಾಕ್ರಮಗಳನ್ನೂ ಶ್ರೀ ಡಿ. ಪದ್ಮನಾಭಶರ್ಮರು ರಚಿಸಿರುವ ಜೈನ ಸಂಸ್ಕೃತಿಯ ಭಾದ್ರಪದ ಮಾಸದ ವ್ರತಪೂಜಾ ವಿಧಿ ಗ್ರಂಥದಲ್ಲಿ ಆಸಕ್ತರು ಅವಲೋಕಿಸಬಹುದಾಗಿದೆ.

ದಶಲಾಕ್ಷಣಿಕ ಪರ್ವದ ನೋಂಪಿಯ ಕಥೆಯಲ್ಲಿ ಉಕ್ತವಾದ ಆಚರಣಾ ವಿಧಾನ ಹೀಗಿದೆ. ಕಥೆಯಲ್ಲಿ 'ವಸಂತಸೇನರೆಂಬ ಮುನಿಗಳು ನಾಲ್ವರು ಕನ್ಯೆಯರಿಗೆ ಸ್ತ್ರೀತ್ವದಿಂದ ಮುಕ್ತಿ ಹೊಂದುವ ನೋಂಪಿಯ ವಿಧಾನವನ್ನು ಕೇಳಿದ್ದಕ್ಕೆ ಈ ನೋಂಪಿಯನ್ನು ವಿವರಿಸಿದರು' ಎಂದು ಹೇಳಲಾಗಿದೆ. ಅದರ ನಿರೂಪಣೆ ಇದು—

"ಭಾದ್ರಪದ ಮಾಸದ ಶುಕ್ಲಪಕ್ಷದ ಪಂಚಮಿಯ ದಿನದಲ್ಲಿ ದಂತಧಾವನ ಸ್ನಾನಾದಿ ವಿಧಿಗಳನ್ನು ಪೂರೈಸಿ ಶುಚಿವಂತರಾಗಿ ಧೌತ ವಸ್ತ್ರವನ್ನು ಉಟ್ಟು ಪೂಜೆಗೆ ಅಣಿಯಾಗಬೇಕು. ಚತುರ್ವಿಂಶತಿ ತೀರ್ಥಂಕರರ ಪ್ರತಿಮೆಗೆ ಅಭಿಷೇಕ, ಅಷ್ಟವಿಧಾರ್ಚನೆಗಳನ್ನು ಮಾಡಬೇಕು. ಅನಂತರ ಯಥಾಶಕ್ತಿಯಿಂದ ಸುವರ್ಣಾದಿ ಭಾಜನಗಳಲ್ಲಿ ಶ್ರೀ ಖಂಡರಸವನ್ನು ಲೇಪಿಸಬೇಕು. ಅದರಲ್ಲಿ ಸುವರ್ಣ ಶಲಾಕೆಯಿಂದ ಹತ್ತು ಎಸಳಿನ ಕಮಲ ಚಿತ್ರವನ್ನು ಬರೆಯಬೇಕು. ಆಕರ್ಣಿಕೆಯ ಮಧ್ಯದಲ್ಲಿ ಪಂಚಗುರುನಾಮವನ್ನು ಲಿಖಿಸಬೇಕು. ಹೊರಗಿನ ದಳಗಳಲ್ಲಿ ಪ್ರದಕ್ಷಿಣ ಕ್ರಮದಲ್ಲಿ ಉತ್ತಮ ಕ್ಷಮೆಯಿಂದ ಉತ್ತಮ ಬ್ರಹ್ಮಚರ್ಯೆವರೆಗೆ ಕ್ರಮವಾಗಿ ದಶಧರ್ಮಗಳನ್ನು ಚತುರ್ಥ್ಯಂತವಾಗಿ ನಮೋಹೋಮಾಂತಪಲ್ಲವ (ನಮಃ ಸ್ವಾಹಾ) ಮಂತ್ರದೊಡನೆ ಸ್ಥಾಪಿಸಬೇಕು.(ಇದಕ್ಕೆ ದಶಲಕ್ಷಣ ಯಂತ್ರವಿಧಿಯೆಂದು ಹೆಸರು. ಈ ಯಂತ್ರ ರಚನಾಕ್ರಮವನ್ನು ನಕ್ಷೆಯ ಸಹಿತ ತಮ್ಮ ಭಾದ್ರಪದ ಮಾಸದ ವ್ರತ

ಪೂಜಾ ವಿಧಿಯಲ್ಲಿ ಹೀಗೆ ವಿವರಿಸಿದ್ದಾರೆ. ಮೊದಲನೆಯದಾಗಿ ಮಧ್ಯದಲ್ಲಿ ಕರ್ಣಿಕೆಯ ಗೋಳಾಕಾರವನ್ನು ರಚಿಸಬೇಕು. ಅದರ ನಡುವೆ ಸಿದ್ಧಚಕ್ರದ ಮೂಲ ಬೀಜಾಕ್ಷರವಾದ 'ಹ್ರೀಂ' ಎಂಬುದನ್ನು ಬರೆಯಬೇಕು. ಅದರ ಕೆಳಗೆ ಬ್ರಹ್ಮ ಮಾಯಾ ಬೀಜ ಸಹಿತ ಪ್ರಥಮಾಂಗದ ಹೆಸರು ಮೊದಲಾದುವನ್ನು ಚತುರ್ಥೀ ವಿಭಕ್ತಿ ಮತ್ತು ನಮಃ ಶಬ್ದದೊಂದಿಗೆ ಬರೆಯಬೇಕು. "ಓಂ ಹ್ರೀಂ ಉತ್ತಮಕ್ಷಮಾದಿ ದಶಲಾಕ್ಷಣಿಕ ಧರ್ಮಾಂಗಾಯ ನಮಃ" ಎಂಬುದು ಆ ಮಂತ್ರ. ಮತ್ತೆ ಅದರ ಮುಂದೆ ಮೂರು ವಲಯಗಳನ್ನು ಕೊಟ್ಟು ಅದರ ಹೊರಭಾಗದಲ್ಲಿ ಹತ್ತುದಲದ ಕಮಲವನ್ನು ಬರೆಯಬೇಕು. ಆ ದಲಗಳಲ್ಲಿ ಅನುಕ್ರಮದಿಂದ ಪ್ರಣವಶಕ್ತಿ ಬೀಜಾದಿ ಸಹಿತ ಒಂದೊಂದು ಅಂಗದಲ್ಲಿ ಚತುರ್ಥೀ ವಿಭಕ್ತಿ ಸಹಿತ ಮತ್ತು ನಮಃ ಶಬ್ದ ಸಹಿತ ಬರೆಯಬೇಕು. ಪೂರ್ವ ದಿಕ್ಕಿನಿಂದ ಆರಂಭಿಸಿ ಎಡಕ್ಕೆ ಬರೆಯುತ್ತಾ ಹೋಗಬೇಕು. 1ನೇ ದಲ–ಓಂ ಹ್ರೀಂ ಉತ್ತಮಕ್ಷಮಾ ಧರ್ಮಾಂಗಾಯ ನಮಃ....ಇತ್ಯಾದಿ....ಈ ಮಂತ್ರಗಳನ್ನು ಬರೆದನಂತರ ಹೊರವಲಯದಲ್ಲಿ ಮೂರು ವಲಯಗಳನ್ನು ಬರೆದು ಭೂಮಂಡಲ ಮೊದಲಾದುವನ್ನು ರಚಿಸಿ ಅದನ್ನು ಪೂಜಿಸಬೇಕು.)

ಅನಂತರ ಪಂಚಪರಮೇಷ್ಠಿಗಳ ಪೂಜೆ ಮಾಡಬೇಕು. ಆ ಮೇಲೆ ಅಷ್ಟವಿಧಾರ್ಚನಾ ದ್ರವ್ಯಗಳಿಂದ ಪಂಚೋಪಚಾರ ನಡೆಸಬೇಕು. ಪ್ರತ್ಯೇಕ ದಳಗಳನ್ನು ಅರ್ಚಿಸಬೇಕು. ಅದಾದಮೇಲೆ "ಉತ್ತಮಕ್ಷಮಾಮಾರ್ದವಾರ್ಜವ ಸತ್ಯಶೌಚ ಸಂಯಮ ತಪಸ್ತ್ಯಾಗಾಕಿಂಚನ್ಯ ಬ್ರಹ್ಮಚರ್ಯಾಣಿ ಧರ್ಮಃ" ಎಂಬ ಸೂತ್ರದಿಂದ ಅರ್ಘ್ಯವನ್ನೆತ್ತಿ ಪುಷ್ಪಾಂಜಲಿಯನ್ನು ಚತುರ್ವಿಂಶತಿ ತೀರ್ಥಂಕರ ಸ್ತೋತ್ರದಿಂದ ಮಾಡಬೇಕು.

ಈ ರೀತಿಯಾಗಿ ಪಂಚಮಿಯಿಂದ ಮೊದಲ್ಗೊಂಡು ಚತುರ್ದಶಿ ಯವರೆಗೆ ನೋಂಪಿ ಆಚರಿಸಬೇಕು. (ಆಯಾಯಾ ದಿನದಲ್ಲಿ) ಬರುವ ಧರ್ಮದ ಕ್ರಮ ಹೀಗಿದೆ : ಭಾದ್ರಪದ ಶುದ್ಧ ಪಂಚಮಿ—ಉತ್ತಮ ಕ್ಷಮಾ, ಷಷ್ಠಿ—ಉತ್ತಮ ಮಾರ್ದವ, ಸಪ್ತಮಿ — ಉತ್ತಮ ಆರ್ಜವ, ಅಷ್ಟಮಿ—ಉತ್ತಮ ಶೌಚ, ನವಮಿ—ಉತ್ತಮ ಸತ್ಯ, ದಶಮಿ—ಉತ್ತಮ ಸಂಯಮ, ಏಕಾದಶಿ — ಉತ್ತಮ ತಪ, ದ್ವಾದಶಿ—ಉತ್ತಮ ತ್ಯಾಗ; ತ್ರಯೋದಶಿ—ಉತ್ತಮ ಆಕಿಂಚನ್ಯ ಚತುರ್ದಶಿ—ಉತ್ತಮ ಬ್ರಹ್ಮಚರ್ಯ ಮತ್ತು ಕ್ಷಮಾಯಾಚನೆ)

ಈ ಕಾಲದಲ್ಲಿ ಬ್ರಹ್ಮಚರ್ಯ ಭೂಶಯನ, ಧಾರಣಪಾರಣೆ ಕಾಂಜಿಕಾಹಾರ, ವಸ್ತುಸಂಖ್ಯೆ, ಎಂಬವುಗಳಲ್ಲಿ ಯಾವುದನ್ನಾದರೂ ಯಥಾಶಕ್ತಿಯಿಂದ ಆಚರಿಸಬೇಕು. ಹೀಗೆ ಕ್ರಮವಾಗಿ ಹತ್ತುವರ್ಷ ಗಳ ಕಾಲ ತಪ್ಪದೆ ಆಚರಿಸಬೇಕು. ಆ ಮೇಲೆ ಉದ್ಯಾಪನೆ ಮಾಡ ಬೇಕು. (ಈ ಕ್ರಮಗಳನ್ನು ಆಚರಿಸುವಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು ದೇಶಕಾಲಸ್ಥಿತಿಗನುಗುಣವಾಗಿ ಆಚರಿಸುವ ಪದ್ಧತಿಗಳೂ ಇವೆ ಯೆಂದು ತೋರುತ್ತದೆ. ಏಕೆಂದರೆ ದಿ॥ ಶ್ರೀ ಎಂ.ನೇಮಿರಾಜಶಾಸ್ತ್ರಿಗಳು ಈ ಬಗ್ಗೆ ಬೇರೊಂದು ಹಸ್ತಪ್ರತಿಯಲ್ಲಿರುವುದನ್ನು ಹೀಗೆ ಉಲ್ಲೇಖಿಸಿ ದ್ದಾರೆ. "ಭಾದ್ರಪದ ಮಾಸದ ಶುಕ್ಲಪಕ್ಷದ ಚೌತಿಯಲ್ಲಿ ಶುಚಿ ಭೂತರಾಗಿ ಚೈತ್ಯಾಲಯಕ್ಕೆ ಹೋಗಿ ಅಭಿಷೇಕ ಪೂಜೆಯನ್ನು ಮಾಡಿ ಗುರುಸಾಕ್ಷಿಯಲ್ಲಿ ಏಕಭುಕ್ತ ಬ್ರಹ್ಮಚರ್ಯವನ್ನು ಕೈಗೊಳ್ಳಬೇಕು. ಮನೆಗೆ ಹೋಗಿ ಏಕಭುಕ್ತವನ್ನು ಸ್ವೀಕರಿಸಬೇಕು. ಪಂಚಮಿಯಲ್ಲಿ ಚತುರ್ವಿಂಶತಿ ತೀರ್ಥಕರರಿಗಭಿಷೇಕಪೂಜೆಯನ್ನು ಮಾಡಿ ಸುವರ್ಣ ಭಾಜನದಲ್ಲಿ ಶ್ರೀ ಗಂಧ ಕರ್ಪೂರವನ್ನು ಲೇಪಿಸಿ ಸುವರ್ಣ ಶಲಾಕೆ ಯಿಂದ ಪತ್ತೆಸಳ ಕಮಲವನ್ನು ಬರೆದು ಕರ್ಣಿಕೆಯಲ್ಲಿ ಪಂಚ ಪರ

ವೇಷ್ಠಿಗಳ ನಾಮವನ್ನು ಬರೆಯಬಹುದು. ಹತ್ತು ಎಸಳುಗಳಲ್ಲಿ ಕ್ರಮದಿಂದ ಉತ್ತಮ ಕ್ಷಮಾದಿ ಧರ್ಮಗಳನ್ನು ಬರೆಯಬೇಕು. ಹ್ರೀಂಕಾರದಿಂದ ವೇಷ್ಠಿಸಿ ಕ್ರೋಂಕಾರವನ್ನು ನಿರುದ್ಧಮಾಡಿ ಪೃಥ್ವೀಯನ್ನು ಬರೆಯಬೇಕು. ಯಥಾಕ್ರಮದಿಂದ ಪೂಜಿಸಿ, ಅರ್ಘ್ಯವನ್ನು ಎತ್ತಿ ಅನಂತರ ಚತುರ್ವಿಂಶತಿ ತೀರ್ಥಂಕರ ಸ್ತೋತ್ರಗಳಿಂದ ಪುಷ್ಪಾಂಜಲಿ ಮಾಡಿ ಜಯಮಾಲೆಯನ್ನು ಹೇಳಬೇಕು.)

ಹತ್ತನೆಯ ವರುಷದ ಚತುರ್ದಶಿಯಲ್ಲಿ ಮಹೋತ್ಸವದಿಂದ ಚತುರ್ವಿಂಶತಿ ತೀರ್ಥಂಕರರಿಗೆ ಮಹಾಭಿಷೇಕಪೂಜೆಯನ್ನು ಮಾಡಿ ಆ ಮೇಲೆ ಶ್ರುತಕ್ಕೆ ಗಣಧರರಿಗೆ ಅಷ್ಟವಿಧಾರ್ಚನೆಯನ್ನು ಮಾಡಿ ಅನಂತರ ಚತುರ್ವಿಂಶತಿ ತೀರ್ಥಂಕರ ಪ್ರತಿಮೆಯನ್ನು ಶ್ರುತಸ್ಕಂಧವನ್ನು ಗಣಧರ ಪಾದುಕೆಯನ್ನು ಮಾಡಿಸಿ ಪ್ರತಿಷ್ಠಾಪನೆ ಮಾಡಿಸಬೇಕು. ಚೈತ್ಯಾಲಯಕ್ಕೆ ಅಡ್ಡಣಿಗೆ, ಹರಿವಾಣ, ಘಂಟೆ, ಜಯಘಂಟೆ, ತಾಳ, ಕೌಸಾಳ, ದೀಪಾರತಿ, ಧೂಪಗುಂಡಿಗೆ, ಪ್ರಭಾವತಿ. ನಕ್ಷತ್ರಮಾಲೆ ಮೊದಲಾದ ಉಪಕರಣಗಳನ್ನೂ ಭೇರಿ, ಶಂಖ, ಮೊದಲಾದ ವಾದ್ಯಗಳನ್ನೂ ಛತ್ರಚಾಮರಾದಿಗಳನ್ನೂ ಕೊಡುವುದು. ಋಷಿಯರಿಗೆ ಅಜ್ಜಿಕೆಯರಿಗೆ ಬ್ರಹ್ಮಚಾರಿ ಮೊದಲಾದ ಶ್ರಾವಕರಿಗೆ ಯಥಾ ಯೋಗ್ಯವಾಗಿ ಜ್ಞಾನೋಪಕರಣ, ಸಂಯಮೋಪಕರಣಗಳನ್ನು ಆಚ್ಛಾದನಾದಿಕಗಳನ್ನು ಕೊಡಬೇಕು. ಮತ್ತು ಚತುರ್ವಿಧ ಸಂಘಕ್ಕೆ ಆಹಾರ ದಾನಮಾಡಬೇಕು. ಉದ್ಯಾಪನೆ ಮಾಡಲು ಶಕ್ಯವಿಲ್ಲದವರು ಇಪ್ಪತ್ತು ವರುಷಗಳವರೆಗೆ ನೋಂಪಿ ಮಾಡತಕ್ಕದ್ದು"

'ಆರು ನೋಂಪಿಗಳ ಕಥೆಗಳು' ಗ್ರಂಥದಲ್ಲಿ ದಿ|| ಎಂ. ನೇಮಿರಾಜಶಾಸ್ತ್ರಿಗಳು ನೋಂಪಿ ಮತ್ತು ಉದ್ಯಾಪನೆಗಳ ಬಗ್ಗೆ ಕೆಲವು ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. "ಉದ್ಯಾಪನೆಯಲ್ಲಿ ಬೇರೆ ನೋಂಪಿ

ಯನ್ನು ಪ್ರಾರಂಭಿಸಬಹುದು. ಆದರೆ ನೋಂಪಿ ಕಥೆಗಳಲ್ಲಿ ಹೇಳಿದಷ್ಟು ಸಲ ನೋಂಪಿಗಳನ್ನು ಮಾಡಿದಮೇಲೆ (ಉದಾಹರಣೆಗೆ ದಶಲಾಕ್ಷಣಿಕ ಧರ್ಮದ ನೋಂಪಿಯಲ್ಲಿ 10 ಸಲ ಎಂದಿದೆ. ಆದ್ದರಿಂದ 11ನೇ ಸಲಕ್ಕೆ) ಉದ್ಯಾಪನೆ ಮಾಡಬೇಕು. ಆಗ ಬೇರೆ ನೋಂಪಿಯನ್ನು ಪ್ರಾರಂಭಿಸಬಹುದು. ಆ ಮೊದಲೇ ಬೇರೆ ನೋಂಪಿಯನ್ನು ಪ್ರಾರಂಭಿಸಬಾರದು. ಉದ್ಯಾಪನೆಯು ನೋಂಪಿಯು ಗೊತ್ತಾದ ಸಲದಷ್ಟು ಪೂರ್ತಿಯಾದ ಮೇಲೆ ಮಾಡತಕ್ಕ ವಿಧಿಯಾಗಿದೆ. ಹಲವರು ಒಟ್ಟಿಗೆ ಸೇರಿ ಉದ್ಯಾಪನೆ ಮಾಡಲು ಹೊರಟಾಗ ಎಲ್ಲರೂ ಗೊತ್ತಾದಷ್ಟು ಸಲ ನೋಂಪಿಗಳನ್ನು ಪೂರೈಸಿರಬೇಕು. ಇಲ್ಲದಿದ್ದರೆ ಗೊತ್ತಾದಷ್ಟು ಸಲ ನೋಂಪಿ ಮಾಡದವರು ಮತ್ತೆ ನೋಂಪಿಯನ್ನು ಪೂರೈಸಬೇಕು. ಉದ್ಯಾಪನೆಯನ್ನೂ ಮತ್ತೆ ಮಾಡಬೇಕಾಗುತ್ತದೆ. ಮತ್ತು ಆತ್ಮ ಶುದ್ಧೀಕರಣದ ಸರಳಾಚರಣೆಯ ನೋಂಪಿಗಳನ್ನು ಯಾವುದೇ ಕಾರಣಕ್ಕೆ ಆಡಂಬರದಿಂದ ಆಚರಿಸುವುದು ಸರಿಯಲ್ಲ.

ಇನ್ನೊಂದು ವಿಚಾರ: ಷೋಡಶಭಾವನಾ ನೋಂಪಿಯನ್ನು ಆಚರಿಸುವವರು ದಶಲಾಕ್ಷಣಿಕ ನೋಂಪಿಯನ್ನು ಮಾಡಬೇಕೆಂದಿದ್ದರೆ ಭಾದ್ರಪದ ಶುದ್ಧ ಪಂಚಮಿಯ ದಿನ ನೋಂಪಿಯನ್ನು ಪ್ರಾರಂಭಿಸಬಹುದು. ದಶಲಾಕ್ಷಣಿಕ ನೋಂಪಿಯನ್ನು ಮಾಡುವವರು ಭಾದ್ರಪದ ಶುದ್ಧ ಚೌತಿಯ ದಿವಸ ಕಂಕಣ ಬಂಧನ, ವ್ರತನಿಯಮಾದಿ ಕ್ರಿಯೆಗಳನ್ನು ಮಾಡಿ ಪಂಚಮಿಯಿಂದ ನೋಂಪಿ ಮಾಡಬೇಕು.

ದಶಲಾಕ್ಷಣಿಕ ಪರ್ವ ಆಚರಿಸುವ ಕಾಲದಲ್ಲಿ ಅನೇಕ ಕಡೆಗಳಲ್ಲಿ ಸಂಘ ಸಂಸ್ಥೆಗಳವರು ಧಾರ್ಮಿಕ ಮಂದಿರಗಳಲ್ಲಿ ಸಾರ್ವಜನಿಕವಾಗಿ ಧಾರ್ಮಿಕ ಸಭೆಗಳನ್ನು ಏರ್ಪಡಿಸುತ್ತಾರೆ. ವಿದ್ವಾಂಸರಿಂದ ಪ್ರತಿ

ದಿನವೂ ದಶಧರ್ಮದ ಒಂದೊಂದು ಧರ್ಮದ ಬಗ್ಗೆಯೂ ವ್ಯಾಖ್ಯಾನ ಏರ್ಪಡಿಸುತ್ತಾರೆ.

ಈ ಹತ್ತು ದಿನಗಳಲ್ಲಿ ಉಮಾಸ್ವಾಮಿಗಳ ತತ್ವಾರ್ಥ ಸೂತ್ರದ ಹತ್ತು ಅಧ್ಯಾಯಗಳನ್ನು ದಿನಕ್ಕೊಂದರಂತೆ ಅಭ್ಯಾಸಮಾಡುವ, ಪಠಿಸುವ, ಪ್ರವಚನ ಮಾಡುವ ಪದ್ಧತಿಯೂ ಇದೆ. ದಶಧರ್ಮಗಳಿಗೆ ತಕ್ಕಂತೆ ಆಯಾ ದಿನಗಳಲ್ಲಿ ದಾನಧರ್ಮ ಇತ್ಯಾದಿ ಮಾಡುವವರೂ ಇದ್ದಾರೆ. ಒಟ್ಟಿನಲ್ಲಿ ದೇವಪೂಜೆ, ಶಾಸ್ತ್ರಾಭ್ಯಾಸ, ಬ್ರಹ್ಮಚರ್ಯ ಪರಿಪಾಲನೆ, ಧರ್ಮಶ್ರವಣ, ಆತ್ಮಶುದ್ಧೀಕಾರ್ಯ, ನೋಂಪಿ ಆಚರಣೆ, ಶಾಸ್ತ್ರದಾನ ಮೊದಲಾದವು ಈ ಪರ್ವದ ಮುಖ್ಯೋದ್ದೇಶವೆನ್ನಬಹುದು. ಪ್ರಾಪಂಚಿಕ ಸುಖದಿಂದ ದೂರರಾಗಿ ಪಾರಮಾರ್ಥಿಕ ಸುಖಕ್ಕಾಗಿ ಆಚರಿಸುವ ಧಾರ್ಮಿಕ ಕಾರ್ಯಾಚರಣೆಯ ವ್ರತಪರಂಪರೆಗೆ ಭಾದ್ರಪದ ಮಾಸ, ಅಂತೆಯೇ ದಶಲಕ್ಷಣ ಪರ್ವ ಪ್ರಸಿದ್ಧವಾಗಿದೆ.

ಕ್ಷಮಾಯಾಚನಾ ದಿನವೆಂದು ದಶಪರ್ವ ಲಕ್ಷಣದ ಹತ್ತುದಿನಗಳಾದ ಮೇಲೆ ಹನ್ನೊಂದನೇ ದಿನ ಆಚರಿಸುವ ಪದ್ಧತಿ ಇದೆ. ವಾಸ್ತವವಾಗಿ ಕ್ಷಮಾಯಾಚನೆ ಕ್ಷಮಾಧರ್ಮದ ಒಂದು ಅಂಗವೇ ಆಗಿದೆ. ದಶಧರ್ಮಗಳಿಗೆ ದಶದಿನಗಳು ಮೀಸಲಾದ ಮೇಲೆ ಇದಕ್ಕೆ ಪ್ರತ್ಯೇಕ ದಿನವಿರುವುದರಲ್ಲಿ ಔಚಿತ್ಯವಿದೆಯೇ, ಎಂದೆನ್ನಿಸಬಹುದು. ಆದರೆ ಕೆಲವು ದೃಷ್ಟಿಗಳಿಂದ ಇದರ ಪ್ರತ್ಯೇಕ ಆಚರಣೆಯಿಂದ ಲಾಭವಿದೆ ಎನ್ನಬಹುದು.

ಮೊದಲನೆಯದಾಗಿ, ಪ್ರಾರಂಭದ ದಿನದ ಕ್ಷಮಾಧರ್ಮವನ್ನು ಮರೆಯದಂತೆ ಮತ್ತು ಕ್ಷಮಾಧರ್ಮ ಉಳಿದ ಧರ್ಮಗಳ ಶ್ರವಣ ಆಚರಣಗಳಿಂದ ಎಷ್ಟರಮಟ್ಟಿಗೆ ನಮ್ಮಲ್ಲಿ ಧರ್ಮಪ್ರಭಾವನೆ ಆಗಿದೆ ಎಂಬುದನ್ನು ಕಂಡುಕೊಳ್ಳಲು ಈ ದಿನ ಅವಕಾಶ ನೀಡುತ್ತದೆ.

ದಶ ದಿನಗಳೂ ದಶಧರ್ಮಗಳ ಧಾರ್ಮಿಕ ಸ್ವರೂಪವನ್ನು ಅರಿತ ಜನರು ಸಾಮಾಜಿಕ ಕ್ಷೇತ್ರದಲ್ಲಿ ಆಚರಣೆಗೆ ತರಲು ಜನೋಪಯೋಗೀ ಕಾರ್ಯ – ಲೋಕೋಪಯೋಗೀ ಧರ್ಮ ಆಗಲು ಅವಕಾಶನೀಡುತ್ತದೆ. ಸರ್ವೇಜನಾಃ ಸುಖಿನೋಭವಂತು ಎಂಬಂತೆ ಕ್ಷಮೆಯ ಪ್ರಭಾವವನ್ನು ಇತರಲ್ಲೂ ಹರಡಲು ಈ ದಿನ ಅವಕಾಶವೀಯುತ್ತದೆ. ಸಿಹಿ ಹಂಚಿಕೆ ಕಾರ್ಯಕ್ರಮದೊಂದಿಗೆ ಮನಸ್ಸಿನ ಕಹಿ ದೂರವಾಗಲು ಮಧುರ ವಾತಾವರಣ ನಿರ್ಮಾಣವಾಗಲು ಕ್ಷಮಾಯಾಚನಾ ದಿನ ಸುಸಂದರ್ಭವನ್ನು ನೀಡುತ್ತದೆ. ಆದ್ದರಿಂದ ದಶಪರ್ವದ ಕೊನೆಯ ದಿನ ಇದನ್ನು ಆಚರಿಸುವಲ್ಲಿ ಔಚಿತ್ಯವಿದೆ.

ಇನ್ನೊಂದು ದೃಷ್ಟಿಯಲ್ಲೂ ಕ್ಷಮಾಯಾಚನಾ ದಿನದಲ್ಲಿ ಗಮನಿಸುವ ಅಂಶವೊಂದಿದೆ. ಕ್ಷಮೆ ಇದ್ದವನಿಗೆ ಕೋಪವಿರುವುದಿಲ್ಲ ಮತ್ತು ಸಹನಶಕ್ತಿ ಇರುತ್ತದೆ. ಆದಕಾರಣ ಜೀವಕಾರುಣ್ಯ ಮತ್ತು ಸಮತೆ ಆತನಲ್ಲಿ ಕಾಣುತ್ತದೆ. ಮೇಲು – ಕೀಳು ಭಾವ ಇದ್ದರೆ ಕ್ಷಮೆ ಇರಲಾರದು. ಮೇಲು ಎಂದಾಗ ಅಹಂಕಾರ ಬಂದು ಅನ್ಯರನ್ನು ಕ್ಷಮಿಸಲು ಸಿದ್ಧವಿರುವುದಿಲ್ಲ. ಕೀಳು ಎಂದಾಗ ದೀನಭಾವ ಬಂದು ಕ್ಷಮಿಸುವ ಅರ್ಹತೆಯನ್ನೇ ಪಡೆಯದೆ ಕ್ಷಮಾಪಣೆಗೆ ಸಿದ್ಧನಾಗಬೇಕಾಗುತ್ತದೆ. ಆದ್ದರಿಂದಲೇ ವರ್ಧಮಾನ ಮಹಾವೀರರು ಬದುಕು ಮತ್ತು ಬದುಕುಗೊಡು ಎಂದರು. ಅರ್ಥಾತ್ ನೀನು ದೋಷರಹಿತನಾದರೆ ಉಳಿದವರನ್ನು ಕ್ಷಮಿಸಿ ಅವರೆನ್ನು ಬದುಕುಗೊಡು ಇಲ್ಲವೇ ನೀನು ತಪ್ಪಿತಸ್ಥನಾಗಿದ್ದರೆ ಕ್ಷಮಾಪಣೆ ಕೇಳಿಕೊಂಡು ಬದುಕು ಎಂದರು. ಆದ್ದರಿಂದ ಕ್ಷಮಾದಾನಿಯಾಗುವುದು ಇಲ್ಲವೇ ಕ್ಷಮಾಪಾತ್ರನಾಗುವುದು ಲೋಕದ ಮಾನವರ ಧರ್ಮವಾಗಿದೆ. ಕ್ಷಮಾಯಾಚನಾ ಕಾರ್ಯ

ವೆಂದಾಗ ವೈರನಾಶದ ದಿನ, ಅಕ್ರೋಧದ ದಿನ ಎಂದು ನೆನಪಿಡಬೇಕು. ಕ್ಷಮೆ ಹೊಂದಲು ಕ್ಷಮೆ ನೀಡಲು ಧಾರ್ಮಿಕ ಅವಕಾಶವನ್ನು ಕಲ್ಪಿಸಲು ಕ್ಷಮಾದಿನ ಮತ್ತು ಕ್ಷಮಾಯಾಚನಾ ದಿನಗಳನ್ನು ದಶಲಕ್ಷಣ ಪರ್ವದಲ್ಲಿ ಕಾಣುತ್ತೇವೆ. ಕ್ಷಮೆಗೆ ಒಳಗಾಗಿ ಮುಕ್ತನಾಗು ಅಥವಾ ಕ್ಷಮೆ ನೀಡಿ ಧನ್ಯನಾಗು ಎಂಬುದೇ ಕ್ಷಮಾಯಾಚನಾ ದಿನದ ಸಂದೇಶ. ಕ್ಷಮೆ ಕೇಳುವಾಗ ನಿಜವಾಗಿಯೂ ವೈರವಿದ್ದವನಲ್ಲಿ ನಮ ಮನಸ್ಸು, ಏನೇ ಆಗಲಿ ಅವನ ಬಳಿ ಸುಳಿಯಲಾರೆ ಎಂಬುವನಲ್ಲಿ ಕ್ಷಮೆ ಕೇಳಬೇಕು ; ಸುಮ್ಮನೆ ಪರಸ್ಪರ ಕ್ಷಮಿಸಿ ಕ್ಷಮಿಸಿ ಎಂದು ಮಿತ್ರರಲ್ಲೇ ಕೇಳುವುದರಲ್ಲಿ ಔಚಿತ್ಯವಿಲ್ಲ. ಕ್ಷಮಿಸುವುದಾದರೂ ಅಷ್ಟೆ. ನಿಜವಾಗಿ ಅಂತರಂಗದಲ್ಲಿ ದ್ವೇಷವಿದ್ದವನನ್ನು ಅವನ ಮನೆ ಬಾಗಿಲಿಗೆ ಹೋಗಿ ಕ್ಷಮಿಸಬೇಕು. ಅವನಿಗಾಗಿ ಕಾಯಬೇಕಾದುದೂ ಇಲ್ಲ. ನಿಜವಾಗಿ ಕ್ಷಮಾಯಾಚನೆ ಕಾರ್ಯ ನಡೆದರೆ ದ್ವೇಷ – ವೈರಗಳೂ ನಾಶವಾಗಿ ಸಮತೆ – ಸೌಹಾರ್ದ ಏರ್ಪಟ್ಟು ಬಾಳು ಆನಂದಮಯವಾಗುತ್ತದೆ. ಆತ್ಮಶುದ್ಧೀಕರಣಕ್ಕೆ ದ್ವೇಷಮೂಲ ನಿರ್ಮೂಲನಕ್ಕೆ ದಶಪರ್ವ ಲಕ್ಷಣ ಹೆದ್ದಾರಿಯನ್ನೇ ನಿರ್ಮಿಸಿದೆ. ಮೊದಲಿನಿಂದ ಕೊನೆಯವರೆಗೂ ಕ್ಷಮೆಯೇ ಪ್ರಧಾನ ಸಂಗತಿ ಎಂಬುದಕ್ಕೆ ಸಾಕ್ಷಿಯೆಂಬಂತೆ ದಶಪರ್ವ ಲಕ್ಷಣ ಪ್ರಾರಂಭವನ್ನು ಕ್ಷಮಾಧರ್ಮದಿಂದ ಮಾಡುತ್ತಾರೆ. ಬ್ರಹ್ಮಚರ್ಯೆಯ ಆತ್ಮಜ್ಞಾನಿ ಆದದಕ್ಕೆ ಸಾಕ್ಷಿ ಎಂಬಂತೆ ಕ್ಷಮಾಯಾಚನಾ ದಿನದೊಡನೆ ಪರ್ವವನ್ನು ಪೂರೈಸುತ್ತಾರೆ.

. .

ಅಧ್ಯಾಯ ೪

ಉತ್ತಮ ಕ್ಷಮಾಧರ್ಮದ ಪರಿಚಯ

ಪೀಠಿಕೆ :

ಉತ್ತಮ ಕ್ಷಮಾಧರ್ಮವು ಜೈನಧರ್ಮದ ಪರ್ವಗಳ ಅಂಗವಾಗಿ, ತತ್ವಗಳ ಅಂಗವಾಗಿ, ಕಂಡುಬರುವ ಧರ್ಮದ ಗುಣಗಳಲ್ಲಿ ಒಂದಾಗಿದೆ. ದಶಧರ್ಮಗಳನ್ನು ರತ್ನಕರಂಡಕ ಶ್ರಾವಕಾಚಾರ ಗ್ರಂಥದಲ್ಲಿ ಭಾವನಾಧಿಕಾರದ ಅಂಗವಾಗಿ ನಿರೂಪಿಸಿದೆ. ಏಕೆಂದರೆ,

1. ಧರ್ಮದ ಮೂಲವು ಭಾವನೆಯಾಗಿದೆ.
2. ಭಾವನೆಯಿಂದಲೇ ಪರಿಣಾಮದಲ್ಲಿ ನಿರ್ಮಲತೆ ಪ್ರಾಪ್ತವಾಗುತ್ತದೆ.
3. ಭಾವನೆಯಿಂದ ವೀತರಾಗತ್ವ ವೃದ್ಧಿಯಾಗುತ್ತದೆ.
4. ಭಾವನೆಯಿಂದ ಅಶುಭ ಧ್ಯಾನದ ಅಭಾವವಾಗಿ ಶುಭ ಧ್ಯಾನದ ಪುಷ್ಟಿ ಆಗುತ್ತದೆ.
5. ಮೇಲಾಗಿ ಭಾವನೆಯಿಂದಲೇ ಆತ್ಮಾನುಭವವಾಗುತ್ತದೆ.
6. ಈ ಪ್ರಕಾರ ಸಾವಿರಾರು ಗುಣಗಳು ಭಾವನೆಯಿಂದ ಉತ್ಪನ್ನವಾಗುತ್ತವೆ.

ಅದಕ್ಕಾಗಿ ವ್ರತಪಾಲನೆಯಲ್ಲಿ ದೋಷಗಳು ತಟ್ಟದಂತಹ ಭಾವನೆಗಳಲ್ಲಿ ಭಾವಿಸುತ್ತ ಇರಬೇಕು. ಈ ದೃಷ್ಟಿಯಿಂದ ದಶಧರ್ಮಗಳು ಗುಣಗಳಾದ್ದರಿಂದ ಆತ್ಮಶುದ್ಧೀಕರಣೆಗೆ ಪವಿತ್ರ ಭಾವನೆಗಳು

ಅಗತ್ಯವಾದ್ದರಿಂದ ದಶಧರ್ಮಗಳನ್ನು ಭಾವನಾಧಿಕಾರದಲ್ಲಿ ಹೇಳಿದೆ. ದಶಧರ್ಮಗಳೆಂಬ ಸೂರ್ಯನಿಗೆ ಮೋಹನೀಯ ಕರ್ಮದ ಕಷಾಯಗಳೆಂಬ ಮೋಡಗಳು ಆವರಿಸಿದಾಗ ಈ ಭಾವನೆಗಳು ವಜ್ರಾಯುಧವಾಗಿ ಅವುಗಳನ್ನು ಚೆದರಿಸಬಲ್ಲವು.

ದಶಧರ್ಮಗಳು ಸಗುಣರೂಪದಲ್ಲಿ ಚಾರಿತ್ರಕ್ಕೆ ಹೆಚ್ಚು ಸಂಬಂಧಿಸಿವೆ. ನಿರ್ಗುಣ ರೂಪದಲ್ಲಿ ಜ್ಞಾನ, ದರ್ಶನಗಳಿಗೆ ಸಂಬಂಧಿಸಿವೆ. ಆದಕಾರಣ ರತ್ನತ್ರಯ ವಿಭಾಗದಲ್ಲೂ ದಶಲಕ್ಷಣ ಪರ್ವವನ್ನು ಸಮಾವೇಶಗೊಳಿಸಬಹುದಾಗಿದೆ.

ಅಂತೆಯೇ ಇದನ್ನು ಸಪ್ತತತ್ವಗಳಲ್ಲಿ ಸಂವರ ತತ್ತ್ವದ ಅಂಗವಾಗಿ ನಿರೂಪಿಸುವುದೂ ಉಂಟು. ಏಕೆಂದರೆ, ಜೈನದರ್ಶನದಲ್ಲಿ ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ, ಮೋಕ್ಷ ಎಂಬ ಸಪ್ತ ತತ್ವಗಳನ್ನು ಕರ್ಮ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಕಾಣುತ್ತೇವೆ. ಅದರಲ್ಲಿ ಸಂವರವೆಂಬ ತತ್ವವು "ಹೊಸ ಕರ್ಮ ಹರಿದು ಬರದಂತೆ ತಡೆಯುವುದೇ ಆಗಿದೆ" ಕರ್ಮದ ಹರಿತವನ್ನು ನಿಲ್ಲಿಸಲು ಅನೇಕ ಮಾರ್ಗಗಳನ್ನು ಶಾಸ್ತ್ರದಲ್ಲಿ ಹೇಳಿವೆ. ಅವುಗಳಲ್ಲಿ ಪಂಚವ್ರತಗಳು, ಪಂಚ ಸಮಿತಿಗಳು, ತ್ರಿಗುಪ್ತಿಗಳು, ದ್ವಾದಶಾನುಪ್ರೇಕ್ಷೆಗಳು ಇಪ್ಪತ್ತೆರಡು ಪರೀಷಹಜಯಗಳನ್ನೂ ದಶಧರ್ಮಗಳನ್ನೂ ಇವಲ್ಲದೆ ಹಲವು ಬಗೆಯ ಚಾರಿತ್ರಗಳನ್ನೂ ಹೇಳಿದೆ. ಆದ್ದರಿಂದ ಸಂವರ ತತ್ತ್ವದ ಅಂಗವಾಗಿ ದಶಧರ್ಮಗಳು ನಿರೂಪಿತವಾಗಿವೆ ಎನ್ನಬಹುದು.

ಮೇಲಿನ ಅಭಿಪ್ರಾಯವನ್ನೇ ಗಮನಿಸಿ ದಶಧರ್ಮಗಳನ್ನು ವಿಶ್ಲೇಷಿಸಿದರೆ ದಶಧರ್ಮದಲ್ಲಿ ಇರುವ ಆತ್ಮನ ಗುಣಗಳಾದ ಧರ್ಮಗುಣಗಳನ್ನೂ ಅದರಿಂದ ಭಿನ್ನವಾದ ಕರ್ಮಫಲಗಳಾದ ಅಧರ್ಮಗುಣಗಳನ್ನೂ, ಇವುಗಳಲ್ಲಿ ಅಧರ್ಮಗುಣವನ್ನು ತ್ಯಾಜ್ಯಮಾಡಿ ಧರ್ಮಗುಣವನ್ನು ಅಳವಡಿಸಿ

ಕೊಂಡಲ್ಲಿ ಕಂಡುಬರುವ ಲೋಕಹಿತಗುಣವನ್ನೂ, ಮೊದಲನೆಯ ಲೇಖನದಲ್ಲಿ ಕಾಣಬಹುದಾಗಿದೆ. ಉದಾಹರಣೆಗೆ ಕ್ಷಮೆ ಧರ್ಮಗುಣ ವಾದರೆ ಕ್ರೋಧೆ ಅಧರ್ಮಗುಣ. ಕ್ರೋಧನಾಶ ಆದಾಗ, ಕ್ಷಮೆಗುಣ ಅಳವಟ್ಟಾಗ ಕಂಡುಬರುವ ಲೋಕಹಿತಗುಣ ಸಹನಶೀಲತೆ ಆಗಿದೆ. ದಶಧರ್ಮದ ಅನೇಕ ಗುಣಗಳು. ತಪ, ತ್ಯಾಗ, ಸತ್ಯ ಇತ್ಯಾದಿ ವಿಚಾರ ಗಳು, ಜೈನಧರ್ಮದ ಇತರ ಅಂಗಗಳ ಪ್ರಸ್ತಾಪದಲ್ಲೂ ಕಂಡುಬರುತ್ತವೆ. ಉದಾಹರಣೆಗೆ, ಸತ್ಯವು ದಶಧರ್ಮದಲ್ಲೂ ಒಂದಾಗಿದೆ ; ಅಂತೆಯೇ ಪಂಚಾಣು ವ್ರತಗಳಲ್ಲಿಯೂ ಒಂದಾಗಿದೆ. ತಪದ ವಿಚಾರವು ಹದಿ ನಾರು ಭಾವನೆಗಳಲ್ಲೂ ಕಂಡು ಬರುತ್ತದೆ ; ದಶಧರ್ಮದಲ್ಲೂ ಆದರ ಪ್ರಸ್ತಾಪವಿದೆ. ಹೀಗೆ ದಶಧರ್ಮಗಳಲ್ಲಿರುವ ವಿಚಾರಗಳು ಉಳಿದೆಡೆ ಕಂಡುಬಂದರೂ ಅವು ಪುನರುಕ್ತಿ ಆಗಿಲ್ಲ; ಅವುಗಳ ವಿವಿಧ ಸ್ವರೂಪ ಗಳನ್ನು, ಗುಣಗಳನ್ನು ಗಮನಿಸಿ ಮತ್ತೆ ಹೇಳಲಾಗಿದೆ. ಅವುಗಳ ಹಿನ್ನೆಲೆ ಉಪಯೋಗ ಅಲ್ಲಿ ಬೇರೆ ಇರುತ್ತವೆ. ಅಲ್ಲಿ ಅವುಗಳ ಸ್ವರೂಪ ವನ್ನೇ ವರ್ಣಿಸುವ ಪರಿಯೇ ಬೇರೆ. ಇಲ್ಲಿ ದಶಧರ್ಮಗಳಲ್ಲಿ ನಿರೂಪಿತ ವಾಗುವ ರೀತಿಯೇ ಬೇರೆ ಇರುತ್ತವೆ. ಒಂದು ಬಗೆಯಲ್ಲಿ ಪರಸ್ಪರ ಪೂರಕ ವಿಚಾರಗಳಾಗಿರುತ್ತವೆ ಎನ್ನಬಹುದು.

ಕ್ಷಮೆ ಮತ್ತು ನವಧರ್ಮಗಳು

ಕ್ಷಮೆಗೂ ದಶಧರ್ಮದ ಇತರ ನವಧರ್ಮಗಳಿಗೂ ನಿಕಟ ಸಂಬಂಧ ವಿದೆ. ಎಲ್ಲಾ ಧರ್ಮಕ್ಕೂ ಕ್ಷಮೆ ಬುನಾದಿ ಆಗಿದೆ. ಕೋಪವಿದ್ದವನಿಗೆ ಅಹಂಕಾರವಿರುತ್ತದೆ. ಅಹಂಕಾರವಿದ್ದವನಿಗೆ ವಿನಯಗುಣ ಬರುವು ದಿಲ್ಲ. ವಿನಯವಿಲ್ಲದಿದ್ದಲ್ಲಿ ಮಾರ್ದವ ಗುಣ ಕಂಡು ಬರದು. ಆದ್ದ

ರಿಂದ ಕೋಪ ನಾಶವಾದರೆ ಕ್ಷಮಾಗುಣವಿದ್ದರೇನೆ ಮಾರ್ದವಗುಣ ಸಾಧ್ಯ.

ಆರ್ಜವಗುಣ ಎಂದರೆ ಸರಳವಾಗಿರುವುದು, ನೇರವಾಗಿರುವುದು ಮಾತು, ಮನಸ್ಸು, ಕ್ರಿಯೆಗಳಲ್ಲಿ ಮುಚ್ಚುಮರೆ ಇಲ್ಲದಿರುವುದು. ಮೋಸ, ದ್ರೋಹ, ವಂಚನೆಗಳಿಗೆ ಅವಕಾಶವೀಯದಿರುವುದು. ಕ್ಷಮಾವಂತನಿಗೆ ಉದಾರಭಾವ ಇರುತ್ತದೆ. ತನ್ನಂತೆ ಇತರರು ಎಂದು ತಿಳಿಯುತ್ತಾನೆ. ಸಮತೆಗೆ ಆತ್ಮ ಪ್ರಾಶಸ್ತ್ಯ ನೀಡುತ್ತಾನೆ. ತಪ್ಪಿನಿಂದ ಕುಗ್ಗಿದವನನ್ನು ಕ್ಷಮಿಸಿ ತನಗೆ ಸಮಾನನಾಗಿ ಭಾವಿಸುತ್ತಾನೆ. ತಾನು ಅಹಂ ಇಲ್ಲದೆ ಅವನ ಸಮುಕ್ಕೆ ಬರುತ್ತಾನೆ. ಆದ್ದರಿಂದ ಆತನ ಮಾತಿನಲ್ಲಿ ಮೋಸ, ಮನಸ್ಸಿನಲ್ಲಿ ದ್ರೋಹ, ಕ್ರಿಯೆಯಲ್ಲಿ ವಂಚನೆ ಇರುವುದಿಲ್ಲ. ಆದಕಾರಣ ಕ್ಷಮಾವಂತನಾದವನಲ್ಲಿ ಮಾತ್ರ ಆರ್ಜವ ಗುಣ ಕಾಣಿಸುತ್ತದೆ.

ಶೌಚಗುಣ ಅಂತರಂಗ ಮತ್ತು ಬಹಿರಂಗ ಶುದ್ಧಿಗೆ, ನಿರ್ಲೋಭತೆಗೆ ಸಾಕ್ಷಿಯಾಗಿದೆ. ಕ್ಷಮಾವಂತನಿಗೆ ಒಳಗೊಂದು – ಹೊರಗೊಂದು ಇರುವುದಿಲ್ಲ. ಶಾಂತನಾಗಿ ಕಾರುಣ್ಯಭಾವದಿಂದ ಶುಚಿ ಪುರುಷನಾಗಿರುತ್ತಾನೆ. ಆದಕಾರಣ ಶುಚಿವಂತ ಎಂದರೆ ಕ್ಷಮಾವಂತ ಎನ್ನಬಹುದು.

ಸಂಯಮ ಎಂಬುದು ಇಂದ್ರಿಯನಿಗ್ರಹವನ್ನು ಕುರಿತದ್ದು. ಪ್ರಾಣಿದಯೆ ಇರಲು ಈ ಗುಣ ಅತ್ಯಗತ್ಯ. ಕ್ಷಮಾವಂತನು ಕೋಪವೆಂಬ ಕಾರಿನ ವೇಗವರ್ಧಕ್ಕೆ (ಆಕ್ಸಿಲೇಟರ್) ತಾಳ್ಮೆ ಎಂಬ ತಡೆ (ಬ್ರೇಕ್) ಯನ್ನು ಹಾಕುವುದನ್ನು ಕಲಿತು ಸಂಯಮಮೂರ್ತಿ ಆಗಿರುತ್ತಾನೆ.

ಸತ್ಯ ಮತ್ತು ಕ್ಷಮೆಯಸಂಬಂಧ ಅವಳಿಜವಳಿಯಂತೆ ಎನ್ನಬಹುದು. ಸತ್ಯವಂತನು ಕ್ಷಮಾವಂತನಾಗಿರುತ್ತಾನೆ. ಆದಕಾರಣ

ಸತ್ಯ ಕ್ಷಮೆಗಳು ಒಟ್ಟೊಟ್ಟಿಗೆ ಕಂಡುಬರುವ ಗುಣಗಳಾಗಿವೆ. ಧರ್ಮ ರಾಜ, ಏಸು, ಗಾಂಧಿ, ಬುದ್ಧ, ಮಹಾವೀರ ಮೊದಲಾದವರೆಲ್ಲ ಸತ್ಯಸಂಧರೂ, ಕ್ಷಮಾಮೂರ್ತಿಗಳೂ ಆಗಿದ್ದಾರೆ.

ತಪಸ್ಸುಮಾಡಲು ಕ್ಷಮಾಗುಣವಿಲ್ಲದೆ ಸಾಧ್ಯವೇ ಇಲ್ಲ ಪರೀಷಹಗಳನ್ನು ಜಯಿಸಲು ಸಹನೆ ಅತ್ಯಗತ್ಯ. ಸಹನೆ ಕ್ಷಮೆಯ ಪ್ರಧಾನ ಗುಣವಾಗಿದೆ. 'ಕ್ಷಮಾತುಲ್ಯಂ ತಪಾನಾಸ್ತಿ' ಎನ್ನುತ್ತದೆ. ಸುಭಾಷಿತ. ಕ್ಷಮೆಗೆ ಸಮಾನ ತಪ ಇನ್ನೊಂದಿಲ್ಲ.

ತ್ಯಾಗ ಎಂದರೆ ರಾಗ ದ್ವೇಷಗಳನ್ನು ಪ್ರಾಪಂಚಿಕಾಸಕ್ತಿಯನ್ನು ನಶ್ವರ ಭೋಗಗಳನ್ನುತ್ಯಜಿಸಿ ವೀತರಾಗುವ ಗುಣ. ಸಮತೆ ಕ್ಷಮೆಯ ಗುಣ. ತ್ಯಾಗವಿಲ್ಲದವ ಸ್ವಾರ್ಥಿ. ಸಮತಾವ್ಯಕ್ತಿ ನಿಸ್ವಾರ್ಥಿ. ಉದಾರ ಹೃದಯಿಗೆ ತ್ಯಾಗಕ್ಕೆ ಮನಸ್ಸು ಬರುತ್ತದೆ. ಕ್ಷಮಾವಂತನಿಗೆ ಉದಾರಭಾವ ಇರುತ್ತದೆ. ಆದ್ದರಿಂದ, ತ್ಯಾಗಗುಣಕ್ಕೆ ಬೇಕಾದ ಪೂರಕಸ್ವಭಾವಗಳಾದ ಸಹನೆ, ಉದಾರತೆ, ನಿಸ್ವಾರ್ಥತೆ, ನಿರ್ಮೋಹ, ಸಮತೆ ಮೊಡಲಾದವುಗಳೆಲ್ಲ ಕ್ಷಮಾಗುಣದ ಲಕ್ಷಣಗಳಾಗಿರುವುದರಿಂದ ತ್ಯಾಗಮೂರ್ತಿ ಕ್ಷಮಾಸಂಪನ್ನನಾಗಿರಲೇಬೇಕು.

ಇನ್ನು ಆಕಿಂಚನ್ಯಭಾವ;ಅಪರಿಗ್ರಹಭಾವ ತಳೆದು ಆತ್ಮಸ್ವರೂಪವನ್ನು ಅರಿತು ಡೇಹಕ್ಕೆ ಸಂಬಂಧಿಸಿದ ನಶ್ವರವಾದವುಗಳಿಂದ ದೂರ ಸರಿಯುವ ಗುಣ ಇದು. ಲೋಕಹಿತ ಆತ್ಮಜ್ಞಾನ ಮತ್ತು ಮೋಕ್ಷ ಧ್ಯೇಯ ಇರುವವನಿಗೆ ಈ ಭಾವ ಬರಲು ಸಾಧ್ಯ. ಕ್ಷಮಾವಂತನು ಆತ್ಮನ ಸ್ವರೂಪ ಅರಿತು ಕೋಪ ಇತ್ಯಾದಿಗಳು ಕಷಾಯಫಲ ಮತ್ತು ಕರ್ಮಫಲ ಅಂತ ತಿಳಿದು ವರ್ತಿಸುತ್ತಾನೆ. ಎಂದರೆ ಆಕಿಂಚನ್ಯಭಾವ ಬಕಲು ಪೂರ್ವಸಿದ್ಧತೆಯಾಗಿ ಕ್ಷಮಾಗುಣ ಇರಲೇ ಬೇಕು.

ಬ್ರಹ್ಮಚರ್ಯ ಎಂದರೆ ವೀತರಾಗನಾಗಿ ಆತ್ಮಜ್ಞಾನಿಯಾಗುವುದು. ಇದು ಕ್ಷಮೆಯ ಜತೆಗೆ ಇತರೆ ಅಷ್ಟಗುಣಗಳಿಂದ ಕೂಡಿದವನಿಗೆ ಮಾತ್ರ ಶಕ್ಯ. ಜ್ಞಾನಿ ಸದಾ ಸಾವಧಾನಿ ; ಸಮಾಧಾನಿ ; ಸಹಿಷ್ಣು ; ಆತ್ಮಚಿಂತಕ; ಕ್ಷಮಾಮೂರ್ತಿ; ಜೀವದಯೆ ಹಿನ್ನೆಲೆಯಲ್ಲಿ ಕ್ಷಮಾಗುಣ ಹೊಂದಿದ್ದರೆ, ಬ್ರಹ್ಮಚಾರಿ ಜ್ಞಾನದ ಹಿನ್ನೆಲೆಯಲ್ಲಿ ಆತ್ಮನನ್ನು ಅರಿಯುತ್ತಾನೆ. ಆದ್ದರಿಂದ ಇವೆರಡೂ ಪೂರಕಗುಣಗಳು.

ಹೀಗೆ ಕ್ಷಮೆಗೂ ಉಳಿದ ಒಂಬತ್ತು ಧರ್ಮಗಳಿಗೂ ಪರಸ್ಪರ ಪೂರಕ ಸಂಬಂಧವಿದೆ. ಕ್ರಮಾನುಗತ ಪರಿಣಾಮವಿದೆ. ಹಂತ ಹಂತವಾಗಿ ಮಹಂತನಾಗಲು, ಆತ್ಮನು ಪರಮಾತ್ಮನಾಗಲು ದಶಸೋಪಾನಗಳಲ್ಲಿ ಕ್ಷಮೆಯು ಅಗ್ರಸ್ಥಾನವನ್ನು ಅಲಂಕರಿಸಿದೆ. ಅತ್ಯುನ್ನತ ಗುಣವಾಗಿದೆ.

ಕ್ಷಮಾಧರ್ಮ 1 ಅಂಕಿ ಇದ್ದಹಾಗೆ. ಉಳಿದ 9 ಧರ್ಮಗಳು ಸೊನ್ನೆ ಇದ್ದಹಾಗೆ ಎನ್ನಬಹುದು. ಒಂದು ಅಂಕಿ ಮುಂದೆ ಇರುವ ಸೊನ್ನೆಗಳಿಗೆಲ್ಲಾ ಬೆಲೆ ಬರುತ್ತದೆ. ಅಂತೆಯೇ ಕ್ಷಮಾಧಾರವಾದ ನವಧರ್ಮಗುಣಗಳಿಗೂ ಬೆಲೆ – ನೆಲೆ ಇದೆ. ಆದ್ದರಿಂದ ಕ್ಷಮಾಗುಣವು ಆದಿಗುಣವೂ ಹೌದು; ಆಧಾರ ಗುಣವೂ ಹೌದು.

ಕ್ಷಮೆಗೆ ಆದ್ಯಸ್ಥಾನ

ಕ್ಷಮೆಗೆ ಅನೇಕ ದೃಷ್ಟಿಗಳಿಂದ ಆದ್ಯಸ್ಥಾನ ಸಿಕ್ಕಿದೆ. ಮೊದಲನೆಯದಾಗಿ, ತತ್ತ್ವಾರ್ಥ ಸೂತ್ರದಲ್ಲಿ ಉಮಾಸ್ವಾಮಿಗಳು ದಶಧರ್ಮಪರ್ವಗಳನ್ನು ಕುರಿತು ಹೇಳುವಾಗ ಉತ್ತಮಕ್ಷಮಾಮಾರ್ದವಾರ್ಜವ ಶೌಚ ಸತ್ಯ ಸಂಯಮ । ತಪಸ್ತ್ಯಾಗಾಕಿಂಚನ್ಯ ಬ್ರಹ್ಮ

ಚರ್ಯಾಣಿ ಧರ್ಮಃ। ಎಂದಿದ್ದಾರೆ. ಇಲ್ಲಿ ಕ್ಷಮೆಗೆ ಆದಿಸ್ಥಾನವನ್ನು ನೀಡಿದ್ದಾರೆ ಮತ್ತು ಇಲ್ಲಿರುವ ಕ್ರಮದಲ್ಲೇ ದಶಲಕ್ಷಣವನ್ನು ಆಚರಿಸುತ್ತಿರುವುದೂ ಗಮನಿಸಬೇಕಾದ ಸಂಗತಿಯಾಗಿದೆ.

ಎರಡನೆಯದಾಗಿ, ಅಷ್ಟಾವಕ್ರಗೀತೆಯಲ್ಲೂ ಕ್ಷಮೆಗೆ ಅಗ್ರಸ್ಥಾನ ದೊರೆತಿದೆ. ಜನಕನು ಅಷ್ಟಾವಕ್ರಮಹರ್ಷಿಗೆ ಮುಕ್ತಿ ಹೇಗೆ ಸಾಧ್ಯ? ಎಂದು ಕೇಳಿದಾಗ ಅದಕ್ಕೆ ಉತ್ತರವಾಗಿ ಮಹರ್ಷಿಗಳು ಹೀಗೆ ಹೇಳಿದರು :

ಮುಕ್ತಿಮಿಚ್ಛಸಿ ಚೇತ್ತಾತ ವಿಷಯಾನ್ವಿಷವತ್ಯಜ।
ಕ್ಷಮಾರ್ಜವ ದಯಾ ತೋಷ ಸತ್ಯಂ ಪೀಯೂಷವದ್ಭಜ॥

(ಹೇ, ದೊರೆಯೆ, ಮುಕ್ತಿ ಬೇಕಾದರೆ ವಿಷಯಾಸಕ್ತಿಯನ್ನು ವಿಷವೆಂದು ತಿಳಿದು ತ್ಯಜಿಸು. ಕ್ಷಮೆ, ಆರ್ಜವ, ದಯಾ, ತೋಷ, ಸತ್ಯ ಎಂಬುವನ್ನು ಪಂಚಾಮೃತದಂತೆ ಸೇವಿಸು.) ಇಲ್ಲಿ ಕ್ಷಮೆಯನ್ನು ಮೊದಲು ಹೇಳಿರುವುದನ್ನು ಗಮನಿಸಬೇಕು.

ವಾಲ್ಮೀಕಿ ರಾಮಾಯಣದಲ್ಲಿ ಕ್ಷಮೆಯೇ ಸಾರಸರ್ವಸ್ವ ಎಂಬಂತೆ ಕ್ಷಮೆಗೆ ಅಗ್ರಸ್ಥಾನವಿತ್ತ ಮಾತೊಂದು ಬರುತ್ತದೆ.

ಅಲಂಕಾರೋ ಹಿ ನಾರೀಣಾಂ ಕ್ಷಮಾತು ಕ್ಷಮಾತು ಪುರುಷಸ್ಯ ವಾ
ಕ್ಷಮಾದಾನಂ ಕ್ಷಮಾಸತ್ಯಂ ಕ್ಷಮಾ ಯಜ್ಞಶ್ಚ ಪುತ್ರಿಕಾ
ಕ್ಷಮಾ ಯಶಃ ಕ್ಷಮಾ ದಮಃ ಕ್ಷಮಾಯಾಂ ವಿಷ್ಠಿತಂ ಜಗತ್.

(ಸ್ತ್ರೀಯರಿಗಾಗಲಿ ಪುರುಷರಿಗಾಗಲಿ ಕ್ಷಮೆಯೇ ನಿಜಭೂಷಣಃ, ಕ್ಷಮೆಯೇ ದಾನ, ಸತ್ಯ, ದಯ, ಯಶ, ಯಜ್ಞ ಇತ್ಯಾದಿ ಸಕಲವೂ ಆಗಿದೆ.)

ಶ್ರಮಣಸೂಕ್ತದಲ್ಲೂ ದಶಧರ್ಮ ನಿರೂಪಣೆ ಮಾಡುತ್ತಾ ಕ್ಷಮೆಗೆ ಆದಿಸ್ಥಾನ ನೀಡಲಾಗಿದೆ.

ಉತ್ತಮಕ್ಷಮಾಮಾರ್ದವಾರ್ಜವ – ಸತ್ಯಂ ಶೌಚಂ ಚ
ಸಂಯಮಂ ಚೈವ
ತಪಸ್ತ್ಯಾಗಃ ಆಕಿಂಚನ್ಯಂ ಬ್ರಹ್ಮ ಇತಿ ದಶವಿಧಃ ಧರ್ಮಃ ॥

ಅನೇಕ ಸುಭಾಷಿತಗಳು ಕ್ಷಮೆಯ ಮಹತ್ವವನ್ನು ಸುಂದರವಾಗಿ ನಿರೂಪಿಸುತ್ತವೆ. ಒಂದು ಸುಭಾಷಿತವು ಕ್ಷಮಾತುಲ್ಯಂ ತಪಾನಾಸ್ತಿ ; (ಕ್ಷಮೆಗೆ ಸಮಾನವಾದ ತಪಸ್ಸು ಇನ್ನೊಂದಿಲ್ಲ ಎಂದಿದೆ.)

ಇನ್ನೊಂದು ಸುಭಾಷಿತ ಹೀಗೆ ಹೇಳುತ್ತದೆ.

ನರಸ್ಯಾಭರಣಂ ರೂಪಂ : ರೂಪಸ್ಯಾಭರಣಂ ಗುಣಃ
ಗುಣಸ್ಯಾಭರಣಂ ಜ್ಞಾನಂ : ಜ್ಞಾನಾಸ್ಯಾಭರಣಂ ಕ್ಷಮಾ
(ಚಾಣಿಕ್ಯನೀತಿ–43)

ಮತ್ತೊಂದು ಸುಭಾಷಿತವು ಹೀಗೆ ಸಾರುತ್ತದೆ ;

ಸತ್ಯಂ ಮಾತಾ ಪಿತಾಜ್ಞಾನಂ ಧರ್ಮೋಭ್ರಾತಾ ದಯಾಸಖಾ ।
ಶಾಂತಿಃ ಪತ್ನೀ ಕ್ಷಮಾಪುತ್ರಃ ಷಡೇತೇ ಮಮಬಾಂಧವಾಃ ॥

ಇಲ್ಲಿ ಕ್ಷಮೆಯನ್ನು ಕುಲಪುತ್ರನಿಗೆ ಹೋಲಿಸಲಾಗಿದೆ. ವಂಶೋದ್ಧಾರವು ಕುಲಪುತ್ರನಿಂದ. ಕುಲಪುತ್ರನಿದ್ದರೆ ಕೀರ್ತಿ, ಸದ್ಗತಿ ಎಲ್ಲವೂ; ಆದ್ದರಿಂದ ಕ್ಷಮೆಯನ್ನು ಪುತ್ರನಿಗೆ ಹೋಲಿಸಿರುವುದು, ಅದರ ಹಿರಿಮೆಗೆ ಸಾಕ್ಷಿಯಾಗಿದೆ.

ಜಗತ್ತಿನಲ್ಲಿ ಗೆಲುವು ದೊರೆಯುವುದು, ವಿಜಯಿ ಆಗುವುದು ಕ್ಷಮೆಯಿಂದಲೇ ಸಾಧ್ಯ ; ಕ್ರೋಧದಿಂದ ಶಕ್ಯವಿಲ್ಲ. ಈ ಬಗ್ಗೆ ಈ ನುಡಿ ಪ್ರಸಿದ್ಧವಾಗಿದೆ.

ಧರ್ಮೋ ಜಯತಿ ನಾಧರ್ಮಃ ಸತ್ಯಂ ಜಯತಿ ನಾನೃತಂ
ಕ್ಷಮಾ ಜಯತಿ ನಕ್ರೋಧೋ ವಿಷ್ಣುರ್ಜಯತಿ ನಾಸುರಃ

ಆದ್ದರಿಂದಲೇ ರತ್ನಾಕರನು ಹೀಗೆ ಪ್ರಶ್ನಿಸಿದ್ದಾನೆ :

"ಕ್ಷಮೆ ಮಾಳ್ಪಂತೆ ವಿರೋಧಮೇಂ ಕುಡುವುದೇ ಸಂತೋಷಮಂ ?" ಆದ್ದರಿಂದಲೇ ರತ್ನಾಕರನು ತೀರ್ಥಂಕರರನ್ನು ಬಣ್ಣಿಸುತ್ತಾ ಚೆಲ್ವರ ಚೆಲ್ವ, ಚೆನ್ನಿಗರ ಚೆನ್ನ, ಸುವೀರರ ವೀರ ಇತ್ಯಾದಿ ಹೇಳುತ್ತಾ ಕೊನೆಗೊಂದು ಮಾತನ್ನು, 'ಶಾಂತಿ ಶೀತಲರ ಶಿರೋಮಣಿ' ಎಂದು ಸಾರಿದ್ದಾನೆ. ಏಕೆಂದರೆ ತೀರ್ಥಂಕರ ಎಂದರೆ ಕ್ಷಮೆಯ ಸಾಕ್ಷಾತ್ಕಾರ. ಆದ್ದರಿಂದ ನೆಲದ ಮರೆಯ ನಿಧಾನದಂತೆ, ಫಲದ ಮರೆಯ ರುಚಿಯಂತೆ, ಶಿಲೆಯ ಮರೆಯ ಹೇಮದಂತೆ, ತಿಲದ ಮರೆಯ ತೈಲದಂತೆ ಭಾವದ ಮರೆಯ ಬ್ರಹ್ಮದಂತೆ, ಅನೇಕ ಧರ್ಮಗುಣಗಳ ಹಿಂದೆ ಕ್ಷಮಾಗುಣ ಎಲೆಯ ಮರೆಯ ಕಾಯಿಯಂತೆ ಇದೆ. ವಾಸ್ತವವಾಗಿ ಆದ್ಯಸ್ಥಾನ ಗಳಿಸಿದೆ ಎಂಬುದನ್ನು ಜೈನಶಾಸ್ತ್ರ ಗ್ರಂಥಗಳೂ ಸುಭಾಷಿತಗಳೂ ಸಾರುತ್ತವೆ. ಇದಲ್ಲದೆ ಇತರ ಧರ್ಮಗಳ ಗ್ರಂಥಗಳೂ ಸಂತರೂ ಕ್ಷಮೆಯನ್ನು ಕುರಿತು ಹಾಡಿ ಹೊಗಳಿ ಬಣ್ಣಿಸಿದ್ದುಂಟು. ಉದಾಹರಣೆಗೆ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದು.

ತುಕಾರಾಮರು ತಮ್ಮ ಅಭಂಗವೊಂದರಲ್ಲಿ ಹೀಗೆ ಹೇಳಿದ್ದಾರೆ : "ಪರರ ಮನಸಿಗೆ ಶಾಂತಿಯ ನೀಡುವ ಸರಳ ಮಧುರ ಮಾತಾಡಲು ಬೇಕು." ಇಲ್ಲಿ ಕ್ಷಮಾಗುಣಿ ಆಗಿರಬೇಕು ಎಂಬ ಧ್ವನಿತಾರ್ಥವಿದೆ. ತ್ಯಾಗರಾಜರ ಕೀರ್ತನೆಯ, ಶಾಂತಮುಲೇಕ ಸೌಖ್ಯಮು ಲೇದು ಎಂಬ ಮಾತೂ ಸಹ ಕ್ಷಮಾಗುಣದ ಬಗ್ಗೆ ಹೇಳಿದ ಮಾತಾಗಿದೆ. ವಚನಕಾರ ಸಿದ್ಧರಾಮನು ತನ್ನ ವಚನವೊಂದರಲ್ಲಿ "ಮನವ ನೋಯಿಸದವನೇ, ಘಾತವ ಮಾಡದವನೇ ಪರಮ ಪಾವನ ನೋಡಾ" ಎಂಬ

ಮಾತು, "ಸಕಲ ಪ್ರಾಣಿಗಳ ಮೇಲೆ ರೋಷವಿಲ್ಲದಿರಬೇಕು, ಇಂತಪ್ಪ ಶಿವಶರಣರಲ್ಲಿ ಸನ್ನಿಹಿತನಯ್ಯ ದೇವರು," ಎಂಬ ಚೆನ್ನಬಸವಣ್ಣವಾಣಿ ಕ್ಷಮೆಯ ಮಹತ್ವ ಕಂಡು ಹೇಳಿದ ನುಡಿಯಾಗಿದೆ. ಉಪನಿಷತ್ತು ಸಾರಿದ " ಮಾವಿದ್ವಿಷಾವಹೈ " (ಪರಸ್ಪರ ದ್ವೇಷ ಸಲ್ಲದು) ಎಂಬ ಎಂಬ ಮಾತೂ ಗಮನಾರ್ಹವಾಗಿದೆ. ಪುರಂದರದಾಸರು ಕ್ಷಮೆಯ ಬಗ್ಗೆ ಪ್ರತ್ಯೇಕವಾಗಿ ಅನೇಕ ಮಾತುಗಳನ್ನು ಹೇಳಿದ್ದಾರೆ. ಅವರು ಒಂದು ಕೀರ್ತನೆಯಲ್ಲಿ ಹೇಳಿರುವುದೂ ಹೀಗಿದೆ :

"ಶಾಂತಿ ಕ್ಷಮೆ ದಯೆ ಪಿಡಿಯಲು ಬೇಕು । ಭ್ರಾಂತಿ ಕ್ರೋಧವ ಕಳೆಯಲುಬೇಕು । ಸಂತರ ಸಂಗತಿ ರತಿ ಇರಬೇಕು । ಬಂದದ್ದುಂಡು ಸುಖಿಸಲುಬೇಕು । ನಿಂದಾಸ್ತುತಿಗಳ ತಾಳಲುಬೇಕು ॥

ಪಂಡಿತ ಕೆ. ಭುಜಬಲಿಶಾಸ್ತ್ರಿಗಳು ಕ್ಷಮೆಯ ಬಗ್ಗೆ ಹೇಳುತ್ತಾ "ಈ ಸಿದ್ಧಾಂತದ ಪ್ರಕಾರ ಜೈನನಾದವನಿಗೆ ಪ್ರಪಂಚದಲ್ಲೇ ವೈರಿಯೇ ಇರಬಾರದು" ಎನ್ನುತ್ತಾರೆ. ಕ್ಷಮೆಯ ಹಿರಿಮೆಯನ್ನು ಇಲ್ಲಿ ಗುರ್ತಿಸ ಬಹುದು. ಇಡೀ ಜನಾಂಗವನ್ನೇ ಶಾಂತಿಪ್ರಿಯವನ್ನಾಗಿ, ಜಗತ್ತನ್ನೇ ಸುಖಿಯಾಗಿ ಮಾಡಬಲ್ಲ ಶಕ್ತಿ ಕ್ಷಮೆಗಿದೆ ಎಂದು ತಿಳಿಯುತ್ತದೆ.

ಕ್ಷಮೆಗೆ ಸಂತರು, ಧಾರ್ಮಿಕರು, ತಮ್ಮ ಗ್ರಂಥಗಳಲ್ಲಿ ಬೋಧೆ ಗಳಲ್ಲಿ ಕೊಟ್ಟ ಪ್ರಾಶಸ್ತ್ಯ ಹಾಗಿರಲಿ. ಅನ್ಯ ಧರ್ಮೀಯರು ಇದಕ್ಕೆ ಪ್ರಾಶಸ್ತ್ಯ ನೀಡಿದ್ದರು. ಎಂಬ ಬಗ್ಗೆ ಈ ಉಲ್ಲೇಖ ದೊರೆಯುತ್ತದೆ. "ಜೈನರ ಮಾತು ಹಾಗಿರಲಿ. ಮಹಮ್ಮದೀಯರಂತಹ ವಿಧರ್ಮ ಚಕ್ರ ವರ್ತಿಗಳೂ ಈ ಪರ್ವವನ್ನು ಶ್ರದ್ಧೆಯಿಂದ ಕಂಡಿದ್ದರು. ಈ ಹತ್ತು ದಿನಗಳಲ್ಲಿ ಅವರು ಸಂಪೂರ್ಣ ಹಿಂಸೆಯನ್ನು ತಮ್ಮ ರಾಜ್ಯದಲ್ಲಿ ನಿಲ್ಲಿ ಸಿದ್ದುಂಟು." ಮಹಮದ್ ಪೈಗಂಬರರು ಒಂಬತ್ತು ದೈವಾಜ್ಞೆಗಳನ್ನು

ವಿವರಿಸುತ್ತಾ ಆರನೆಯದನ್ನು ಹೀಗೆ ಹೇಳಿದ್ದಾರೆ : "ನನಗೆ ಯಾರು ಹಾನಿಯನ್ನು ಉಂಟುಮಾಡುವರೋ ಅವರನ್ನು ನಾನು ಕ್ಷಮಿಸಬೇಕು." ಅನೇಕ ಕಡೆಗಳಲ್ಲಿ ಅವರು ಕ್ಷಮಾಗುಣದ ಬಗ್ಗೆ ಮಹತ್ವ ನೀಡಿದ್ದಾರೆ. ಈ ದೃಷ್ಟಿಯಲ್ಲಿ ಮಹಮದೀಯರು ಈ ಪರ್ವಕ್ಕೆ ಕೊಟ್ಟ ಮನ್ನಣೆ ಧರ್ಮಯುಕ್ತವಾಗಿದೆ ಎನ್ನಬಹುದು.

ಹೀಗೆ ವಿವಿಧ ಉಲ್ಲೇಖಗಳನ್ನೆಲ್ಲಾ ಗಮನಿಸಿದ ಪಕ್ಷಕ್ಕೆ ಕ್ಷಮಾಗುಣಕ್ಕೆ ಕೇವಲ ಜೈನಧರ್ಮದಲ್ಲಿ ಮತ್ತು ಶಾಸ್ತ್ರಗ್ರಂಥಗಳಲ್ಲಿ ಅಷ್ಟೇ ಅಲ್ಲದೆ ಇತರ ಧಾರ್ಮಿಕ ಪುರುಷರು ಅವರ ಧರ್ಮಗ್ರಂಥಗಳಲ್ಲೂ ಕ್ಷಮೆಯನ್ನು ಕೊಂಡಾಡಿ ಅದರ ಮಹತ್ವವನ್ನು ಹೇಳಿದ್ದಾರೆ ಎಂಬುದು ವಿದಿತವಾಗುತ್ತದೆ. ಆದಕಾರಣ ಕ್ಷಮಾ ಗುಣಕ್ಕೆ ಧರ್ಮದ ವಿಚಾರದಲ್ಲಿ ಆದ್ಯ ಸ್ಥಾನವಿದೆ ಎಂಬುದು ನಿಸ್ಸಂದೇಹವಾದ ಸಂಗತಿಯಾಗಿದೆ.

ಕ್ಷಮೆಯ ಲಕ್ಷಣಗಳು

ಕ್ಷಮೆ ಎಂದರೇನು ? ಎಂದು ಕೇಳುವುದು ಸುಲಭ. ಆದರೆ ಅದನ್ನು ಒಂದೇ ಮಾತಿನಲ್ಲಿ ಹೇಳುವುದು ಕಷ್ಟ. ಕ್ಷಮೆ ಎಂಬುದು ಆತ್ಮನ ಗುಣ. ಧರ್ಮಗುಣ. ಅದು ಭಾವನೆಯಲ್ಲಿ ಆಚರಣೆಯಲ್ಲಿ ಕಾಣಬೇಕಾದ ಸಂಗತಿ. ಭಾಷಣದ ವಿಷಯ ಅಲ್ಲ ; ಮಾತಿನಲ್ಲೇ ಅದರ ಪೂರ್ಣ ಸ್ವರೂಪ ಕಾಣುವುದು ಕಷ್ಟ. 'ಕ್ಷಮೆ ಕೇವಲ ವಾಣಿಯ ವಿಷಯವಲ್ಲ. ಅದು ಅಂತಃಕರಣದ ಸ್ಥಿತಿಯಾಗಿದೆ.' ಎಂದಿದ್ದಾರ ವಿದ್ಯಾನಂದರು.

ಆದರೂ ಸಹ ಅದರ ಬಗ್ಗೆ ಸ್ಥೂಲಕಲ್ಪನೆಯನ್ನು ಕೆಲವು ಉಕ್ತಿಗಳಿಂದ ಪಡೆಯಬಹುದಾಗಿದೆ.

'ಕ್ಷಮೆ' ಎಂಬ ಪದವನ್ನು ಶಬ್ದಾರ್ಥ ಕೌಸ್ತುಭವೆಂಬ ಶಬ್ದ ಕೋಶ ಹೀಗೆ ವಿವರಿಸಿದೆ :

"ಇತರರು ಎಷ್ಟೇ ಕೋಪಿಸಿಕೊಂಡರೂ ಹೊಡೆದು ಬಡಿದರೂ ಅವರ ವಿಷಯದಲ್ಲಿ ಸ್ವಲ್ಪವೂ ಕೋಪಿಸಿಕೊಳ್ಳಲೂ ಹೊಡೆಯಲೂ ಯತ್ನಿಸದೆ ಅವೆಲ್ಲವನ್ನೂ ಶುದ್ಧವಾದ ಮನೋವಾಕ್ಕಾಯಗಳಿಂದ ಸಹಿಸಿಕೊಳ್ಳುವುದು ಕ್ಷಮೆಯೆನಿಸುವುದು."

'ಸಮಣ ಸುತ್ತ' ವೆಂಬ ಗ್ರಂಥವು 8ನೇ ಸೂತ್ರದಲ್ಲಿ ಕ್ಷಮೆಗೆ ಹೀಗೆ ವ್ಯಾಖ್ಯೆ ನೀಡಿದೆ.

ಕ್ರೋಧೇನ ಯಃ ನತಪ್ಯತೇ ಸುರನರ ತಿರ್ಯಗ್ಭಿಃ ಕ್ರಿಯಾ
ಮಾಣೇऽಪಿ

ಉಪಸರ್ಗೇ ಅಪಿ ರೌದ್ರೇ, ತಸ್ಯ ಕ್ಷಮಾ ನಿರ್ಮಲಾ ಭವತಿ.

(ದೇವ, ಮಾನವ ಮತ್ತು ತಿರ್ಯಕ್‌ಗಳಿಂದ ಘೋರವಾದ ಉಪ ಸರ್ಗಗಳು ಉಂಟಾದರೂ ಯಾರು ಕೋಪದಿಂದ ಆವೇಶಪೂರ್ಣರಾಗು ವುದಿಲ್ಲವೋ ಅಂತಹವರ ಮನೋಧರ್ಮವೇ ನಿರ್ಮಲ ಕ್ಷಮಾಧರ್ಮ ವಾಗಿದೆ.)

ಆದಿಪುರಾಣ ಸಂಗ್ರಹದಲ್ಲಿ ಎಲ್. ಗುಂಡಪ್ಪನವರು ಹೀಗೆ ವಿವರಿಸಿದ್ದಾರೆ ; "ಕೋಪವನ್ನು ಪೂರ್ತಿಯಾಗಿ ತೊರೆದು ಯಾರು ಯಾವ ಕೇಡುಮಾಡಿದರೂ ತಾಳಿಕೊಳ್ಳುವುದು" ಇದೇ ಕ್ಷಮೆ.

ವ್ರತಪೂಜಾ ವಿಧಿಯಲ್ಲಿ ಡಿ. ಪದ್ಮನಾಭಶರ್ಮರ ವ್ಯಾಖ್ಯೆ ಇದು:

"ಪೃಥ್ವೀಕಾಯಿಕ ಮೊದಲಾದ ಆರು ಬಗೆಯ ಕಾಯಕ ಜೀವಿ ಗಳಲ್ಲಿ ಕ್ಷಮಾಧಾರಣೆ ಮಾಡುವುದು ಉತ್ತಮ ಕ್ಷಮಾಧರ್ಮ ಎನಿ ಸುತ್ತದೆ."

ಜಿ. ಪಿ. ರಾಜರತ್ನಂ ಅವರು ಕ್ಷಮೆಯ ಬಗ್ಗೆ 'ವಿಚಾರ ರಶ್ಮಿ' ಗ್ರಂಥದಲ್ಲಿ ಹೀಗೆ ವಿವರಿಸಿದ್ದಾರೆ : "ಸಹಿಸುವುದಕ್ಕೆ ಕಷ್ಟವಾದ ಅಹಿತವನ್ನು ಪ್ರಯತ್ನಪೂರ್ವಕವಾಗಿ ಸಹಿಸಿಕೊಳ್ಳುವುದು 'ಸಹನೆ' ಅಹಿತವಾದ ಅನುಭವವನ್ನು ಸಹಿಸುವುದು ಬೇರೆ ; ಆ ಅಹಿತಾನುಭವ ಯಾರಿಂದ ಆಗುತ್ತದೆಯೋ ಅವರನ್ನು ಸಹಿಸುವುದು ಬೇರೆ: ಅಂತಹವರನ್ನು ಸಹಿಸಿಕೊಂಡು ಅವರಿಗೆ ಯಾವ ರೀತಿಯಾದ ಪ್ರತೀಕಾರವನ್ನೂ ಮಾಡದೇ ಇದ್ದರೆ ಈ ಉತ್ತಮವಾದ ಸಹನೆಗೆ ಕ್ಷಮೆಯೆಂದು ಹೆಸರು."

ತತ್ತ್ವರತ್ನಪ್ರದೀಪಿಕೆಯಲ್ಲಿ ಬಾಲಚಂದ್ರದೇವ ಮುನಿ ತನ್ನ ಕನ್ನಡ ವ್ಯಾಖ್ಯೆಯಲ್ಲಿ ಉಮಾಸ್ವಾಮಿಗಳ ತತ್ವಾರ್ಥ ಸೂತ್ರದ ಬಗ್ಗೆ ಬರೆಯುತ್ತಾ 'ಉತ್ತಮ ಕ್ಷಮಾಧರ್ಮ' ಎಂಬುದಕ್ಕೆ ಹೀಗೆ ವಿವರಿಸಿದ್ದಾನೆ :

"ಖ್ಯಾತಿಪೂಜಾಲಾಭಾದಿನಿವೃತ್ತ್ಯರ್ಥಂ ಉತ್ತಮ ಶಬ್ದಂ ಪ್ರತ್ಯೇಕಂ ಯೋಜಿಸೆಪಡುವುದು"

"ಶರೀರಸ್ಥಿತಿ ಹೇತು ಮಾರ್ಗಣಾರ್ಥಂ ಪರಗೃಹಚರ್ಯಾಪರ್ಯಟನ ಕಾಲದೊಳ್ ದುಷ್ಟಜನಕೃತಾಕ್ರೋಶಪ್ರಹಸನಾವಜ್ಞಾ ತಾಡನ ಶರೀರವ್ಯಾಪಾದನಾದಿ ಸನ್ನಿಧಾನದೊಳ್ ಮುನಿಜನ ಜಾತಕಾಲುಷ್ಯಾನುತ್ಪತ್ತಿರೂಪೋತ್ತಮಕ್ಷಮೆಯುಂ"....

"ಆತ್ಮನಂ ಉತ್ತಮ ಗುಣಸ್ಥಾನದೊಳ್ ತಾಳ್ವುದರಿಂ ಧರ್ಮಮಕ್ಕುಂ ಎಂಬುದು ತಾತ್ಪರ್ಯಂ"

ಈ ವ್ಯಾಖ್ಯೆಯಲ್ಲಿ ಮುನಿಧರ್ಮದ ಹಿನ್ನೆಲೆಯಲ್ಲಿ ಕ್ಷಮಾಪದದ ವಿವರಣೆಯನ್ನು ನೀಡಿರುವುದನ್ನು ಗಮನಿಸಬಹುದು.

"ಕ್ರೋಧವೆಂಬ ಶತ್ರುವನ್ನು ಜಯಿಸುವುದಕ್ಕೆ ಉತ್ತಮ ಕ್ಷಮೆ" ಎಂದು ಹೆಸರು. ಎಂಬುದಾಗಿ ಅಮೋಲ ದಶಧರ್ಮ ನಿರೂಪಿಸಿದರೆ "ಸ್ವಂತಕ್ಕೆ ಪ್ರತೀಕಾರ ಮಾಡುವ ಸಾಮರ್ಥ್ಯವು ಇದ್ದರೂ ಸಹ ಯಾರು ಇತರರು ಮಾಡಿದ ಉಪಸರ್ಗವನ್ನು ಸ್ವಹಿತಕ್ಕಾಗಿ ಸಹನ ಮಾಡುವರೋ ಅವರ ಸಹನಶೀಲತೆಗೇನೇ ಉತ್ತಮ ಕ್ಷಮಾ ಎನ್ನ ಬೇಕು" ಎಂದು ರತ್ನಕರಂಡಕ ಶ್ರಾವಕಾಚಾರದಲ್ಲಿ ಹೇಳಿದೆ.

ದಶಲಾಕ್ಷಣಿಕಪರ್ವವೆಂಬ ಗ್ರಂಥದಲ್ಲಿ ಕ್ಷಮೆಯೆಂದರೇನು ? ಎಂಬುದಕ್ಕೆ ಶ್ರೀ ಎಸ್. ಬಿ. ಜಿನಚಂದ್ರ ಶಾಸ್ತ್ರಿಗಳು ಹೀಗೆ ಹೇಳಿದ್ದಾರೆ ; "ದಯೆಯೇ ಧರ್ಮದ ಮೂಲ. ಇಂಥ ಧರ್ಮ ನಂಬಿ ತಿಳಿದು ಆಚರಿಸುವವನು ಸಾಧು. ಈತನು ದಯಾಮೂರ್ತಿ, ಶಾಂತಿಮೂರ್ತಿ, ಕ್ಷಮಾಮೂರ್ತಿ, ಪರಿಪೂರ್ಣ ವಿಕಾಸ ಹೊಂದಿದ ಕ್ಷಮೆಗೆ ಈತ ನಿದರ್ಶನ. ಹೀಗೆ ಯಾರಲ್ಲಿ (ಶಾಂತಿ, ದಯೆ ಇತ್ಯಾದಿ ಧರ್ಮಗುಣಗಳು) ಪರಿಪೂರ್ಣವಾಗಿ ವಿಕಾಸವಾಗಿರುವುದೋ ಆ ಗುಣಕ್ಕೆ ಕ್ಷಮಾ ಧರ್ಮವೆಂದು ಹೆಸರು"

ಒಟ್ಟಿನಲ್ಲಿ ಕ್ಷಮೆಯ ವ್ಯಾಖ್ಯೆಯನ್ನು ಹೀಗೆ ಹೇಳಬಹುದು : ಕ್ಷಮೆ ಎಂದರೆ ಕ್ರೋಧನಾಶ. ಸಹನಾಗುಣದ ಪ್ರತೀಕ. ಶಾಂತ ಸ್ವಭಾವದ ಪ್ರತ್ಯಕ್ಷದರ್ಶನ, ಆಚರಣೆಯ ಅಂಗ. ಅಪಕಾರಕ್ಕೆ ಬದಲಾಗಿ ಉಪಕಾರ ಮಾಡುವ ಮನೋಭಾವ. ಆತ್ಮದರ್ಶನಕ್ಕೆ ಅತ್ಯಂತ ಸಹಕಾರಿಯಾದ ಧರ್ಮಗುಣ.

ಕ್ಷಮಾವಂತರ ಸ್ವರೂಪ

ಕ್ಷಮಾವಂತರು ಎಲ್ಲರೂ ಆಗಲು ಶಕ್ಯವಿದ್ದರೂ ಸುಲಭವಲ್ಲ. ಆದ್ದರಿಂದ ನಿಜವಾದ ಕ್ಷಮಾವಂತರನ್ನು ಕಾಣುವುದು ಕಷ್ಟ.

ಶೈಲೇ ಶೈಲೇ ನ ಮಾಣಿಕ್ಯಂ ಮೌಕ್ತಿಕಂ ನ ಗಜೇ ಗಜೇ
ಸಾಧವೋ ನಹಿ ಸರ್ವತ್ರ ಚಂದನಂ ನ ವನೇ ವನೇ

(ಸುಭಾಷಿತ)

[ಕಂಡ ಕಂಡ ಗುಟ್ಟಬೆಟ್ಟಗಳಲ್ಲಿ ಮುತ್ತು ಮಾಣಿಕ್ಯಗಳು ಸಿಗುವುದಿಲ್ಲ. ಆನೆಯ ಗಂಡಸ್ಥಲದಲ್ಲಿ ಸಿಗುತ್ತದೆ. ಆದರೆ ಎಲ್ಲಾ ಗಜಗಳ ಗಂಡಸ್ಥಲಗಳಲ್ಲಿ ಸಿಗದು. ಹಾಗೆಯೇ ಎಲ್ಲಾ ಕಾಡಿನಲ್ಲೂ ಚಂದನ ಮರಗಳು ಬೆಳೆಯಲಾರದು. ಅಂತೆಯೇ ಸಾಧುಗಳು (ಕ್ಷಮಾವಂತರು ಎಲ್ಲಾ ಕಡೆ ಸಿಗರು.]

ಕ್ಷಮೆ ಅಥವಾ ತಾಳ್ಮೆ ಸಹಸ್ರಾರು ಮಂದಿಯಲ್ಲಿ ಕಂಡರೂ "ಎಲ್ಲೋ ಕೆಲವರಲ್ಲಿ ಸಮಯಾನುಕೂಲವಾಗಿ ಕಂಡು ಬರುವುದು." ಉಳಿದವರಲ್ಲಿ ಕ್ಷಮಾಗುಣ ಇದ್ದರೂ ಕಾಲೋಚಿತವಾಗಿ ಬಳಸುವುದಿಲ್ಲ. ಆ ಮೇಲೆ ನೆನೆದು, 'ನಾನೆಷ್ಟು ದುಡುಕಿದೆ ತಾಳ್ಮೆಯಿಂದಿರಲಿಲ್ಲ. ಆಗಲೇ ಕ್ಷಮಿಸಲಿಲ್ಲ' ಎಂದು ಮರುಗುವರು. ಮಿಂಚಿದ ಮೇಲೆ ಚಿಂತಿಸಿ ಫಲವೇನು? ಊರು ಕೊಳ್ಳೆ ಹೊಡೆದಮೇಲೆ ಕೋಟೆ ಬಾಗಿಲು ಹಾಕಿದರೇನು ಬಂತು ? ಕ್ಷಮಾಗುಣವು ಹಸಿವಾದವನಿಗೆ ಅನ್ನವುದು ದೊರೆಕುವಂತೆ, ಬಾಯಾರಿದಾಗ ನೀರು ಸಿಗುವಂತೆ ಸಕಾಲದಲ್ಲಿ ನೀಡು ಮುಖ್ಯ. ಮಹಾಪುರುಷರ ಕ್ಷಮಾಗುಣವು ಸಕಾಲಿಕವೂ ಹೌದು ; ಅವರ ಮರಣ ಕಾಲದ ಸವಾಲೂ ಹೌದು ; ಸಾವಿಗೂ ಹೆದರ ಮರಣವೇ ಮಹಾನವಮಿ ಎಂದು ಭಾವಿಸಿ ಲೋಕದ ಜನಕ್ಕೆ 'ಅಸಾಧ್ಯ' ಎನ್ನುವಂಥ ಸಂದರ್ಭಗಳಲ್ಲಿ ಅವರು ಕ್ಷಮಾಮೂರ್ತಿಗಳಾಗಿ ಮೆರೆದಿದ್ದಾರೆ.

ವಿಪದಿ ಧೈರ್ಯಂ, ಅಥಾಭ್ಯುದಯೇ ಕ್ಷಮಾ
ಸದಸಿ ವಾಕಟ್ಪುತಾ ಯುಧಿ ವಿಕ್ರಮಃ

(ವಿಪತ್ತಿನ ಕಾಲದಲ್ಲಿ ಧೈರ್ಯ ; ಅಭ್ಯುದಯ ಕಾಲದಲ್ಲಿ ಕ್ಷಮಾ ವರ್ತನೆ ; ಸದಸ್ಸಿನಲ್ಲಿ ವಾಕ್ಚತುರತೆ ; ಯುದ್ಧದಲ್ಲಿ ಸಾಹಸ ತೋರ ಬೇಕು.)

ಕ್ಷಮಾವಂತರಿಗೆ ಸ್ವಲ್ಪವೂ ಅಹಂಕಾರವೇ ಇರುವುದಿಲ್ಲವೇ ? ಹಾಗೆಂದು ಹೇಳಲಾಗದು. ಅವರಲ್ಲಿ ಛಲ – ಅಹಂಕಾರ ಕಂಡು ಬಂದರೂ ಅದು ಸಾತ್ತ್ವಿಕ ಸ್ವರೂಪದ್ದು. ಅದರಲ್ಲಿ ಧರ್ಮದ ಗುಣ ಅಡಗಿರುತ್ತದೆ. ಲೋಕದ ಹಿತ ಅಡಗಿರುತ್ತದೆ. ಬಸವಣ್ಣನವರು ಇದಕ್ಕೊಂದು ನಿದರ್ಶನ. ಅವರು ಎನಗಿಂತ ಕಿರಿಯರಿಲ್ಲ ಎಂದು ವಿನಯರಾಗಿ ಹೇಳಿಕೊಳ್ಳುತ್ತಿದ್ದರು. ಆದರೂ ಛಲಬೇಕು ಶರಣಂಗೆ ಪರಧನವನೊಲ್ಲನೆಂಬ ; ಛಲಬೇಕು ಶರಣಂಗೆ ಪರಸತಿಯನೊಲ್ಲೆ ನೆಂಬ....ಎಂದು ಛಲವಾದಿಗಳಾಗಿದ್ದರು. "ಸದ್ಧರ್ಮದಲ್ಲಿ ಛಲ ಇದ್ದರೆ ಅದು ಸಾತ್ತ್ವಿಕಾಹಂಕಾರ" ಎಂದಿದ್ದಾರೆ. ಹಿರೇಮಲ್ಲೂರ ಈಶ್ವರನ್ ಅವರು ಸಾತ್ತ್ವಿಕ ಕೋಪವನ್ನು ಕುರಿತು ಅವರೊಂದೆಡೆ ಹೇಳಿ ದ್ದಾರೆ. "ಗಾಳಿ ಬೀಸಿದಾಗ ಬಂದನೇ ರಾಮು ? ಎಂದು ಗಾಳಿ ಬೀಸ ದಾಗ ಬಾರನೇಕೆ ರಾಮು ? ಗಿಡಮರಗಳನ್ನು ಸುತ್ತಿ ಸುಳಿಯುವ ಶಬರಿಯಂತಹ ಕೋಪ ನಿನ್ನದಾಗಿರಲಿ" 'ಇನ್ನು ಮುನಿಸು ಊಟದಲ್ಲಿ ರುವ ಉಪ್ಪಿನಕಾಯಿಯ ಹಾಗಿರಬೇಕು' ಆದ್ದರಿಂದ ಕ್ಷಮಾವಂತರ ಕೋಪ ಮುನಿಸು, ಛಲಗಳೆಲ್ಲಾ ಸದುದ್ದೇಶದಿಂದ ಕೂಡಿದ್ದು ಸತ್ಪರಿ ಣಾಮವನ್ನುಂಟು ಮಾಡುವಂತಹವು. ಅವು ಅವರಿಗೆ ಭೂಷಣ ಪ್ರಾಯ. ಆಕಸ್ಮಿಕವಾಗಿ ನಿಜವಾದ ಕೋಪವೇ ಬಂತೆನ್ನಿ. ಅದು ಕ್ಷಮಾವಂತರಲ್ಲಿ ಮಿಂಚಿನಂತೆ ಸಂಚಾರವಾಗಿ ಮಾಯವಾಗುತ್ತದೆ.

ನೀರಿನ ಮೇಲೆ ಬರೆದ ಗೆರೆಯಂತೆ ಮರುಕ್ಷಣದಲ್ಲೇ ಮಾಯವಾಗುತ್ತದೆ. ಇದೇ ಮಾತನ್ನು ಸುಭಾಷಿತಕಾರರೂ ಹೇಳಿದ್ದಾರೆ.

ಉತ್ತಮೇತು ಕ್ಷಣಂ ಕೋಪೋ
ಮಧ್ಯಮೇ ಘಟಿಕಾದ್ವಯಂ
ಅಧಮೇ ಸ್ಯಾದಹೋರಾತ್ರಂ
ಚಾಂಡಾಲೇ ಮರಣಾಂತಿಕಂ

ಕೋಪ ಬಂದೊಡನೆ ಸಜ್ಜನರು ಎಚ್ಚೆತ್ತು ಕೂಡಲೇ ಶಾಂತ ಮೂರ್ತಿಗಳಾಗುತ್ತಾರೆ, ಏಕೆಂದರೆ "ನಾಸ್ತಿಕ್ರೋಧಸಮೋ ರಿಪುಃ ನಾಸ್ತಿ ವಿದ್ಯಾಸಮೋ ಬಂಧುಃ" ಎಂದು ಅವರು ಬಲ್ಲರು.

ಕ್ಷಮಾವಂತರು ಅಪಕಾರಿಗೂ ಉಪಕಾರವೆಸಗುವಂತಹವರು. ಇಂದ್ರಚಾಪದಲ್ಲಿ ಹೇಳಿದಂತೆ, "ಕಲ್ಲನು ಹೊಡೆದರು ಬಡಿಗೆಯನೆಸೆದರು। ಮರನು ಹಣ್ಣನು ಕೊಡುವಂತೆ ತನುಮನಗಳನು ಹಿಂಸಿಸಿದರು ಸಭ್ಯರು ಲೇಸನೆ ಬಯಸುವರಲ್ತೆ।

ಕಷ್ಟ ಕೋಟಲೆಗೆ ಸಿಲುಕಿಕೊಂಡಾಗಲ್ಲೆಲ್ಲಾ ಕ್ಷಮಾವಂತರು ಪುಟವಿಟ್ಟ ಚಿನ್ನದಂತಾಗುತ್ತಾರೆ.

"ಚಂದನವನ್ನು ಅರೆದಷ್ಟೂ ಮತ್ತೆ ಮತ್ತೆ ಸುಗಂಧ ಹೆಚ್ಚುತ್ತದೆ. ಸಿಹಿಕಬ್ಬನ್ನು ಕತ್ತರಿಸಿದಂತೆಲ್ಲಾ ಅದರ ಸಿಹಿ ಹೊರಬರುತ್ತದೆ"

ಚಿನ್ನವನ್ನು ಕುಲುಮೆಯಲ್ಲಿ ಕಾಸಿದಂತೆಲ್ಲಾ ಶುದ್ಧವಾಗುತ್ತದೆ. ಹಾಗೆಯೇ ಸಜ್ಜನರು ಪ್ರಾಣಹೋದರೂ ಪ್ರಕೃತಿ ವಿಕೃತಿಗೆ ಒಳಗಾಗರು. ಕೋಪಿಗಳು ಸಿಡಿಲು, ಮಿಂಚು, ಗುಡುಗು, ಇದ್ದಂತೆ, ಸಿಡಿಲಿನ ಶಾಖದಿಂದ ಅಡಿಗೆಯಾಗದು ; ಮಿಂಚು ದೀಪದ ಕುಡಿ ಆಗದು. ಗುಡುಗು ದೇವಮದ್ದಳೆ ಆಗದು. ಕ್ಷಮಾವಂತನು ಒಲೆಯ

ಉರಿ (ಅಡಿಗೆಗೆ ನೆರವು) ಎಣ್ಣೆ ದೀಪದ ಕುಡಿ (ಪ್ರಶಾಂತ ಬೆಳಕಿಗೆ) ದೇವರ ಘಂಟೆ (ಸೇವೆಗೆ) ಇದ್ದಂತೆ. ಆದ್ದರಿಂದ ಕ್ಷಮಾರೂಪಿಗಳಿಂದ ಲೋಕಕ್ಕೆ ಹಿತವೇ ಹೊರತು ಕ್ರೋಧರೂಪಿಗಳಿಂದಲ್ಲ.

ಕ್ಷಮಾವಂತನ ಸಹನೆ, ತಾಳ್ಮೆ, ಸಾವಧಾನ, ಕಾಯುವಿಕೆ• ತಲ್ಲಣಗೊಳ್ಳದಿರುವ ಗುಣಗಳೆಲ್ಲ ಧರ್ಮದೃಷ್ಟಿಯಿಂದ ಕೂಡಿರಬೇಕು. ಧನ ಸಂಪಾದನೆಗೆ, ಕೀರ್ತಿ ಲಾಭಕ್ಕೆ, ದ್ವೇಷ ಸಾಧನೆಗೆ, ಸ್ವಾರ್ಥ ಸುಖಕ್ಕೆ ಇತರ ಲೌಕಿಕ ಪ್ರಯೋಜನಕ್ಕಾಗಿ ತೋರುವ ಕ್ಷಮಾಗುಣವು ಅನ್ಯ ಉಪದ್ರವವನ್ನು ಸಹಿಸುವ ಲಕ್ಷಣವು ಉತ್ತಮ ಕ್ಷಮಾವಂತನ ಲಕ್ಷಣವಲ್ಲ. ಆದಕಾರಣ 'ರಾಗದ್ವೇಷಗಳಿಂದ ರಹಿತವಾಗಿಬೇಕು. ಧರ್ಮಕ್ಕಾಗಿ ಕ್ಷಮಾಧಾರಣ ಮಾಡಿರಬೇಕು ; ಆತ್ಮನ ಯಥಾರ್ಥ ಸ್ವರೂಪವನ್ನು ಪ್ರಕಟಿಸುವ ಉದ್ದೇಶವಿರಬೇಕು. ಸಮ್ಯಕ್ ಜ್ಞಾನ ಪೂರ್ವಕವಾಗಿರಬೇಕು. ರತ್ನತ್ರಯಗಳ ಸಮಾವೇಶವಾಗಿರಬೇಕು. ಇವೆಲ್ಲ ಇರಬೇಕು ಎಂಬ ಉದ್ದೇಶದಿಂದಲೇ ಉತ್ತಮ ಎಂಬ ಪದ ವಿಶೇಷವನ್ನು ಈ ಧರ್ಮಗಳ ಹಿಂದೆ ಬಳಸಲಾಗಿದೆ. ಆದ್ದರಿಂದ ಉತ್ತಮ ಕ್ಷಮೆಯ ಲಕ್ಷಣಗಳನ್ನು ಉಳ್ಳವನೇ ನಿಜವಾದ ಕ್ಷಮಾವಂತ.

'ಕ್ಷಮಾವೀರಸ್ಯ ಭೂಷಣಂ' ಎನ್ನುತ್ತಾರೆ. ಧೃತಿ, ಶಮ, ದಮ ಶೌಚ, ಸತ್ಯ, ಮೊದಲಾದ ಗುಣಗಳನ್ನು ಪಡೆದವರೆಲ್ಲ ಧೀರರೇ. ಮುನಿಗಳು ಆ ವರ್ಗಕ್ಕೇ ಸೇರುವರು. ಶ್ರೇಷ್ಠರ ಗುಣ ಕ್ಷಮೆಯಾಗಿದೆ. ಹೆಂಬೇಡಿಯ ಕೈಯ ಚಂದ್ರಾಯುಧ ಅದಲ್ಲ. ಧೀರ ಗುಣ ಸಂಪನ್ನ ಮಾತ್ರ ಕ್ಷಮಾವಂತನಾಗಲು ಶಕ್ಯ.

ಕ್ಷಮಾದಾನಿ ಅತ್ಯುನ್ನತ ಗುಣಸಂಪನ್ನನೂ ಅಧಿಕಾರಯುತನೂ ಆಗಿರುತ್ತಾನೆ. ಕ್ಷಮಾವಂತರು ಲೋಕಪೂಜ್ಯರೂ ಹೌದು. ನಿದರ್ಶನಕ್ಕೆ

ಹೇಳುವುದಾದರೆ, ಭಾರತದಲ್ಲಿ ರಾಜ್ಯಾಂಗದ ಹಿನ್ನೆಲೆಯಲ್ಲಿ ರಾಷ್ಟ್ರಪತಿಗಳು ರಾಷ್ಟ್ರದ ಪ್ರಥಮ ವ್ಯಕ್ತಿ ರಾಷ್ಟ್ರಶಿರೋಮಣಿ ಆಗಿದ್ದಾರೆ. ಅತ್ಯುನ್ನತ ಅಧಿಕಾರವುಳ್ಳ ವ್ಯಕ್ತಿ ಅವರು. ನಮ್ಮ ರಾಷ್ಟ್ರದ ಅಧಿಕಾರದ ಶೃಂಗವೆಂದರೆ ರಾಷ್ಟ್ರಾಧ್ಯಕ್ಷರ ಅಧಿಕಾರ. ಇವರಿಗಿರುವ ಕೆಲವೊಂದು ಅಧಿಕಾರ ಮತ್ತೆ ಯಾರಿಗೂ ಇಲ್ಲ. ಉದಾಹರಣೆಗೆ ಮರಣದಂಡನೆ ಅಥವಾ ಆಜೀವ ಶಿಕ್ಷೆಗೆ ಒಳಗಾದವರಿಗೆ ಅವರು ಬಿನ್ನಹ ಮಾಡಿಕೊಂಡಾಗ ಅವರ ಪ್ರಾರ್ಥನೆ ನ್ಯಾಯಬದ್ಧವಾಗಿ ಕಂಡುಬಂದಲ್ಲಿ ಅವರಿಗೆ ಕ್ಷಮಾದಾನ ಮಾಡುವ, ಮರಣದಂಡನೆ ತಪ್ಪಿಸಲು ಇಲ್ಲವೇ ಶಿಕ್ಷೆಯನ್ನು ಕಡಿಮೆಮಾಡುವ ಅಧಿಕಾರ ಅವರಿಗೆ ಮಾತ್ರ ಇದೆ. ಸಂವಿಧಾನ ಮತ್ತು ಸರ್ಕಾರ ಎಂಬ ಗ್ರಂಥದಲ್ಲಿ ಈ ಬಗ್ಗೆ ಹೀಗೆ ಹೇಳಿದೆ ; ರಾಷ್ಟ್ರಪತಿಗಳು "ಅಪರಾಧಿಗಳ ಶಿಕ್ಷೆಯನ್ನು (ದೇಹಾಂತ ಶಿಕ್ಷೆ ಸಹಿತ) ತಡೆಯುವ, ಮುಂದೂಡುವ, ಬದಲಿಸುವ ಇಲ್ಲವೇ ಸಂಪೂರ್ಣವಾಗಿ ದಯೆ ತೋರಿಸುವ ಅಧಿಕಾರ ಹೊಂದಿದ್ದಾರೆ."

ಸೂಕ್ತಿಮಂಜರಿಯಲ್ಲಿ ಹೇಳಿದಂತೆ, ಕ್ಷಮಾವಂತ ಮಹಾತ್ಮನೇ ಹೌದು.

ಧರೆಗುದ್ದಲಿಯಿಂ ಮರ್ದಿಪ
ನರರಂ ದಯೆಯಿಂದಮೆತ್ತಿ ಸಲುಪುವ ತೆರದೊಳ್
ಪರಿಭವಿಸಿ ತನ್ನ ನೋಯಿಪ
ವಿರೋಧಿ ಜನಮಂ ಮಹಾತ್ಮನೊಲವಿಂ ಕ್ಷಮಿಪಂ

ಹೂವನ್ನು ನೋಯಿಸದೆ ದುಂಬಿ ಮಕರಂದ ಹೀರುವಂತೆ ಪುಟ್ಟಮಗು ಮುದ್ದಾದ ಕೋಮಲ ಕರಗಳಿಂದ ಅಮ್ಮನನ್ನು ಹೊಡೆದು ಆನಂದಗೊಳಿಸುವಂತೆ 'ರೈತನು ಗುದ್ದಲಿಯಿಂದ ಭೂಮಿಯ ಮಣ್ಣಿನ ಹೆಂಟೆಗಳ ಕಾಠಿಣ್ಯ ಹೋಗಲಾಡಿಸಿ ಮೃದುಗೊಳಿಸಿ, ಸರಳಗೊಳಿಸಿ

ಫಲವತ್ತಾಗಿರುವಂತೆ ದಯಾ ಧರ್ಮದಿಂದ ವಿರೋಧಿಗಳನ್ನು ವಿನೋದ ಭಾವದಿಂದ ನಗುನಗುತ್ತ ಕ್ಷಮಿಸುವುದು ಕ್ಷಮಾವಂತನ ಲಕ್ಷಣ. ಕ್ಷಮಾದಾನದಲ್ಲಿ ಸಂತೋಷ, ಆನಂದ ತೃಪ್ತಿ ಅನುಭವಿಸುವವನೇ, ಕ್ಷಮಾದಾನ ಕರ್ತವ್ಯವೆಂದು ತಿಳಿದವನೇ ಮಹಾತ್ಮ. ಲೋಕದ ಜನರ ಬಾಳು ಸುಗಮವಾಗುವುದು ಇಂಥ ಮಹಾತ್ಮರಿಂದಲೇ ಲೋಕದಲ್ಲಿ ಎಲ್ಲ ಮಹಾಪುರುಷರೂ ಕ್ಷಮಾಪುರುಷರಾಗಿರುತ್ತಾರೆ. ಪರಮಾತ್ಮನಂತೂ ಕ್ಷಮಾಮೂರ್ತಿಯೇ ಆಗಿರುವನು. ಅದ್ದರಿಂದಲೇ ನಮಃ ಶಾಂತಾಯ ತೇಜಸೇ ಎನ್ನುತ್ತೇವೆ. ಎಲ್ಲ ಧರ್ಮಗಳಲ್ಲೂ ಪರಮಾತ್ಮನನ್ನು ನಿರ್ಮಲರೂಪಿ, ಕ್ಷಮಾರೂಪಿ, ದಯಾಳು, ಕರುಣಾಳು ಇತ್ಯಾದಿಯಾಗಿ ವರ್ಣಿಸಿವೆ.

ಉದಾಹರಣೆಗೆ ಹೇಳುವುದಾದರೆ, ಪಾರ್ಶ್ವನಾಥನನ್ನು ಕ್ಷಮಾ ಗುಣಕ್ಕೆ ಆದರ್ಶಪುರುಷರೆಂದು ಗುಣಭದ್ರಾಚಾರ್ಯರು ಉತ್ತರಪುರಾಣ ದಲ್ಲಿ ಹೇಳಿದ್ದಾರೆ. ಅವರು ಪಾರ್ಶ್ವನಾಥಸ್ವಾಮಿಗೆ ನೀಡಿದ ಪ್ರಶಸ್ತಿ ಹೀಗಿದೆ :

"ಆದಿಮಧ್ಯಾಂತಗಂಭೀರಾಂ । ಸಂತೋಂಭೋ ನಿಧಿ ಸನ್ನಿಭಾಃ॥
ಉದಾಹರಣವೇ ತೇಷಾಂ। ಪಾರ್ಶ್ವೋ ಗಣ್ಯಃ ಕ್ಷಮವತಾಂ"॥

"ಜೀವನದುದ್ದಕೂ ಸತ್ಪುರುಷರು ಸಾಗರದ ಹಾಗೆ ಆದ್ಯಂತ ಗಂಭೀರರಾಗಿರುತ್ತಾರ. ಇಂಥವರ ಪೈಕಿ 22ನೆಯ ತೀರ್ಥಂಕರರಾದ ಪಾರ್ಶ್ವನಾಥಸ್ವಾಮಿ ಅತ್ಯಂತ ಗಣ್ಯ ಕ್ಷಮಾವಂತರೆನಿಸಿ ಆದರ್ಶರಾಗಿ ದ್ದಾರೆ.)

ವರ್ಧಮಾನ ಮಹಾವೀರರು ತಪಸ್ಸಿನ ಕಾಲದಲ್ಲಿ ಅವರು ಸಹಿಸಿದ ಕೋಟಲೆಗಳನ್ನೆಲ್ಲಾ ಗಮನಿಸಿದರೆ ಅವರೂ ಆದರ್ಶ ಕ್ಷಮಾ

ಮೂರ್ತಿಗಳೆಂದು ತಿಳಿಯುತ್ತದೆ. ಎಲ್ಲಾ ತೀರ್ಥಂಕರರನ್ನು ಕ್ಷಮಾ ಗುಣಕ್ಕೆ ಮಾದರಿಯಾಗಿದ್ದಾರೆಂದು ತಿಳಿಯಬಹುದು.

ಭಗವಂತನನ್ನು ಕ್ಷಮಾಮೂರ್ತಿ ಎಂದು ಎಲ್ಲ ಧರ್ಮಗಳಲ್ಲೂ ವರ್ಣಿಸಿದ್ದಾರೆ. ವೈದಿಕ ಧರ್ಮದಲ್ಲೂ ಈ ಬಗ್ಗೆ ಅನೇಕ ಉಲ್ಲೇಖ ಗಳನ್ನು ಕಾಣಬಹುದು. ದಾಸಸಾಹಿತ್ಯದ ಜಗನ್ನಾಥದಾಸರು ಹರಿ ಕಥಾಮೃತಸಾರದಲ್ಲಿ (ಸಂಧಿ 2 ಪ 19) ಕರುಣಾಸಮುದ್ರ ಹರಿ ಎಂದಿದ್ದಾರೆ : ಕ್ಷಮೆಯಗುಣದ ಹಿನ್ನೆಲೆಯಲ್ಲಿ ವರ್ಣಿಸಿದ್ದಾರೆ.

"ಪಾಪಿ ಕರ್ಮದ ಸಹಿಸುವರೆ ಲ
ಕ್ಷ್ಮೀಪತಿಗೆ ಸಮರಾದ ದಿವಿಜರ
ನೀ ಪಯೋಜಭವಾಂಡದೊಳಗಾವಲ್ಲಿ ನೆಲೆಗಾಣೆ
ಗೋಪ ಗುರುವಿನ ಮಡದಿ, ಭೃಗು, ನಗ
ಚಾಪ ಮೊದಲಾದವರು ಮಾಡ್ದ ಮ
ಹಾಪರಾಧಗಳನೆಣಿಸಿದನೆ ಕರುಣಾಸಮುದ್ರ ಹರಿ"

ದುಷ್ಟರಿಗೆ ಬುದ್ಧಿ ಕಲಿಸಲು ಭಕ್ತರನ್ನು ಕಷ್ಟಗಳಿಂದ ಪಾರು ಮಾಡಲು ಭಗವಂತ ಶ್ರೀಕೃಷ್ಣನು ವೈದಿಕ ಸಾಹಿತ್ಯದಲ್ಲಿ, ಪುರಾಣ ಗಳಲ್ಲಿ ಕರುಣಾ ಕೃಪಾಳುವಾಗಿದ್ದಾನೆ. ಭಕ್ತೋದ್ಧಾರಿ, ಲೋಕೋ ದ್ಧಾರಿ ಆಗಿದ್ದಾನೆ. ಶ್ರೀ ಕೃಷ್ಣ ಚರಿತೆಯೆಲ್ಲಾ ದಯಾಗುಣಕ್ಕೆ ಸಾಕ್ಷಿ ಆಗಿದೆ. ಶಿಶುಪಾಲವಧೆ ಪ್ರಸಂಗದಲ್ಲಿ ಶ್ರೀ ಕೃಷ್ಣನು ಅದೆಷ್ಟು ಸಲ ಕ್ಷಮಿಸಿದನು ! ಪ್ರತಿಯೊಂದು ಧರ್ಮದಲ್ಲೂ ಭಗವಂತನು ಯಾರೇ ಆಗಿರಲಿ, ಯಾವುದೇ ಸ್ವರೂಪದಲ್ಲಿ ಕಂಡುಬರಲಿ ಧರ್ಮಗಳಲ್ಲಿದೇವರು ಗಳಲ್ಲಿ ಕಂಡುಬರುವ ಏಕೈಕ ಮುಖ್ಯಲಕ್ಷಣವೆಂದರೆ ಆತ ದಯಾ ಮಯ – ಕ್ಷಮಾಮೂರ್ತಿ.

ಗಾಂಧೀಜಿ ಸತ್ಯ – ಅಹಿಂಸಾ ವ್ರತಧಾರಿಗಳು. ಅವರ ನಗೆ ಅವರ ಕ್ಷಮೆ, ಸಂಕಲ್ಪಶಕ್ತಿ ಲೋಕೋತ್ತರವಾದುದು. ಗುಂಡಿಟ್ಟು ಕೊಲ್ಲುವಾಗಲೂ ಕೈಮುಗಿದು ಹಾಯ್‌ರಾಮ್ ಎಂದರವರು. ಅವರ ಕ್ಷಮಾಗುಣ ಐತಿಹಾಸಿಕ ಸತ್ಯವಾಗಿದೆ. ಅವರಲ್ಲಿದ್ದ ಕ್ಷಮಾವಂತನ ಲಕ್ಷಣಗಳನ್ನು ದಿವಂಗತ ಎಂ. ಗೋವಿಂದಪೈ ಅವರು ಸಾತ್ವಿಕ ಕವನದಲ್ಲಿ ಬಹು ಸಮರ್ಥವಾಗಿ ಚಿತ್ರಿಸಿದ್ದಾರೆ. "ಕೋಪವೆನಗಿಲ್ಲ ತಾಪವೆನಗಿಲ್ಲ । ಭ್ರಾಂತಿಯಿಲ್ಲ, ಆಸೆಯೆನಗಿಲ್ಲ ಮೋಸ ಎನಿಸಿಲ್ಲ ; ಶಾಂತ ನಾನು । ಜಗವ ಅಗಲದಲಿ ; ಹಗೆಯೆಂಬುದೊಂದು ಇಲ್ಲ ಎನಗೆ ।" ಎಂಬ ಮಾತು ಕ್ಷಮಾಗುಣಕ್ಕೆ ಗಾಂಧಿ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಇತಿಹಾಸದಲ್ಲಿ ಕ್ಷಮಾಮೂರ್ತಿಗಳು ನಿದರ್ಶನ ಸಾಕಷ್ಟು ಕಂಡು ಬರುವಂತೆ ಪುರಾಣ – ಕಾವ್ಯಗಳಲ್ಲೂ ಸಾಕೆಷ್ಟು ಜನರು ಕ್ಷಮಾಗುಣ ದಿಂದ ಮೆರೆದಿರುವುದನ್ನು ಕಾಣಬಹುದು. ಉದಾಹರಣೆಗೆ, ದ್ರುಪದನು ದ್ರೋಣನನ್ನು ಅವಮಾನಿಸಿದ್ದಕ್ಕೆ ಅರ್ಜುನನು ಅವನನ್ನು ಸೋಲಿಸಿ ತಂದು ಗುರು ದ್ರೋಣಾಚಾರ್ಯನ ಪಾದದಬಳಿ ಕೆಡವಿದಾಗ ದ್ರೋಣನು ಅವನನ್ನು ಕ್ಷಮಿಸಿ ಬುದ್ಧಿ ಹೇಳಿದನು, ಗುರುಕುಲದಲ್ಲಿ ತಾವಿಬ್ಬರೂ ಮಧುರ ಸ್ನೇಹದಿಂದ ಇದ್ದ ಹಾಗೆ ಇರಲು ಹೇಳಿ ಕಳುಹಿಸಿದನು.

ಕ್ಷಮಾಮೂರ್ತಿ ಎಂದೊಡನೆ ಧರ್ಮರಾಜನ ನೆನಪಾಗುತ್ತದೆ. ವ್ಯಾಸಭಾರತದಲ್ಲಿ ಉದ್ದಕ್ಕೂ ಕ್ಷಮಾಮೂರ್ತಿಯಾಗಿ ಧರ್ಮ ರಾಜನೂ, ಶಾಂತಿಮೂರ್ತಿಯಾಗಿ ಕೃಷ್ಣನೂ ವಿರಾಜಿಸಿದ್ದಾರೆ. ಧರ್ಮ ರಾಜನಂತೂ, ವನವಾಸ, ದ್ಯೂತವಂಚನೆ, ಮಾನಾಪಹರಣ ಯತ್ನ, ಲಾಕ್ಷಾಗೃಹದಹನ ಮೊದಲಾದ ಘೋರ ಪ್ರಸಂಗಗಳು ಕಣ್ಣೆದುರೇ ಕಂಡೂ ಕಿಂಚಿತ್ತೂ ಕೋಪಾವಿಷ್ಟನಾಗಲಿಲ್ಲ ; ಅಷ್ಟೇ ಅಲ್ಲ, ಆವೇಶ

ಮೂರ್ತಿಯಾದ ಭೀಮನ ಕೋಪಕ್ಕೆ ಅಂಕುಶಪ್ರಾಯನಾಗಿದ್ದನು. ಭೀಮನ ಕೋಪದಿಂದ ಆಗುವ ಅನಾಹುತವನ್ನು ತಡೆಯಲು ಧರ್ಮಜ ನೊಬ್ಬನೇ ಶಕ್ತನಾಗಿದ್ದನು.

ವಶಿಷ್ಠರು ಕ್ಷಮೆಗೆ ಹೆಸರಾದವರು. ವಿಶ್ವಾಮಿತ್ರನು ಹರಿಶ್ಚಂದ್ರನ ಬಗ್ಗೆ ಎಷ್ಟೇ ಕ್ರೋಧಗೊಂಡರೂ ವಶಿಷ್ಠರು ಮುನಿಯಲಿಲ್ಲ. ಅಷ್ಟೇ ಅಲ್ಲ, ಹಿಂದೊಮ್ಮೆ ವಿಶ್ವಾಮಿತ್ರ ವಶಿಷ್ಠರ ಆಶ್ರಮಕ್ಕೆ ದಾಳಿ ಇಟ್ಟು ಅವನ ಕಾಮಧೇನುವನ್ನು ಸೆಳೆದೊಯ್ದು ದಾಂಧಲೆ ಮಾಡಿದಾಗ ಸಹ ಕಾಮಧೇನುವಿಗೆ ಆತ್ಮರಕ್ಷಣೆ ಮಾಡಿಕೊಳ್ಳಲು ಹೇಳಿ ಶಾಂತಚಿತ್ತರಾಗಿ ದ್ದರೇ ವಿನಾ ಕ್ರೋಧದಿಂದ ಸೇಡು ತೀರಿಸಲು ಬಯಸಲಿಲ್ಲ. ಆಗ ವಶಿಷ್ಠರು ಬ್ರಹ್ಮರ್ಷಿಗಳಾಗಿದ್ದರು. ವಿಶ್ವಾಮಿತ್ರ ಕ್ಷತ್ರಿಯನಾಗಿದ್ದನು. ಅವರ ತಪೋಬಲ ಇವನ ಬಾಹುಬಲಕ್ಕಿಂತ ಮಿಗಿಲಾಗಿತ್ತು. ಮನಸ್ಸು ಮಾಡಿದ್ದರೆ ವಿಶ್ವಾಮಿತ್ರನಿಗೆ ಬುದ್ಧಿ ಕಲಿಸಬಹುದಾಗಿತ್ತು. ಆದರೂ ಹಾಗೆ ಮಾಡಲಿಲ್ಲ. ವಿಶ್ವಾಮಿತ್ರನೇ ನಾಚಿ ಹಿಂದಿರುಗಿದನು.

ವಚನ ಸಾಹಿತ್ಯದಲ್ಲಿ ಕಂಡು ಬರುವ ಅನೇಕ ಜನ ಕ್ಷಮಾ ವಂತರ, ದಯಾವಂತರ, ಪಶ್ಚಾತ್ತಾಪದಿಂದ ಪರಿಶುದ್ಧರಾದ ಶರಣ ಪೈಕಿ ಪ್ರಸಿದ್ಧರಾದವರು ಬಸವಣ್ಣನವರು. ಅವರ ವಚನ ಗಳಲ್ಲಿ ಕ್ಷಮಾಗುಣ ಸಾಕ್ಷಿಗಳನ್ನು ಕಾಣಬಹುದು.

ಬಸವಣ್ಣನವರಿಗೆ ಈ ದೇಹ "ಈ ಲೋಕ ಎಂಥದ್ದು ಎಂದು ತಿಳಿದಿದ್ದಿತು. ಕಾಮದ ಒಡಲು ; ಕ್ರೋಧದ ಗೊತ್ತು ; ಲೋಭದ ಇಕ್ಕೆ ; ಮೋಹದ ಮಂದಿರ ; ಮದದ ಆವರಣ ; ಮತ್ಸರದ ಹೊದಿಕೆ" ಆಗಿದೆಯೆಂದು ತಿಳಿದಿದ್ದರು. ಇದರ ಫಲವಾಗಿ ಪ್ರತ್ಯಕ್ಷವಾಗಿಯೋ

ಪರೋಕ್ಷವಾಗಿಯೋ ತಪ್ಪುಗಳನ್ನು ಮಾಡಿದ್ದೇನೆಂಬ ಭಾವ ಅವರಲ್ಲಿ ಬಂದು ಅವರು ಕೂಡಲ ಸಂಗಮನಲ್ಲಿ ಹೀಗೆ ನಿವೇದಿಸಿಕೊಳ್ಳುತ್ತಿದ್ದರು. "ಆನುಮಾಡಿದ ತಪ್ಪನೆಣಿಸಿಹೆನೆಂದರೆ ಗಣನೆಯಿಲ್ಲ, ನಡೆದು ತಪ್ಪುವೆ; ನುಡಿ ತಪ್ಪುವೆ; ನೀಡಿ ತಪ್ಪುವೆ; ಕೂಡಿ ತಪ್ಪುವೆ; ಅರಿದು ತಪ್ಪುವೆ; ಮರೆದು ತಪ್ಪುವೆ; ಎನ್ನ ತಪ್ಪನೊಪ್ಪ ಮಾಡಿಕೊಳ್ಳುವುದಲ್ಲದೆ ಚಿತ್ತಕ್ಕೆ ತರಲಾಗದು." ಇದೇ ರೀತಿ "ತಪ್ಪೆನ್ನದು ಕ್ಷಮೆ ನಿನ್ನದು" ಎಂದು ಇನ್ನೊಂದೆಡೆ ಹೇಳಿದ್ದಾರೆ. ಅವರ ಬದುಕಿನ ಘಟನೆಗಳಲ್ಲಂತೂ ಅವರು ಕ್ಷಮಿಸಿದ ಪ್ರಸಂಗದ ಕಥೆಗಳು ಹತ್ತಾರು ದೊರೆಯುತ್ತವೆ. ಲೋಕದಲ್ಲಿ ಕೆರೆ, ಭಾವಿ, ನದಿ ಯಾವುದರಲ್ಲಿ ದೊರೆತರೂ ಹೇಗೆ ಎಲ್ಲವೂ ಜಲವೋ, ಹಾಗೆ ಮಹಾತ್ಮರು ಯಾರೇ ಆದರೂ ಅವರು ಕ್ಷಮಾವಂತರಾಗಿರುತ್ತಾರೆ.

ಕ್ಷಮೆ ಮತ್ತು ಸ್ತ್ರೀ

ಕ್ಷಮೆ ಎಂದೊಡನೆ ಸ್ತ್ರೀಯರ ಸಹನೆ, ತಾಳ್ಮೆಗಳು ನೆನಪಾಗುತ್ತವೆ. ಕ್ಷಮೆಗೆ ಅತ್ಯುತ್ತಮ ನಿದರ್ಶನವಾಗಿರುವ ನಾರಿ ಧರಣೀ. ಆಕೆಯ ಸಹನೆ, ತಾಳ್ಮೆ ಇನ್ನಾರಿಗೂ ಇಲ್ಲ. ಪಾಪಿಗಳಿಗೂ ಪುಣ್ಯವಂತರಿಗೂ ಸಮಾನ ಆಶ್ರಯ ನೀಡಿದ್ದಾಳೆ; ಎಲ್ಲರ ಸುಖ ದುಃಖಗಳನ್ನು ಸಮಾನವಾಗಿ ಭರಿಸಿದ್ದಾಳೆ. ಭೂಮಿಯ ಮೇಲೆ ಹೂವು ಉದುರಲಿ, ಸಿಡಿಲು ಹೊಡೆಯಲಿ, ಅಭಿಷೇಕದ ಜಲ ಹರಿಯಲಿ, ಚರಂಡಿಯ ನೀರೇ ಪ್ರವಹಿಸಲಿ ಎಲ್ಲವನ್ನೂ ತಾಳಿಕೊಂಡಿದ್ದಾಳೆ. ಕ್ಷಮಾಧರಿತ್ರೀ ಎಂಬ ಸೂಕ್ತಿಯಾಗಿದ್ದಾಳೆ. ಆದ್ದರಿಂದಲೇ ಆದರ್ಶ ಕ್ಷಮಾಮೂರ್ತಿಯನ್ನು ಕ್ಷಮಯಾ ಧರಿತ್ರೀ ಎಂದು ಹೋಲಿಸುತ್ತಾರೆ. ಕುಲಸತಿಯ ಷಡ್ಗುಣಗಳಲ್ಲಿ ಕ್ಷಮೆ ಸಹ ಮುಖ್ಯ ಗುಣವಾಗಿದೆಯೆಂದು ಈ ಸುಭಾಷಿತ ಸಾರುತ್ತದೆ.

ಕಾರ್ಯೇಷು ಮಂತ್ರೀ ಕರಣೇಷು ದಾಸೀ
ಭೋಜ್ಯೇಷು ಮಾತಾ ಶಯನೇಷು ರಂಭಾ
ಧರ್ಮಾನುಕೂಲಾ ಕ್ಷಮಯಾ ಧರಿತ್ರೀ
ಷಡ್ಗುಣ್ಯಭಾರ್ಯಾ ಕುಲಮುದ್ಧರಂತೀ

ಗಾಂಧೀಜಿ ಹೆಣ್ಣನ್ನು 'ತ್ಯಾಗ, ಅಹಿಂಸೆ, ಕ್ಷಮೆಗಳ ಪುತ್ಥಳಿ' ಎಂದಿದ್ದಾರೆ. ಶರಚ್ಚಂದ್ರರು "ನಾಚಿಕೆಯ ಬೈಗಳು, ಅಪಮಾನ ಅತ್ಯಾಚಾರ, ಉಪದ್ರವ ಇವುಗಳನ್ನು ಸ್ತ್ರೀಯೇ ಸಹಿಸಬಲ್ಲಳು. ಆಹಾ ! ತಾಳ್ಮೆಯ ಪ್ರತಿಮೂರ್ತಿಯೇ ಆಗಿದ್ದಾಳೆ" ಎಂದು ಉದ್ಗರಿಸಿದ್ದಾರೆ.

ಕಾಳಿದಾಸನು ಸ್ತ್ರೀಯಲ್ಲಿ ಕ್ಷಮಾಗುಣದ ಎಲ್ಲ ಲಕ್ಷಣಗಳನ್ನು ಕಂಡಿದ್ದಾನೆ. ಆದ್ದರಿಂದಲೇ ಕಣ್ವರ ಬಾಯಲ್ಲಿ ಶಕುಂತಲೆಗೆ ಹೀಗೆ ಹೇಳಿಸಿದ್ದಾನೆ : ಈ ಮಾತುಗಳು ಕ್ಷಮಾಗುಣ ಕಲಿಯುವ ನಾರಿಯರಿಗೆಲ್ಲಾ ಸ್ವರ್ಣ ಸೂತ್ರಗಳಾಗಿವೆ.

ಶುಶ್ರೂಷಸ್ವ ಗುರೂನ್ ಕುರು ಪ್ರಿಯಸಖೀವೃತ್ತಿಂ
ಸಪತ್ನೀಜನೇ । ಭರ್ತುರ್ವಿಪ್ರಕೃತಾಪಿ ರೋಷಣತಯಾ
ಮಾಸ್ಮ ಪ್ರತೀಪಂ ಗಮಃ । ಭೂಯಿಷ್ಠಂ ಭವದಕ್ಷಿಣಾ
ಪರಿಜನೇ ಭಾಗ್ಯೇಷ್ವನುತ್ಸೇಕಿನೀ । ಯಾಂತ್ಯೇವಂ
ಗೃಹಿಣೀಪದಂ ಯುವತಯೋ ವಾಮಾಃ ಕುಲಸ್ಯಾಧಯಃ ॥

[ಗುರು ಹಿರಿಯರ ಸೇವೆಯನ್ನು ಭಕ್ತಿಪೂರ್ವಕ ಮಾಡು ; ನಿನ್ನ ಸವತಿಯರನ್ನು ಪ್ರಿಯಸಖಿಯರೆಂದು ಭಾವಿಸು ; ನಿನ್ನ ಪತಿ ಕೋಪದಿಂದ ನಿನ್ನನ್ನು ಧಿಕ್ಕರಿಸಿದರೂ ನೀನು ಮಾತ್ರ ವಿರೋಧವಾಗಿ ವರ್ತಿಸಬೇಡ; ನಿನ್ನ ಪರಿಜನರಲ್ಲಿ ವಿಶೇಷವಾಗಿ ದಾಕ್ಷಿಣ್ಯವುಳ್ಳವಳಾಗು ; ಭಾಗ್ಯ ಬಂದಾಗ ಗರ್ವಿಸಬೇಡ ; ಈ ರೀತಿ ವರ್ತಿಸುವ ಯುವತಿ

ಯರು ಸದ್ಗೃಹಿಣಿಯರಾಗುವರು. ಇದಕ್ಕೆ ವಿರುದ್ಧವಾಗಿ ವರ್ತಿಸುವವರು ತಮ್ಮ ಕುಲಕ್ಕೆ ಕಳಂಕಪ್ರಾಯರಾಗುವರು.]

ವೈದಿಕ ಪುರಾಣೇತಿಹಾಸಗಳಲ್ಲಿ ಕಂಡುಬರುವ ಸ್ತ್ರೀವ್ಯಕ್ತಿಗಳನ್ನು ಕಂಡರೆ ಅವರೆಲ್ಲಾ ಲೋಕೋತ್ತರ ವ್ಯಕ್ತಿಗಳ ಧರ್ಮಪತ್ನಿಯರಾಗಿದ್ದರೂ ತಮ್ಮ ಬಾಳಿನುದ್ದಕ್ಕೂ ಕಣ್ಣೀರು ಕಷ್ಟಗಳಲ್ಲಿಯೇ ಮುಳುಗಿ ತೇಲಿ ಸಹನಾಮೂರ್ತಿಗಳಾಗಿಯೇ ಕೊನೆಯವರೆಗೆ ಬಾಳನ್ನು ಸವೆಸಿದ್ದಾರೆ. ಹರಿಶ್ಚಂದ್ರನ ಪತ್ನಿ ಚಂದ್ರಮತಿ, ನಳಚಕ್ರವರ್ತಿಯ ರಾಣಿ ದಮಯಂತಿ, ಪಂಚಪಾಂಡವರ ವಲ್ಲಭೆ ದ್ರೌಪದಿ, ಶ್ರೀ ರಾಮಚಂದ್ರನ ಸತಿ ಸೀತೆ, ಮೊದಲಾದವರೆಲ್ಲಾ ತಾಳ್ಮೆಯ ಪ್ರತೀಕವಾಗಿ ಕಷ್ಟವನ್ನು ಅನುಭವಿಸಿದರು. ಅವರ ಕಷ್ಟಗಳನ್ನೆಲ್ಲಾ ಕಂಡಾಗ ಬೇಂದ್ರೆ ಮಾತು ನೆನಪಾಗುತ್ತದೆ.

"ರಾಮನ ಸೀತಾ ವಿಲಾಪದಿಂದ್ಯ ತುಂಬಿದೆ ರಾಮಾಯಣಾ,
ಉಳಿದ ಬಂಧುಗಳ ಹೆಂಡಿರ ಗತಿಯೇನೆಂದು ಕೇಳಿತೇ ಜನಾ ?
ಸಣ್ಣವರತ್ತರೆ ಎಣಿಕೆಗೆ ಬಾರದು ಅಯ್ಯೋ ನಾರಾಯಣಾ"

ಸಣ್ಣವರಿರಲಿ,ದೊಡ್ಡವರಿರಲಿ, ಪ್ರಸಿದ್ಧರಿರಲಿ, ಅಪ್ರಸಿದ್ಧರಿರಲಿ, ಹೆಣ್ಣಿನ ಬಾಳೇ ಕಣ್ಣೀರಾಗಿದ್ದರೂ ಅವರು ಕ್ಷಮಾಮೂರ್ತಿಗಳಾಗಿದ್ದು ಪುರುಷರಿಗಾಗಿ ಸುಖ ತ್ಯಾಗಮಾಡಿದ ಅವರನ್ನು ಮನ್ನಿಸಿದ ಉದಾರವಂತರಾಗಿದ್ದಾರೆ ಎಂಬುದು ವ್ಯಕ್ತವಾಗುತ್ತದೆ.

ಕ್ಷಮಾಗುಣದ ಸತ್ಪರಿಣಾಮಗಳು.

ಯುದ್ಧಕ್ಕೆ ದ್ವೇಷವೇ ಮೂಲಕಾರಣ. ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರದಮೇಲೆ ಸೇಡು ತೀರಿಸಲು ಯತ್ನಿಸಿದಾಗ ಸಮರ ವುಂಟಾಗುತ್ತದೆ. ಸಮರಗಳಿಂದ ಅರ್ಥಹಾನಿ, ಪ್ರಾಣಹಾನಿ, ಮಾನ

ಹಾನಿ, ಜನಾಂಗಹಾನಿ ಇತ್ಯಾದಿ ಉಂಟಾಗಿ ದೇಶ ಸಂಕಷ್ಟಗಳಿಗೆ ಬಲಿಯಾಗುತ್ತದೆ. ಯುದ್ಧಕ್ಕೆ ಸಿಲುಕಿದ ದೇಶಗಳು ಎಷ್ಟೇ ಸಶಕ್ತವಾಗಿದ್ದರೂ, ಸಂಪದ್ಯುಕ್ತವಾಗಿದ್ದರೂ ಚೇತರಿಸಿಕೊಳ್ಳುವುದು ಬಲು ಕಠಿಣ. ಎರಡು ವಿಶ್ವ ಸಂಗ್ರಾಮಗಳು ನಮಗೆ ಪಾಠ ಕಲಿಸಿವೆ. ಈಚೆಗೆ ಏಷ್ಯಾ ಖಂಡದಲ್ಲಿ ಹಾಗೂ ಇತರ ಭಾಗಗಳಲ್ಲಿ ನಡೆದ ಯುದ್ಧಗಳನ್ನು ಗಮನಿಸಿದಾಗ, ಕ್ರೋಧದ ಫಲ ಅವು ಎನ್ನಿಸುತ್ತವೆ. ಕ್ಷಮಾಗುಣ ರಾಷ್ಟ್ರೀಯ ಧೋರಣೆಯಲ್ಲಿ ಅಳವಟ್ಟರೆ ವಿಶ್ವಶಾಂತಿ ಸಾಧ್ಯ. ಕ್ಷಮೆಯ ಮಹೋಪಯೋಗಕ್ಕೆ ಇದೊಂದು ನಿದರ್ಶನ ಸಾಕು. ಭಾರತ ತಟಸ್ಥನೀತಿಯಿಂದಲೂ ಶಾಂತಿ ಧೋರಣೆಯಿಂದಲೂ ವರ್ತಿಸುತ್ತಿರುವುದು ಶ್ಲಾಘನೀಯ. ರಾಷ್ಟ್ರಜೀವನದಲ್ಲಿ ಶಾಂತಿಸ್ಥಾಪನೆಗೆ ಕ್ಷಮೆ ಮೂಲಗುಣವಾಗಿದೆ. "ಜೈನನಾದವನಿಗೆ ಪ್ರಪಂಚದಲ್ಲಿವೈರಿಯೇ ಇರಬಾರದು" ಎಂಬ ಮಾತನ್ನು ಕ್ಷಮಾಗುಣವನ್ನೇ ಗಮನಿಸಿ ಹೇಳಲಾಗಿದೆ. ಪರಸ್ಪರ ಒಬ್ಬರನ್ನೊಬ್ಬರು ಕ್ಷಮಿಸಿದಾಗ ವೈರಿ ಅಥವಾ ವೈರ ಕಂಡು ಬರುವುದು ಹೇಗೆ ಸಾಧ್ಯ ?

ಧರ್ಮದ ಸ್ವರೂಪ ತಿಳಿದು ಆತ್ಮಜ್ಞಾನಿಯಾಗುವ ರತ್ನತ್ರಯವನ್ನೊಳಗೊಂಡ ಕ್ಷಮೆಗೆ ಉತ್ತಮ ಕ್ಷಮೆಯೆನ್ನುವರು. ಇಂಥ ಕ್ಷಮೆಯು "ಜೀವಗಳನ್ನು ಸಂಸಾರ ಸಮುದ್ರದೊಳಗಿನಿಂದ ಆಚೆಯ ತೀರಕ್ಕೆ ಒಯ್ಯಲು ಸಮರ್ಥವಾಗುತ್ತದೆ. ನರಕ ಹಾಗೂ ತಿರ್ಯಂಚಗಳಿಗೆ ಹೋಗಬೇಕಾದುದಿಲ್ಲ." "ಉತ್ತಮ ಕ್ಷಮೆಯನ್ನು ತಾಳುವುದರಿಂದ ಮನಸ್ಸು ಅತಿಶಯಶುದ್ಧವಾಗುತ್ತದೆ. ಮನಸ್ಸಿನ ಸ್ಥಿರತೆಯೂ ಉಜ್ವಲತೆಯೂ ಉತ್ತಮ ಕ್ಷಮೆಯಿಂದ ಉಂಟಾಗುತ್ತದೆ."

ಕ್ರೋಧದ ಸ್ವರೂಪ

ಕ್ಷಮೆ ಮತ್ತು ಕ್ರೋಧ ಒಂದೇ ನಾಣ್ಯದ ಎರಡು ಮುಖಗಳು ಎನ್ನಬಹುದು. ಕ್ಷಮಾಗುಣ ಭಾವನಾತ್ಮಕ ಸ್ವರೂಪದ್ದಾದರೆ ಕ್ರೋಧ ನಿಷೇಧಾತ್ಮಕ ಗುಣವಾಗಿದೆ. ಒಂದು ಬೇಕಾದ ಸ್ವಭಾವ; ಇನ್ನೊಂದು ಬೇಡವಾದ ಸ್ವಭಾವ. ಇವೆರಡೂ ತದ್ವಿರುದ್ಧ ಗುಣಗಳು. ಕತ್ತಲೆ–ಬೆಳಕುಗಳಂತೆ. ಮನುಷ್ಯನಲ್ಲಿ ಕ್ಷಮೆ ಇದ್ದರೆ ಕ್ರೋಧವಿರದು. ಕ್ರೋಧ ಇದ್ದರೆ ಕ್ಷಮಾಗುಣ ಇರದು. ಕ್ರೋಧನಷ್ಟವೇ ಕ್ಷಮಾ. ಕ್ಷಮಾರಾಹಿತ್ಯವೇ ಕ್ರೋಧ. ಆತುರ, ದುಡುಕು, ಅಲ್ಪಮತಿ, ಅಹಂಕಾರ, ನಿರಾಸೆ, ಸ್ವಾರ್ಥ ಮೊದಲಾದ ದುರ್ಗುಣಗಳು ಕ್ರೋಧದ ಸಂತಾನವಾಗಿವೆ. ಅರಿಷಡ್ವರ್ಗಗಳಲ್ಲಿ ಒಂದಾದ ಕ್ರೋಧದ ಸ್ವರೂಪವನ್ನು ಅರಿತು ಅದನ್ನು ತ್ಯಾಜ್ಯಮಾಡದಿದ್ದರೆ ಯಾರೇ ಆಗಲಿ ಕ್ಷಮಾವಂತರಾಗರು. ಆದ್ದರಿಂದ ಕ್ಷಮಾ ವಿವೇಚನೆ ಪೂರ್ಣವಾಗಬೇಕಾದರೆ ಕ್ರೋಧದ ಸ್ವರೂಪ ಪರಿಚಯ ಅದನ್ನು ಗೆಲ್ಲುವ ಬಗೆ ಇವುಗಳನ್ನೂ ತಿಳಿದಿರಬೇಕು. ಆದಕಾರಣ ಕ್ಷಮಾಧರ್ಮದ ಪ್ರಸ್ತಾಪದಲ್ಲಿ ಕ್ರೋಧದ ವಿಚಾರವನ್ನು ಪ್ರಸ್ತಾಪಿಸಲಾಗಿದೆ. ಕ್ರೋಧವು ರೌದ್ರರಸದ ಸ್ಥಾಯಿಭಾವ. ಕಾಮ (ಇಷ್ಟಾರ್ಥವು) ಪೂರ್ತಿಯಾಗದಿದ್ದಲ್ಲಿ ರಜೋಗುಣವುಂಟಾಗಿ ಅದು ಕ್ರೋಧವಾಗುತ್ತದೆ. ಹೀಗೆ ಕಾಮದಿಂದ ಕ್ರೋಧ ಜನಿಸಿದರೆ ಕ್ರೋಧದಿಂದ ಸಂಮೋಹ ಜನಿಸುತ್ತದೆ. ಸಂಮೋಹದಿಂದಸ್ಮೃತಿವಿಭ್ರಮವಾಗುವುದು ಎಂದು ಗೀತೆ ಎನ್ನುತ್ತದೆ. ಮನು ಹೇಳುವಂತೆ ಅಷ್ಟವ್ಯಸನಗಳ ತಾಯಿ ಕ್ರೋಧ. ಕ್ರೋಧದ ಎಂಟು ಪರಿಣಾಮಗಳನ್ನು ಶಬ್ದಾರ್ಥ ಕೌಸ್ತುಭಕೋಶ ಹೀಗೆ ವಿವರಿಸಿದೆ :

"ಒಬ್ಬನಲ್ಲಿ ಇಲ್ಲದಿರುವ ದೋಷವನ್ನು ಹೇಳುವುದು ಪೈಶುನ್ಯವು; ಸಾಧು ಜನರನ್ನು ನಿಗ್ರಹಿಸುವುದು ಸಾಹಸವು ; ಮೋಸದಿಂದ ಕೊಲ್ಲು

ವುದು ದ್ರೋಹವು. ಇತರರ ಗುಣಗಳ ದೋಷವನ್ನು ಹೇಳುವುದು ಅಸೂಯೆ ; ಇತರರಿಗೆ ಕೊಡಬೇಕಾದುದನ್ನು ಕೊಡದಿರುವುದೂ ಇತರರ ವಸ್ತುಗಳನ್ನು ಅಪಹರಿಸುವುದೂ ಅರ್ಥದೂಷಣವು ; ಕಠಿಣ ವಾಗಿ ಮಾತನಾಡಿ ಕೋಪಿಸಿಕೊಳ್ಳುವುದು ವಾಕ್‌ಪಾರುಷ್ಯವು." ಹೊಡೆಯುವುದು ದಂಡ ಪಾರುಷ್ಯವು." ಇದನ್ನು ಕಂಡರೆ ಕೋಪದ ಪರಿಣಾಮ ಎಷ್ಟು ಘೋರ ಎಂದು ತಿಳಿಯುತ್ತದೆ.

ಕ್ರೋಧವು ನಾಲ್ಕು ಕಷಾಯಗಳ ಪೈಕಿ ಮೊದಲನೆಯದು ; ಮಾನ, ಮಾಯಾ, ಲೋಭ ಎಂಬ ಮೂರು ಕಷಾಯಗಳಿಗೆ ಆದಿ ಕಷಾಯ ಕ್ರೋಧವಾಗಿದೆ. ಮೋಹನೀಯ ಕರ್ಮವಾಗಿದೆ. ಬಸವಣ್ಣ ನವರು ಅಂತರಂಗ–ಬಹಿರಂಗ ಶುದ್ಧಿಗಾಗಿ ಹೇಳಿದ ಸಪ್ತ ತತ್ವಗಳಲ್ಲಿ ಮುನಿಯಬೇಡ ಎಂಬ ಮಾತು ಗಮನಾರ್ಹವಾದುದು. ಕರ್ಮಸಹಿತ ರೂಪವಾದ ಅಧರ್ಮವೇ ಕೋಪವಾಗಿದೆ ; 'ಕೋಪ ಮಹಾ ಪಾಪ. ಅದು ಸಮಾಜಕ್ಕೆ ಶಾಪ' ಎನ್ನುತ್ತಾರೆ ಮಹಾತ್ಮರು. ಕೋಪ ಆತ್ಮನ ರೂಪಲ್ಲ "ಆತ್ಮ ವೈಭಾವಿಕ ಶಕ್ತಿಯಿಂದ ಮತ್ತು ಪುದ್ಗಲ ಪರ ಪರಿಣತಿಯ ನಿಮಿತ್ತದಿಂದ ಆತ್ಮನು ಕೋಪವಿಷ್ಟನಾಗುತ್ತಾನೆ." ಎಂದಿದೆ ಅಮೋಲ ದಶಧರ್ಮ ಗ್ರಂಥದಲ್ಲಿ.

ಕ್ರೋಧ ತಿರುಗು ಬಾಣದಂತೆ ಮರಳಿ ಬರುತ್ತದೆ. "ತನ್ನ ಮನೆಯ ಕಿಚ್ಚು ತನ್ನನ್ನು ಸುಡುವುದಲ್ಲದೆ ಅನ್ಯರನು ಸುಡದು"

ಕ್ರೋಧದ ಉತ್ಪತ್ತಿಯನ್ನು ಗೀತೆ ವಿವರವಾಗಿ ತಿಳಿಸಿದೆ :

ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ
ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿ
ಜಾಯತೇ

[ಇಂದ್ರಿಯ ಸುಖಸ್ಮರಣೆಯಿಂದ ಆಸಕ್ತಿ ; ಆಸಕ್ತಿಯಿಂದ ಕಾಮ ; (ಅದು ನೆರವೇರದಾಗ) ಕ್ರೋಧ ಉಂಟಾಗುತ್ತದೆ.]

ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದರೆ, ಕ್ರೋಧವು ಅಧರ್ಮಗುಣ. ಅದರಿಂದ ಹಾನಿ ಅಪಾರ. ದುರ್ಗತಿಗೆ ದಾರಿ. ಯಾವುದೇ ದೃಷ್ಟಿಯಿಂದಲೂ ಇದು ಪೂಜ್ಯವಲ್ಲ ಅಷ್ಟೇ ಅಲ್ಲ, ಖಂಡಿತ ವಾಗಿ ತ್ಯಾಜ್ಯ ಮಾಡಬೇಕಾದ ಗುಣ ಎಂದು ತಿಳಿಯುತ್ತದೆ.

ಕ್ರೋಧ ಕಷಾಯದ ಬಗ್ಗೆ 'ಜ್ಞಾನಾರ್ಣವ' ಹೀಗೆ ಹೇಳುತ್ತದೆ:

"ತಪಃ ಶ್ರುತಯಮಾಧಾರಂ ವೃತ್ತ ವಿಜ್ಞಾನ ವರ್ಧಿತಮ್ ।
ಭಸ್ಮೀಭವತಿ ರೋಷೇಣ ಪುಂಸಾಂ ಧರ್ಮಾತ್ಮಕಂ ವಪುಃ ॥

[ರೋಷದಿಂದ ಸಮ್ಯಕ್‌ಜ್ಞಾನ ಚಾರಿತ್ರಗಳಿಂದ ವರ್ಧಿತವಾದ ತಪ, ಸ್ವಾಧ್ಯಾಯ ಸಂಯಮಗಳಿಗೆ ಆಧಾರವಾದ ಧರ್ಮಸ್ವರೂಪ ವಾದ ಪುರುಷರ ದೇಹವು ಭಸ್ಮವಾಗುತ್ತದೆ.]

ಕೋಪದಿಂದ ದೇಹನಾಶ, ಪಾಪಲಾಭ, ಪರಾಪಕಾರ, ಇವು ಗಳನ್ನು ಮನುಷ್ಯ ಹೊಂದುತ್ತಾನೆ. ಆದ್ದರಿಂದ ಕುಮಾರವ್ಯಾಸನು ಧರ್ಮವ್ಯಾಧನ ಕಥೆಯ ಸಂದರ್ಭದಲ್ಲಿ ಹೀಗೆ ಹೇಳಿದ್ದಾನೆ.

ಧನಮದವ ಸತ್ಕುಲಮದವ ಯೌ
ವನಮದವ ವಿದ್ಯಾಮದವ ಪರಿ
ಜನಮದವ ವೈಭವಮದವಸಾಚಾರಪದಮದವ
ಮನಸದಿಂ ಶ್ರವಣದಿ ನಿಧಿ ಧ್ಯಾ
ಸನದಿನಿವಗಳನೊತ್ತಿ ವಿದ್ಯಾ
ವಿನಯ ಸೌಶೀಲ್ಯದಲ್ಲಿ ನುಡಿವುದು ವಿಪ್ರ ಕೇಳೆಂದ

ಗೀತೆಯು ಅಸುರೀ ಸಂಪತ್ತಿನಲ್ಲಿ ಕ್ರೋಧಗುಣವನ್ನು ಹೇಳಿದೆ. ಕೋಪಿ ಭಕ್ತನಾಗಲು ಸಾಧ್ಯವಿಲ್ಲ. ಆದ್ದರಿಂದಲೇ «ಕೋಪಿ ಮಜ್ಜನ ಕ್ಕೆರೆದರೆ ರಕ್ತಧಾರೆ" ಎಂದಿದ್ದಾರೆ ವಚನಕಾರರು. ಮತ್ತೊಬ್ಬ ವಚನಕಾರ "ರೋಷವಿಲ್ಲದಿಪ್ಪುದೇ ಜಪ" ಎನ್ನುತ್ತಾನೆ.

ಕ್ರೋಧದ ದುಷ್ಪರಿಣಾಮಗಳು

ಕ್ರೋಧದ ದುಷ್ಪರಿಣಾಮಗಳು ಅನೇಕವಾಗಿವೆ. ಶ್ರಾವಕಾ ಚಾರದಲ್ಲಿ ವಿವರವಾಗಿ ನಿರೂಪಿಸಿದೆ. ಅವುಗಳನ್ನು ಹೀಗೆ ಸಂಗ್ರಹಿಸ ಬಹುದು.

1. ಗುಣನಾಶ : ಕ್ರೋಧದಿಂದ ಆತ್ಮನಲ್ಲಿ ನಿರಂತರವಾಸ ಮಾಡುವ ಸಂತೋಷ, ಸಂಯಮ, ನಿರಾಕುಲತೆ ಮೊದಲಾದ ಗುಣ ಗಳು ನಾಶವಾಗುತ್ತವೆ.

2. ಅಪಕೀರ್ತಿಲಾಭ : ಅದರಿಂದ ಅವನಿಗೆ ಜಗತ್ತಿನಲ್ಲಿ ಅಪ ಕೀರ್ತಿ ಬರುತ್ತದೆ.

3. ವಿವೇಕನಾಶ : ಸಿಟ್ಟಿನಿಂದ ಅವನಲ್ಲಿ ಕಾರ್ಯಾಕಾರ್ಯದ ವಿಚಾರವು ನಿಲ್ಲುವುದಿಲ್ಲ. ಧರ್ಮಾಧರ್ಮದ ವಿಚಾರವೂ ಉಳಿಯು ವುದಿಲ್ಲ.

4. ತ್ರಿಕರಣ ಪರಾಧೀನತೆ : ಕೋಪಿಗೆ ತನ್ನ ಮನ–ವಚನ– ಕಾಯಗಳ ಕ್ರಿಯೆಗಳನ್ನು ಸ್ವಾಧೀನವಿಟ್ಟುಕೊಳ್ಳುವ ಸಾಮರ್ಥ್ಯವು ಇರುವುದಿಲ್ಲ.

5. ಪ್ರೇಮ ಹಾನಿ : ಅನೇಕ ದಿನಗಳ ಪ್ರೇಮ ಸಂಬಂಧವು ಇದ್ದರೂ ಸಹ ಅದನ್ನು ಒಂದು ಕ್ಷಣದಲ್ಲಿ ಇಲ್ಲದಂತೆ ಮಾಡಿಬಿಡುತ್ತದೆ.

6. ವೈರ ಲಾಭ : ಕ್ರೋಧಿ ಎಲ್ಲರಿಗೂ ದೊಡ್ಡ ವೈರಿಯಾಗಿ ಬಿಡುತ್ತಾನೆ.

7. ವಾಕ್‌ಶುದ್ಧಿ ನಷ್ಟ : ಅವನಿಗೆ ಸತ್ಯಾಸತ್ಯ ತಿಳಿದು ಭಾಷಣ ಮಾಡುವ ವಿಚಾರವು ಉಳಿಯುವುದಿಲ್ಲ.

8. ದುರ್ಭಾಷಾಗಳಿಕೆ : ಅವನು ನೀಚ ಜನರಿಗೂ ಸಹ ಶೋಭಿಸದಂಥ ಭಾಷೆಯನ್ನು ತನ್ನ ಮುಖದಿಂದ ಮಾತನಾಡಲಿಕ್ಕೆ ಹತ್ತುವನು.

9. ಹತ್ಯಾ ಪರಂಪರೆ : ಅವನು ರಾಗದ ಆವೇಶದಲ್ಲಿ ತನ್ನ ತಂದೆ, ಅಣ್ಣ, ಮಗ, ಹೆಂಡತಿ, ಒಡೆಯ, ಸೇವಕ ಮತ್ತು ಪ್ರತ್ಯಕ್ಷ ಜನ್ಮವಿತ್ತ ತಾಯಿಯನ್ನು ಸಹ ಕೊಲ್ಲಲಿಕ್ಕೆ ಸಿದ್ಧನಾಗುತ್ತಾನೆ.

10. ಆತ್ಮಹತ್ಯೆ : ಇಷ್ಟೇ ಅಲ್ಲ ಅವನು ಸ್ವತಃ ಬಾವಿಯಲ್ಲಿ ಹಾರಿ ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತಾನೆ.

11. ಆತ್ಮಿಕಗುಣನಾಶ : ಜ್ಞಾನ – ದರ್ಶನಾದಿ ಆತ್ಮಿಕ ಗುಣಗಳ ಘಾತವಾಗುತ್ತದ.

12. ತಪೋಭಂಗ : ಕ್ರೋಧಕ್ಕೆ ವಶವಾಗುವುದರಿಂದ ಮಹಾನ್ ತಪಸ್ಸಿಗಳೂ ದಿಗಂಬರ ಮುನಿಗಳೂ ಸಹ ಧರ್ಮಭ್ರಷ್ಟ ರಾಗಿ ನರಕಕ್ಕೆ ಹೋದುಂಟು.

13. ನಿರ್ದಯಿಗುಣ ; ಸಿಟ್ಟನಿಂದ ಪಾಪಬಂಧಿತನಾಗುತ್ತಾನೆ. ಬುದ್ಧಿಭ್ರಷ್ಟನಾಗಿ ನಿರ್ದಯ ಹೃದಯಿ ಆಗುತ್ತಾನೆ.

14. ಕೃತಘ್ನಭಾವ : ಪರೋಪಕಾರವನ್ನು ಮರೆತು ಕೃತಘ್ನತೆ ಹೊಂದುತ್ತಾನೆ.

ಕೋಪದಿಂದ ಆಗುವ ಅನಾಹುತಗಳನ್ನು ಕುಮಾರವ್ಯಾಸನು ವಿದುರ ನೀತಿಯಲ್ಲಿ ಸುಂದರವಾಗಿ ಮತ್ತು ಸಂಕ್ಷಿಪ್ತವಾಗಿ ನಿರೂಪಿಸಿದ್ದಾನೆ.

ಕೋಪವೆಂಬುದನರ್ಥಸಾಧನ
ಕೋಪವೇ ಸಂಸಾರ ಬಂಧನ
ಕೋಪದಿಂದಿಹಪರದ ಸುಕೃತವು ಲಯವನೈದುವುದು
ಕೋಪವನು ವರ್ಜಿಸಲು ಬೇಹುದು
ಕೋಪವುಳ್ಳವನಾವನಾಗಲಿ
ಕಾಪುರುಷನಿಹಪರಕೆ ಚಿತ್ತೈಸೆಂದನಾ ವಿದುರ

(ಉದ್ಯೋಗಪರ್ವ 3–113)

ಭಕ್ತಿ ಭಂಡಾರಿ ಬಸವಣ್ಣನವರು ಕೋಪದಿಂದ ಅನ್ಯರಿಗಲ್ಲ, ತನಗೇ ಕೇಡಾಗುತ್ತದೆ ಎಂದು ಸ್ಪಷ್ಟವಾಗಿ ಸಾರಿದ್ದಾರೆ. ಆದ್ದರಿಂದ ಕೋಪಿಯಾದವನು ಯೋಚಿಸಬೇಕಾದ ವಿಷಯವೆಂದೂ ಸೂಚಿಸಿದ್ದಾರೆ. ಆ ವಚನ ಹೀಗಿದೆ :

ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ ?
ಅವರಿಗಾದಡೇನು ? ತನಗಾದಡೇನು ?
ತನುವಿನ ಕೋಪ ತನ್ನ ಅರಿವಿನ ಕೇಡು
ಮನೆಯೊಳಗಣ ಕಿಚ್ಚು ಮನೆಯ ಸುಡುವುದಲ್ಲದೆ
ನೆರೆಮನೆ ಸುಡುವುದೇ ? ಕೂಡಲ ಸಂಗಮದೇವಾ

ಕ್ರೋಧದ ಪರಿಣಾಮಗಳನ್ನು ಚೆನ್ನಾಗಿ ತಿಳಿಯಬೇಕಾದರೆ ಇತಿಹಾಸ, ಪುರಾಣಗಳಲ್ಲಿ ಕಂಡುಬರುವ ಅನೇಕ ಕ್ರೋಧ ಪುರುಷರ ಕತೆಗಳನ್ನು ಗಮನಿಸಬೇಕು. ಇಂಥ ಕ್ರೋಧಪುರುಷರ ಕಥೆಗಳನ್ನು

ಎಲ್ಲ ಭಾಷೆಗಳಲ್ಲೂ ಧಾರ್ಮಿಕ ಗ್ರಂಥಗಳಲ್ಲೂ ಕಾಣಬಹುದು. ಉದಾಹರಣೆ ಮಹಾಭಾರತದಲ್ಲಿ ಅಶ್ವತ್ಥಾಮನ್ ಕಥೆ, ಜಮದಗ್ನಿ ಕಥೆ, ವಿಶ್ವಾಮಿತ್ರನ ಕಥೆ, ದುರ್ಯೋಧನನ ಕಥೆ, ನಾಳಿಜಂಘನ ಕ್ರೋಧದ ಮುನಿಕಥೆ ದೂರ್ವಾಸಭಂಗದ ಕಥೆ, ಇನ್ನೂ ಇತರ ಕಥೆಗಳು ಕ್ರೋಧದ ಪರಿಣಾಮಕಾರಿಯಾಗಿ ಚಿತ್ರಿಸುತ್ತವೆ. ಜೈನ ಸಾಹಿತ್ಯದಲ್ಲಿ ದ್ವೀಪಾಯನ ಮುನಿ ಕ್ರೋಧದ ದೆಸೆಯಿಂದ ಸ್ವರ್ಗಸಮಾನವಾದ ದ್ವಾರಾವತಿಯನ್ನು ಸುಟ್ಟು ಭಸ್ಮಮಾಡಿದ ಕಥೆ ಪ್ರಸಿದ್ಧವಾಗಿದೆ.

ಕ್ರೋಧವನ್ನು ಗೆಲ್ಲುವ ಬಗೆ

ಕ್ರೋಧ ಬರುವುದು ಅಸಹಜವಲ್ಲ, ಅಸಂಭವವಲ್ಲ. ಬಂದ ಕ್ರೋಧವನ್ನು ನಿರೋಧಿಸುವುದು, ಕ್ರೋಧವುಂಟಾಗದಂತೆ ಸ್ವಭಾವವನ್ನು ತಿದ್ದಿಕೊಳ್ಳುವುದು, ಬಲು ದೊಡ್ಡ ಸಾಹಸ. ಸಾಮಾನ್ಯರಿಗೆ ಬಲು ಕಷ್ಟವಾದ ಕಾರ್ಯ ಇದು. ಆದ್ದರಿಂದಲೇ ಕ್ರೋಧರಹಿತ ವ್ಯಕ್ತಿ ಮಹಾತ್ಮನಿಗೆ ಸಮ. ಕ್ರೋಧ ಮಾನಸಿಕ ಸ್ವಭಾವವೂ ಹೌದು ; ದೈಹಿಕ ಕ್ರಿಯೆಯೂ ಹೌದು. ವಚನದ ಅಂಗವೂ ಹೌದು. ಆದ್ದರಿಂದ ತ್ರಿಕರಣಪೂರ್ವಕವಾಗಿ ಕ್ರೋಧನಾಶಕ್ಕೆ ಯತ್ನಿಸಬೇಕು. ಕ್ರೋಧನಾಶ ತಕ್ಷಣದಲ್ಲಿ ಆಗುವ ಕೆಲಸವಲ್ಲ. ನಾಳೆಯಿಂದ ಕೋಪ ಬಿಡ್ತೀನಿ ಎಂದು ಠರಾವು ಮಂಡಿಸುವುದರಿಂದ ಸಾಧ್ಯವಿಲ್ಲ. ಯಾರೋ ಹೇಳಿದರಂತೆ, "ಏನು ರಾಯರೇ ಇತ್ತೀಚೆಗೆ ಕೋಪಮಾಡಿಕೊಳ್ಳೋಲ್ಲಾ ನೀವು, ಆದರೆ ಮೊನ್ನೆ ಮಾಡಿಕೊಂಡ ಹಾಗಿತ್ತು" ಎಂದರೆ ತಕ್ಷಣ ರಾಯರು ಕ್ರೋಧದಿಂದ ಯಾರ್ರೀ ಹೇಳಿದ್ದು ? ಅಂತ ರೇಗಿದರಂತೆ. ಹಾಗೆ ತಕ್ಷಣ ಕೋಪ ತಲೆ ಹಾಕುತ್ತದೆ. ಕೋಪವನ್ನು ತಡೆಗಟ್ಟಲು ನಿರಂತರ ಎಚ್ಚರ ಸತತವಾಗಿ ಕ್ಷಮಾಚಿಂತನೆ ಅಗತ್ಯ. ಕೋಪ ತನಗೆ ಬಂದಾಗ ಅಥವಾ ಅನ್ಯರು ಬರಿಸಿದಾಗ

ಅದು ಹಿಂಸಾರೂಪಕ್ಕೆ ತಿರುಗಿದಾಗ ಯಾವ ರೀತಿ ಶಾಂತವಾಗಿ ಆತ್ಮ ದೃಷ್ಟಿಯಿಂದ, ಧರ್ಮದ ಹಿನ್ನೆಲೆಯಲ್ಲಿ ಚಿಂತಿಸಿ, ಕೋಪವನ್ನು ತಡೆಯ ಬೇಕೆಂದು ಜೈನ ಧಾರ್ಮಿಕ ಗ್ರಂಥಗಳಲ್ಲಿ ವಿಶದವಾಗಿ ಹೇಳಿದೆ. ಇಲ್ಲಿ ಆ ಬಗ್ಗೆ ಕೆಲವು ಸಂಗತಿಗಳನ್ನು ಪ್ರಸ್ತಾಪಿಸಿದೆ.

ಸುವಚನಗಳನ್ನು ಕೇಳಿದಾಗ ಸಂತೋಷವಾಗುತ್ತದೆ. ಆದರೆ ದುರ್ವಚನಗಳನ್ನು ಕೇಳಿದಾಗ ದುಃಖವುಂಟಾಗುತ್ತದೆ. ಆಗ ಆತ್ಮ ನಿರೀಕ್ಷಣೆಗೆ ತೊಡಗಬೇಕು ಎಂದರೆ ತನ್ನ ಬಗ್ಗೆ ತಾನು ಹೀಗೆ ಚಿಂತಿಸ ಬೇಕು.

"ಇವರು ನನ್ನನ್ನು ಅವಾಚ್ಯ ಶಬ್ದಗಳಿಂದ ಏಕೆ ನಿಂದಿಸುತ್ತಿದ್ದಾರೆ? ಹಿಂದೊಮ್ಮೆ ನಾನೆಲ್ಲೋ ಬೈದು ಅವರ ಅಂತಃಕರಣವನ್ನು ನೋಯಿಸಿರಬೇಕು. ಆದ್ದರಿಂದ ಈಗ ಅವರು ಬೈಯುತ್ತಿರಬಹುದು. ಇದರಲ್ಲಿ ತಪ್ಪೇನಿಲ್ಲ ನಾನು ಸಹನಶೀಲನಾಗಬೇಕು ; ಕ್ರೋಧಿಯಾಗ ಬಾರದು.

ಅಥವಾ

ಇವರು ತೀವ್ರವಾಗಿ ಬೈಯುತ್ತಿರುವುದನ್ನು ಕಂಡರೆ ನಾನು ಅತಿ ಘೋರವಾದ ರೀತಿಯಲ್ಲಿ ಇವರ ಮನ ನೋಯಿಸಿರಬೇಕು. ಹಾಗೆ ನೋಡಿದರೆ ನನಗೆ ಇವರ ಕಠಿಣ ಬೈಗುಳಗಳಿಗಿಂತ ಇನ್ನೂ ಹೆಚ್ಚಿನ ಘೋರ ಶಿಕ್ಷೆ ಉಂಟಾಗಬೇಕು. ಆದ್ದರಿಂದ ಉಗ್ರ ಅಪರಾಧಿಗೆ ಇದು ಸೌಮ್ಯಶಿಕ್ಷೆ ಆಗಿದೆ ಎಂದು ಸಮಾಧಾನ ತಂದುಕೊಂಡು ಸಹನತೆಯಿಂದಿರಬೇಕು.

ಅಥವಾ

ಅವನು ಬೈಯುತ್ತಿರುವುದಕ್ಕೆ ಕಾರಣವಿಲ್ಲ. ನಾನು ನಿರಪರಾಧಿ ಎಂದೆನ್ನಿಸಿದಾಗ ಅವನು ಯಾವುದೋ ರಾಗ – ದ್ವೇಷದ ಆವೇಶದಿಂದ 'ಅತ್ತೆಮೇಲೆ ಕೋಪ ಕೊತ್ತಿಮೇಲೆ' ಎಂಬಂತೆ ನನ್ನ

ಮೇಲೆ ಎಗರಾಡುತ್ತಿದ್ದಾನೆ. ಅವನಿಗೆ ನರಕಶಿಕ್ಷೆ ಕಾದಿರುತ್ತದೆ. ಆದ್ದರಿಂದ ನಾನು ಸಿಟ್ಟುಮಾಡಿ ಅವನಂತೆ ಪಾಪಿಯಾಗುವುದು ಬೇಡ. ನಾನು ಪ್ರತಿಯಾಗಿ ಆಡಿದರೆ ಅವನಿಗೆ ಕೋಪ ಹೆಚ್ಚಿ ಅಂದು ಸುಮ್ಮನಾಗುತ್ತಿದ್ದವನಿಗೆ ರೊಚ್ಚು ಉಂಟುಮಾಡಿ ಅಧಿಕ ಕ್ರೋಧಕ್ಕೂ ಹಾನಿಗೂ ನಾನು ಅನುಮೋದನ ಮತ್ತು ಕಾರಿತ ಕರ್ಮಗಳನ್ನು ಎಸಗಿದವನಾಗುತ್ತೇನೆ. ಅದಕ್ಕಾಗಿ ಸುಮ್ಮನಿರುವೆ' ಹೀಗೆಂದು ಚಿಂತಿಸಬೇಕು.

ಅಥವಾ

ಕ್ರೋಧಗೊಂಡವನು ಅತಿ ಕ್ರೋಧಿಯಾಗಿರದಿದ್ದರೆ ಅಥವಾ ಸಾತ್ವಿಕನಾಗಿ ಯಾವುದೋ ನಿಮಿತ್ತದಿಂದ ಕ್ರೋಧಗೊಂಡಿದ್ದರೆ ಅವನ ಬಳಿ ಹೋಗಿ ತನಗೆ ಗೊತ್ತಿಲ್ಲದ ಅಥವಾ ಗೊತ್ತಾದ ಕಾರಣದಿಂದ ತಪ್ಪಾಗಿ ಆತನಿಗೆ ದುಃಖವುಂಟು ಮಾಡಿದ್ದಕ್ಕೆ ಕ್ಷಮಾಪಣೆ ಕೇಳಬೇಕು. "ತಿಳಿಯದೆ ತಪ್ಪು ಮಾಡಿದೆ. ಕೋಪ ಬರಿಸಿದೆ. ನನ್ನಿಂದ ಇಂಥ ಕೆಟ್ಟ ಕಾರ್ಯ ಮುಂದೆ ಆಗಲಾರದು ಈಗ ಕ್ಷಮಿಸಿ ಎಂದು ಪ್ರಾರ್ಥಿಸಿಕೊಳ್ಳಬೇಕು." ಆಗ ಆತ ಕ್ಷಮಿಸಲು ಮತ್ತು ಶಾಂತನಾಗಲು ಸಾಧ್ಯವಿದೆ. ಆತನು ಅತಿ ಕ್ರೋಧದಿಂದ ಇದ್ದಾಗ ಆವೇಶದಲ್ಲಿ ವಿವೇಕಹೀನನಾದಾಗ ತಕ್ಷಣ ಕ್ಷಮೆ ಕೇಳಲು ಹೋಗಬಾರದು. ಕಾಲಾಂತರದಲ್ಲಿ ಕ್ರೋಧದ ಪ್ರಮಾಣ ತಗ್ಗಿದಾಗ ಹೋಗಿ ಕ್ಷಮೆಯಾಚಿಸಬೇಕು. ಆಗ ಆತನ ಮನದಲ್ಲಿರುವ ದ್ವೇಷ ಭಾವನೆ ತೊಲಗಲು ಶಕ್ಯ.

ತಪ್ಪು ಮಾಡಿಲ್ಲದ ಮನುಷ್ಯ ನಾನು ಎಂದು ಒಬ್ಬನಿಗೆ ಖಾತ್ರಿಯಾಗಿ ಅನ್ನಿಸಿದಾಗ ಆತ ಹೇಗೆ ಕ್ಷಮೆ ಕೇಳಲು ಸಾಧ್ಯ ? ತಾನು ತಪ್ಪಿತಸ್ಥ ಎಂದು ಒಪ್ಪಿಕೊಳ್ಳಲು ಹೇಗೆ ಶಕ್ಯ ? ಅಂಥ ಸಂದರ್ಭದಲ್ಲಿ ನಿರ್ದೋಷಿಯಾದ ವ್ಯಕ್ತಿ ಹೀಗೆ ಚಿಂತಿಸಬೇಕು : "ಆತನ ಅವಾಚ್ಯ

ನುಡಿಗಳು ದೋಷಾರೋಪಣೆ, ನಿಂದೆಗಳು ನಮಗೆ ಸಲ್ಲತಕ್ಕದ್ದಲ್ಲ" ಅವನು ನಮ್ಮ ಹೆಸರು ಮತ್ತು ಕುಲಗಳನ್ನು ಎತ್ತಿ ಉಚ್ಚರಿಸಿ ಬೈಯುತ್ತಿದ್ದಾನೆ. ಆದರೆ ಹೆಸರು ಮತ್ತು ಕುಲಗಳು ನನ್ನ ನಿಜವಾದ ಸ್ವರೂಪವಲ್ಲ. ನನ್ನ ನಿಜವಾದ ಸ್ವರೂಪವು ಜ್ಞಾನವಾಗಿದೆ. "ಅವನು ಯಾರಿಗೆ ಬೈಯುತ್ತಿದ್ದಾನೋ ಆ ದೇಹ, ಆ ಜೀವ ನಾನಲ್ಲ, ನನ್ನ, ಆತ್ಮಕ್ಕೆ ಹೇಗೆ ಶಂಖಕ್ಕೆ ಮಸಿ ತಾಗದೋ, ಕಮಲಕ್ಕೆ ಕೆಸರು ಸೋಂಕದೋ ಹಾಗೆ ತಾಗದು. ನನ್ನಆತ್ಮವು ಪರಮಾನಂದ ಸ್ತೋತ್ರದಲ್ಲಿ ಹೇಳಿದ ಹಾಗೆ "ನ ಕೋಪಂ ನ ಮಾನಂ ನ ಮಾಯಾ ನ ಲೋಭಂ । ಚಿದಾನಂದ ರೂಪಂ । " ಆಗಿದೆ. ಆದ್ದರಿಂದ ಈಗ ನಾನು ಕೋಪಗೊಳ್ಳದೆ ಕ್ಷಮಾಗುಣಧಾರಿಯಾಗಬೇಕು.

ಇಷ್ಟಲ್ಲದೆ ಬೈಗಳು ನಮ್ಮನ್ನು ಶುದ್ಧೀಕರಿಸುತ್ತವೆ ಎಂದು ತಿಳಿಯುವುದು ಒಳ್ಳೆಯದು. ನಾವು ಎಷ್ಟೋ ಭವಗಳನ್ನು ಹೊಂದಿ ಎಷ್ಟೆಷ್ಟೋ ಪಾಪಕೃತ್ಯಗಳನ್ನು ಮಾಡಿರಬೇಕು ಅವುಗಳನ್ನು ಕುರಿತು ಅನ್ನುತ್ತಿದ್ದಾನೆ. ಒಂದು ವೇಳೆ ಅದು ನಿಜವಾಗಿದ್ದರೆ ದೇವರು ನನ್ನನ್ನು ಕ್ಷಮಿಸಲಿ ಎಂದು ಭಾವಿಸಬೇಕು.

ಆದ್ದರಿಂದ ನಿಂದಕರಿಂದ ನಾವು ಒಂದು ವೇಳೆ ದೋಷಿಗಳಲ್ಲದಿದ್ದರೂ ನಮ್ಮ ಪಾಪನಾಶ ಆಗುತ್ತದೆ ಅಥವಾ ಅವರ ಪಾಪಕರ್ಮ ಕಳೆದುಕೊಳ್ಳಲು ಅವಕಾಶ ಕೊಡುತ್ತಿದ್ದೇನೆ ಎಂದು ಭಾವಿಸಿದರೆ ಒಳ್ಳೆಯದು. ಈ ದೃಷ್ಟಿಯಿಂದಲೇ ಬಹುಶಃ ಅನೇಕರು ನಿಂದಕರನ್ನು ಹೊಗಳಿದ್ದಾರೆ. ನಿಂದೆಗಳನ್ನು ಸ್ವಾಗತಿಸಿದ್ದಾರೆ.

ದಾಸ ಸಾಹಿತ್ಯದಲ್ಲಿ ಈ ಬಗ್ಗೆ ಅನೇಕ ನಿದರ್ಶನಗಳನ್ನು ಕಾಣಬಹುದು. ಒಂದು ಕಡೆ ದಾಸರು " ನಿಂದಕರಿರಬೇಕು. ಹಂದಿ

ಯಿದ್ದರೆ ಕೇರಿ ಹ್ಯಾಂಗೆ ಶುದ್ಧೀಯೋ ಹಾಂಗೆ, ಅಂದಂದು ಮಾಡಿದ ಪಾಪವೆಂಬ ಮಲತಿಂದು ಪೋಗುವ ನಿಂದಕರಿರಬೇಕು" ಎಂದಿದ್ದಾರೆ.

ಬೈಯಿರೋ ಬೈಯಿರೋ ಮನಮುಟ್ಟಿ ಬೈಯಿರೋ
ಚೆನ್ನಾಗಿ ಬೈದೆನ್ನ ಧನ್ಯಮಾಡಿರೋ । ಅವರು ಇವರು
ಬೈದರೆಂಬೊ ಹೀನಬುದ್ಧಿ ನನಗಿಲ್ಲ । ನಾ ಮಾಡಿದಷ್ಟು
ಪಾಪವನ್ನು ಅಳೆದು ಹಾಕಿ ಹಂಚಿಕೊಳ್ಳಿರೋ" ಎಂದಿದ್ದಾರೆ.

ಬೈದಾಗ ಅಪಮಾನವಾಗುವುದಿಲ್ಲವೇ ? ಎಂದರೆ ಅದಕ್ಕೂ ದಾಸರು ಉತ್ತರವಿತ್ತಿದ್ದಾರೆ. ಅಪಮಾನವಾದರೆ ಒಳಿತು ಏಕೆಂದರೆ 'ಮಾನದಿಂದ ಅಭಿಮಾನ ಹುಟ್ಟುವುದು ಮಾನದಿಂದ ತಪ ಹಾನಿಯಾಗುವುದು' ಎಂದಿದ್ದಾರೆ.

ವಚನಕಾರರಲ್ಲೂ ಈ ದೃಷ್ಟಿಯನ್ನು ಕಾಣಬಹುದು.

ಹೊಯಿದವರೆನ್ನ ಹೊರೆದವರೆಂಬೆನು
ಬಯಿದವರೆನ್ನ ಬಂಧುಗಳೆಂಬೆನು
ನಿಂದಿಸದವರೆನ್ನ ತಾಯಿತಂದೆಗಳೆಂಬೆನು
ಆಳಿಗೊಂಡವರೆನ ಆಳ್ವರೆಂಬೆ
ಜರಿದವರೆನ್ನ ಜನ್ಮಬಂಧುಗಳೆಂಬೆ
ಕೊಂಡಾಡಿದವರೆನ್ನ ಹೊನ್ನ ಶೂಲದಲಿಕ್ಕಿದವರು
ಕೂಡಲ ಸಂಗಮ ದೇವಾ

ಎಡದ ಪಾದದಲೊದ್ದರೆ ಬಲದ ಪಾದಹಿಡಿವೆ
ಬಲದ ಪಾದದಲೊದ್ದರೆ ಎಡದ ಪಾದಹಿಡಿವೆ
ತ್ರಾಹಿ ತ್ರಾಹಿ ! ತಪ್ಪೆನ್ನದು ಕ್ಷಮೆ ನಿಮ್ಮದು........

ಎದುರು ಬೈದಾಗ ಸೆರಿ ಸಹನೆ ತಾಳಬೇಕು. ಹಿಂದೆ ಬೈದಾಗ ಏನು ಮಾಡಬೇಕು ? ಆ ಬಗ್ಗೆ ಇನ್ನೊಂದು ಕಡೆ ಬಸವಣ್ಣನವರು ಸುಂದರವಾಗಿ ಹೇಳಿದ್ದಾರೆ.

ಕಾಣದ ಠಾವಿಸಲ್ಲಿ ಜರಿದರೆಂದರೆ । ಕೇಳಿ ಪರಿಣಾವಿಸ
ಬೇಕು । ಅದೇನು ಕಾರಣ ? ಕೊಳ್ಳದೆ ಕೊಡದೆ
ಅವರಿಗೆ ಸಂತೋಷವಹುದಾಗಿ । ಎನ್ನಮನದ
ತದ್ವೇಷವಳಿದು । ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು
ಕೂಡಲ ಸಂಗಮದೇವಾ........

ಆದ್ದರಿಂದ 'ತಲ್ಲಣಿಸದಿರು ಮನವೇ ತಾಳು ಕಂಡ್ಯಾ' ಎಂದು ಭಾವಿಸುವುದು ಒಳ್ಳಿತು. ರತ್ನಾಕರನ ಈ ಪದ್ಯಗಳನ್ನು ಮನನ ಮಾಡಿದರೆ ಈ ಬಗ್ಗೆ ಸ್ಪಷ್ಟ ಚಿತ್ರಣ ಆಗುತ್ತದೆ. ಕ್ರೋಧನಾಶಕ್ಕೆ ವ್ಯಕ್ತಿ ಸ್ವ-ಪರವೇದಿಯಾಗಬೇಕು. ಹಾಗೆಂದರೇನು ? ರತ್ನಾಕರ ಅದಕ್ಕೆ ಉತ್ತರಿಸುತ್ತಾನೆ.

ಅವನೊಳಾಡೊಡಂ ಕುಮತಿ ಕಾಳ್ಕುಡಿ, ಕೀಳ್ನಡೆ
ತೋರುತಿರ್ದೊಡೆ ಆ ಜೀವನೆ ನೈಜ ಎನ್ನದೆ ತದೀಯ
ಕಷಾಯಗುಣಂಗಳೆಂದವಂ ಭಾವಿಸಿ – ಆ ಕಷಾಯಿತತಿ
ತನ್ನೊಳಗಾಗದವೊಲ್ ನಿಜಾತ್ಮನಂ ಕಾವುತಂ ಇರ್ಪವಂ
ಸ್ವ–ಪರ–ವೇದಿಯಲಾ ಅಪರಾಜಿತೇಶ್ವರಾ ।

ಮತ್ತು "ಕೋಪವಿಡಿದಿರ್ದ ಕಷಾಯದಿಂ ದೂರನಾಂತ ಶಾಂತನೆ ಸಕಲಾತ್ಮಕ ರಕ್ಷಕಂ" ಎಂದು ತಿಳಿಯಬೇಕು.

ಸಮಯೋಚಿತ ವಿವೇಕವು ಕ್ರೋಧವನ್ನು ಗೆಲ್ಲಲು ಅತ್ಯವಶ್ಯಕ. ವ್ಯಕ್ತಿ ಕ್ರೋಧಾವೇಶನಾಗಲು ಹೊರಟಾಗಲೇ ಕ್ರೋಧವು ಇನ್ನೂ

ಹತೋಟಿಯಲ್ಲಿರುವಾಗಲೇ ವಿವೇಕಪೂರ್ಣನಾಗಿ ಚಿಂತಿಸಿದರೆ ಕ್ರೋಧವನ್ನು ತಡೆಗಟ್ಟಲು ಸಾಧ್ಯ.

ಕೋಪ ಬಂದಾಗ ವಿವೇಕ ತಂದುಕೊಂಡ ಪ್ರಕರಣಗಳು ಅನೇಕವಿವೆ. ಜನ್ನನು ಯಶೋಧರ ಚರಿತೆಯಲ್ಲಿ ಅಂತಹುದೊಂದು ನಿದರ್ಶನವಿದೆ. ದೊರೆ ಯಶೋಧರ ಅಮೃತಮತಿಯನ್ನು ಅಷ್ಟಾವಂಕನ ಸಂಗದಲ್ಲಿ ಕಂಡಾಗ ಕೊಲ್ಲಲು ಯತ್ನಿಸುತ್ತಾನೆ. ಆಗ ಕೋಪಾವಿಷ್ಟನಾಗುತ್ತಾನೆ. "ಆಗಳ್ ಬಾಳ್ ನಿಮಿರ್ದುದು । ತೋಳ್ ತೂಗಿದುದು । ಮನಂ ಕನಲ್ದುದು ಇರ್ವರುಂ ಎರಟ್ ಭಾಗಂ ಮಾಡಲ್ ಧೃತಿ ಬಂದು" ನಿಂತನು. ಆದರೆ ಕ್ಷಣಕಾಲ ಚಿಂತಿಸಿದನು. "ಆಗಳ್ 'ಮಾಣ್' ಎಂಬ ತೆಱದೆ ಪೇಸಿದನ್ ಅರಸಂ" ಏಕೆಂದರೆ ಅವನಲ್ಲಿ ಈ ರೀತಿ ವಿವೇಕ ಮೂಡಿತು.

"ಪರನೃಪರನಲ್ಲದೀ ಪುಳು
ಕರನಿರಿವುದೆ ? ಮದ್ ಭುಜಾಸಿಯಿದು ಕಯ್ಯಿಕ್ಕಲ್
ಕರಿಕಟಿಗಲ್ಲದಿರುಂಪೆಗೆ
ಪರಿವುದೇ ಹರಿ ಕರಿಯನಲ್ಲದಿರಿವುದೆ ನರಿಯಂ.

[II – 35, 36]

ಸಮಯೋಚಿತ ವಿವೇಕಕ್ಕೆ ಇದು ಶ್ರೇಷ್ಠ ನಿದರ್ಶನ. ಒಟ್ಟಿನಲ್ಲಿ ಕ್ರೋಧವನ್ನು ತಡೆಗಟ್ಟಲು ಆತ್ಮವಿಮರ್ಶೆ, ಸಹನಾಶಕ್ತಿ, ಕ್ಷಮಿಸುವ ಉದಾರತೆ, ಪರರ ಅಜ್ಞಾನದ ಬಗ್ಗೆ ಮರುಕಭಾವ, ಸಮಯೋಚಿತ ವರ್ತನೆ, ದೈಹಿಕ ಬಾಧೆ ತಾಳುವ ದಾರ್ಢ್ಯ, ಶಾಂತ ಮನೋಭಾವ, ಧೃತಿ, ನಿಸ್ವಾರ್ಥತೆ ಮೊದಲಾದ ಗುಣಗಳು ಆತ್ಯಗತ್ಯವೆಂಬುದು ಖಚಿತ ಸಂಗತಿಯಾಗಿದೆ.

ಕ್ರೋಧ ನಾಶವೇ ಕ್ಷಮಾಗುಣವಾಗಿದೆ. ಆದ್ದರಿಂದ ಕ್ಷಮಾ ವಿಚಾರದಲ್ಲಿ ಕ್ರೋಧ - ನಾಶದ ಪ್ರಸ್ತಾಪವು ಬರುತ್ತದೆ.

ಹೀಗೆ ಕ್ಷಮಾಗುಣದ ಸದ್ಗುಣ ಲಕ್ಷಣಗಳನ್ನು ಪಡೆಯಲು ಒಂದು ಕಡೆ, ಕ್ರೋಧ ಗುಣದ ದುಷ್ಟ ಲಕ್ಷಣಗಳನ್ನು ತ್ಯಜಿಸಲು ಇನ್ನೊಂದೆಡೆ ನಿರಂತರ ಶ್ರಮಿಸಿ ಗುರಿಮುಟ್ಟಿದವನು ನಿಜವಾದ ದಶಧರ್ಮಿ ಆಗುತ್ತಾನೆ. ಆತ್ಮಜ್ಞಾನಿ ಆಗುತ್ತಾನೆ. ಮೋಕ್ಷಮಾರ್ಗಿ ಆಗುತ್ತಾನೆ. ಈ ಕ್ಷಮಾಗುಣ ಎಷ್ಟರಮಟ್ಟಿಗೆ ಜೀವನದಲ್ಲಿ ವಾಸ್ತವಿಕವಾಗಿ ಅಳವಟ್ಟಿದೆ ಎಂಬುದು ಕ್ಷಮಾಯಾಚನಾ ದಿನದಲ್ಲಿ ಇತರರಿಗೆ ತಿಳಿಯುತ್ತದೆ. ಇದು ಅಗತ್ಯವೂ ಹೌದು ಏಕೆಂದರೆ ಧರ್ಮ ವ್ಯಕ್ತಿಹಿತವನ್ನು ಲೋಕಹಿತವನ್ನು ಎರಡನ್ನು ಒಳಗೊಂಡಿದೆ. ಕ್ಷಮಾಧರ್ಮದಲ್ಲಿ ಈ ಎರಡು ಹಿತಗಳ ಸಾಧನೆ ಆಗುತ್ತದೆ. ಲೋಕದಲ್ಲಿ ಎಲ್ಲರೂ ಕ್ಷಮಾಮೂರ್ತಿಗಳಾಗಲಿ. ಆತ್ಮೋದ್ಧಾರ – ಲೋಕೋದ್ಧಾರವಾಗಲಿ ಸಕಲ ಸನ್ಮಂಗಳಗಳು ಸಮಸ್ತರಿಗೆ ಆಗಿರಲಿ. ಕ್ಷಮಾಧರ್ಮ ಎಲ್ಲೆಡೆ ಪ್ರಸರಿಸಲಿ.

ಕ್ಷಮಾಧರ್ಮದ ಜಯಮಾಲೆ

ಶಿವಪದ ಪದಧಾರೀ ದಾನ ಕಲ್ಯಾಣ ಕಲ್ಪಃ ।
ಸಕಲಜನ ಸುಖಾಬ್ಧಿ ಶ್ರೋತ್ತಮಃ ಕ್ಷಾಂತಿಧರ್ಮಃ ॥
ಭವಜಲನಿಧಿಪೋತಂ ಸತ್ತ್ವಪೋವೃದ್ಧಿಕರ್ತಾ ॥
ಸಭವತು ಭವತಾಂ ಯೋ ಜೈನಧರ್ಮ ಪ್ರಯಾತಃ ॥ ॥ ೧ ॥

ಉತ್ತಮಕ್ಷಾಂತಿಃ ಶುಭವಿಧಿ ಕರ್ತ್ರೀ ।
ಭವಸಾಗರ ಬಹುಸಂಕಟ ಹರ್ತ್ರೀ ॥
ಉತ್ತಮಕ್ಷಾಂತಿಃ ಶಿವಸುಖಧಾತ್ರೀ ।
ಇಂದ್ರ ನರೇಂದ್ರ ಸುಸೇವಿತ ಪಾತ್ರೀ ॥ ॥ ೨ ॥

ಉತ್ತಮಕ್ಷಾಂತಿಃ ಲೋಕಸುಧಾರೀ ।
ಸಜ್ಜನ ಜನದುಃಖ ದುರ್ಗತಿಹಾರೀ ॥
ಉತ್ತಮಕ್ಷಾಂತಿಃ ಸರ್ವಪ್ರಸಿದ್ಧೀ ।
ಯಸ್ಯಾಃ ಆಪ್ರಾಪ್ತಾ ಸಕಲ ಸುಖದ್ಧೀ ॥ ॥ ೩ ॥

ಉತ್ತಮಕ್ಷಾಂತಿಃ ಮುನಿವರ ಪೂಜ್ಯಾ ।
ತಪಸಾಂ ವರ್ಧನ ಪರಮ ಸುಯೋಜ್ಯಾ ॥
ಉತ್ತಮ ಕ್ಷಾಂತಿಃ ಚಾರು ಪವಿತ್ರಾ ।
ಕ್ರೋಧ ಕಠಿಣ ಕ್ರಮ ಮೂಲಲವಿತ್ರಾ ॥ ॥ ೪ ॥

ಉತ್ತಮ ಕ್ಷಾಂತಿಃ ಶುಭಸಂಯಮಧಾರೀ ।
ಬುಧಜನ ಚಿಂತಿತ ಕಾರ್ಯಸುಕಾರೀ ॥
ಉತ್ತಮಕ್ಷಾಂತಿಃ ಸುಧಾತುವಿವೃದ್ಧೀ ।
ಯಶಸೋ ಮೂರ್ತಿಮಾರ್ದವ ಸಿದ್ಧಿಃ ॥ ॥ ೫ ॥

ಉತ್ತಮಕ್ಷಾಂತಿಃ ಕ್ಷಮಾಸುಕರೋತಿ ।
ಅಶಕ್ತ ಜನರಕ್ಷಾಂ ಪ್ರಕರೋತಿ ॥
ಅಶಕ್ತ ಜನ ಬಹುಬಲ ವರ್ಧಕಂ ।
ಸರ್ವೇ ಜೀವಾ ಕ್ಲೇಶವಿಮರ್ದಕಂ ॥ ॥ ೬ ॥

ಉತ್ತಮ ಕ್ಷಾಂತಿಃ ಪುಷ್ಟಿ ಪ್ರದಾತಾ ।
ಸಿಂಹವ್ಯಾಘ್ರ ಕ್ರೋಧ ವಿಜೇತಾ ॥
ಸುಭಕ್ತ ಜನಮನ ಸುಖಸಂಜಾತಾ ।
ಸಶಕ್ತ ಸಜ್ಜನ ಗುಣಸಂಪ್ರೀತಾ ॥ ॥ ೭ ॥

ಕ್ರೋಧಕರೀ ದ್ವೀಪಾಯನಯೋಗೀ ।
ನರಕನಿವಾಸೇ ಕಮಠಸುಭೋಗೀ ॥
ಕ್ಷಮಾಕಾರ್ಯ ಏವಂ ಜ್ಞಾತ್ವಾ ।
ಯೋಗೀ ಶ್ರಾವಕ ಮುಕ್ತಿಂಧ್ಯಾತ್ವಾ ॥ ॥ ೮ ॥

ಕ್ಷಮಾಧರ್ಮಃ ಸದಾಕಾರ್ಯಃ ।
ಶ್ರಾವಕೈಃ ಯೋಗ್ಯಯೋಗಿಭಿಃ ॥
ಸೋಮಸೇನೈಃ ಪರಂಯುಕ್ತ್ಯಾ ।
ದೇವ ದೇವಃ ಸಮರ್ಚಿತಃ ॥

'ವ್ರತಪೂಜಾವಿಧಿ'
ಗ್ರಂಥದಿಂದ

ಆಕರ ಗ್ರಂಥಗಳು

I ಜೈನಸಾಹಿತ್ಯ

1. ರತ್ನಕರಂಡಕಶ್ರಾವಕಾಚಾರ – ಸಂ. ಮಿರ್ಜಿ ಅಣ್ಣಾರಾವ್
2. ಅಮೋಲದಶಧರ್ಮ – ಅನಂತಮತಿಯಮ್ಮ
3. ತತ್ವರತ್ನ ಪ್ರದೀಪಿಕೆ – ಬಾಲಚಂದ್ರದೇವಮುನಿ
4. ಆರು ನೋಂಪಿಯ ಕಥೆಗಳು – ದಿ|| ಎಂ. ನೇಮಿರಾಜಶಾಸ್ತ್ರಿ
5. ಪಾರ್ಶ್ವನಾಥ ಪುರಾಣ ಸಂಗ್ರಹ – ಜಿ. ಪಿ. ರಾಜರತ್ನಂ
6. ಪ್ರಬಂಧ ಪುಂಜ – ಪಂ. ಕೆ. ಭುಜಬಲಿಶಾಸ್ತ್ರಿಗಳು
7. ಆದಿಪುರಾಣಸಂಗ್ರಹ – (ಸಂ) ಎಲ್. ಗುಂಡಪ್ಪ
8. ದಶಲಕ್ಷಣ ಧರ್ಮ ಹಿಂದಿ – ಶ್ರೀ ಗಣೇಶಪ್ರಸಾದ್‌ಜೀ
9. ಜೈನಸಂಸ್ಕೃತಿಯ ಭಾದ್ರಪದಮಾಸದ ವ್ರತಪೂಜಾವಿಧಿ- ಶ್ರೀ ಡಿ ಪದ್ಮನಾಭಶರ್ಮ
10. ರತ್ನಾಕರನ ಮೂರುಶತಕಗಳು – ಸಂ. ಜಿ. ಅಶ್ವತ್ಥನಾರಾಯಣ
11. ಸಮಣ ಸುತ್ತಂ – ಸರ್ವ ಸೇವಾಸಂಘ, ಕಾಶಿ
12. ಮಹಾಪರ್ವ ದಶಲಕ್ಷಣ – ಎಸ್. ಬಿ. ವಸಂತರಾಜಯ್ಯ
13. ಜೈನಧರ್ಮ ಬಾಲಬೋಧೆ – I, II ಭಾಗಗಳು ಶ್ರೀ ಡಿ. ಪದ್ಮನಾಭಶರ್ಮ
14. ಜೈನಸಂಸ್ಕೃತಿಯ ಹಬ್ಬಗಳು – ಎಸ್. ಪಾಟೀಲ
15. ಜೈನಧರ್ಮ – ಮಿರ್ಜಿ ಅಣ್ಣಾರಾಯರು
16. ಜೈನಧರ್ಮ – ಹೀರಾಲಾಲ್ ಜೈನ್

17. ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕಾಣಿಕೆ – ಹೀರಾಲಾಲ್‌ಜೈನ್
18. ಉತ್ತರಪುರಾಣ – ಗುಣಭದ್ರಾಚಾರ್ಯ
19. ಯಶೋಧರ ಚರಿತೆ – ಜನ್ನ
20. ವಿಶ್ವಧರ್ಮದ ದಶಲಕ್ಷಣಗಳು – ವಿದ್ಯಾನಂದಮುನಿ
21. ದಶಲಕ್ಷಣ ಪರ್ವ – ಜಿನಚಂದ್ರಶಾಸ್ತ್ರೀ
22. ಗುರುದೇವ (ಪತ್ರಿಕೆಯ ಕೆಲವು ಸಂಚಿಕೆಗಳು)
23. ತೀರ್ಥಂಕರ್ (ಪತ್ರಿಕೆಯ ಕೆಲವು ಸಂಚಿಕೆಗಳು)
24. ಸನ್ಮತಿ („ „)
25. ವೀರಭಾರತಿ („ „)

II ವೈದಿಕ ಸಾಹಿತ್ಯ

26. ವಾಲ್ಮೀಕಿ ರಾಮಾಯಣ – (ಸಂ) ರಂಗನಾಥಶರ್ಮ
27. ಭಾಗವತ – ಗೋರಖಪುರ ಪ್ರಕಟನೆ
28. ಮಹಾಭಾರತ – „
29. ಅಷ್ಟಾವಕ್ರಗೀತೆ –
30. ವೇದಧರ್ಮ ಭಾಗ 1, 2, – ಶ್ರೀ ಕೃಷ್ಣದತ್ತಭಟ್ಟ
31. ಭಗವದ್ಗೀತೆ – ರಾಮಕೃಷ್ಣಾಶ್ರಮ ಪ್ರಕಟನೆ
32. ವಿಶ್ವಧರ್ಮ ಪ್ರಕಾಶ – ಟಿ. ಎಲ್. ಕೆಂಪಣ್ಣನಾಯಕ
33. ಮನುಸ್ಮೃತಿ – ಚೌಕಾಂಬಾ ಪ್ರಕಟನೆ
34. ವಿಚಾರಸಾಗರ – ಸಾಧುನಿಶ್ಚಲದಾಸ

III ವಚನ ಸಾಹಿತ್ಯ

35. ಬಸವಣ್ಣನವರ ವಚನಗಳು – ಕ. ವಿ. ವಿ. ಪ್ರಕಟನೆ
36. ವಚನಧರ್ಮಸಾರ – ಎಂ. ಆರ್. ಶ್ರೀ

37. ವಚನ ಸಾಹಿತ್ಯ ಸಂಗ್ರಹ – ಸಂ. ಶಿ. ಭೂಸನೂಮಠ

IV ದಾಸ ಸಾಹಿತ್ಯ

38. ಉಪನ್ಯಾಸ ನವರತ್ನಮಾಲಾ – ಶಂಕರರಾವ್ ಸೌಕೂರ
39. ಶ್ರೀ ಜಗನ್ನಾಥದಾಸರು – ಡಾ॥ ಕೆ. ಎಂ. ಕೃಷ್ಣರಾವ್
40. ಹರಿಕಥಾಮೃತಸಾರ – ಜಗನ್ನಾಥದಾಸರು
41. ಕನಕದಾಸರ ಪದಗಳು – ಕಲಮದಾನಿ ಗುರುರಾಯರು
42. ಪುರಂದರದಾಸರ ಕೀರ್ತನೆಗಳು – ಪಾವಂಜೆ ಪ್ರಕಟನೆ

V ಅನ್ಯ ಧರ್ಮ ಗ್ರಂಥಗಳು

43. ತುಕಾರಾಮರ ಅಭಂಗಗಳು - ಭವಾನ್ಸ್ ಪ್ರಕಟನೆ
44. ಇಸ್ಲಾಂ ಧರ್ಮದ ಪರಿಮಳ – ಜಿ. ಪಿ. ರಾಜರತ್ನಂ
45. ಧರ್ಮಪದ - ಚೌಕಾಂಬಾ ಪ್ರಕಟನೆ
46. ಈಸಾಯಿಧರ್ಮ – ಶ್ರೀ ಕೃಷ್ಣದತ್ತಭಟ್ಟ

VI ಸುಭಾಷಿತ ಗ್ರಂಥಗಳು

47. ವಿಚಾರ ಮಂಜರಿ – ವಿನೋಬಾ
48. ನೀತಿವಾಕ್ಯ ಮಂಜರಿ – ಆರ್. ನರಸಿಂಹಾಚಾರ್ಯ
49. ಅಮೃತಬಿಂದುಗಳು – ಕ. ವಿ. ವಿ. ಪ್ರಕಟನೆ
50. ಸೂಕ್ತಿಮಂಜರಿ – ಕ. ಪು ಸೀತಾರಾಮ ಕೆದಿಲಾಯ
51. ನೀತಿಸಾರ – ಬಿಳಿಗಿರಿ ಸುಬ್ಬರಾವ್
52. ಅಷ್ಟ ಪುಷ್ಪಗಳು – ದೇವಾನಂದ ಶಿವಸ್ವಾಮಿ
53. ಜಾಗತಿಕ ಸತ್ಯಗಳು – ವೀರಭದ್ರಪ್ಪ ಸಜ್ಜನಶೆಟ್ಟಿ
54. ಇಂದ್ರಚಾಪ – ಎಸ್. ವಿ. ಪರಮೇಶ್ವರಭಟ್ಟ
55. ಗ್ರಂಥಸ್ಥ ಗಾದೆಗಳು – ಎಚ್. ಎಸ್. ಅಚ್ಚಪ್ಪ

ಇನ್ನೂ ಹಲವಾರು ಗ್ರಂಥಗಳು.

ಅಭೀತಿರಭಯಾದಾಹುಃ, ಆಹಾರಾದ್ಭೋಗವಾನ್ ಭವೇತ್ ।
ಆರೋಗ್ಯಮೌಷಧಾಜ್ಞೇಯಂ, ಶಾಸ್ತ್ರಾತ್ಸ್ಯಾತ್ ಶ್ರುತಕೇವಲೀ ॥

(ರಯಣಸಾರ)

* * * * *

परस्परोपग्रहो जीवानाम्